
ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-06 • ಸಂಚಿಕೆ-11 • ಆಗಸ್ಟ್ 2023



## ಆಯವ್ಯಯ ಮಂಡನೆಯಲ್ಲಿ ಚರಿತ್ರಾರ್ಹ ದಾಖಲೆ ನಿರ್ಮಿಸಿದ
# ಮುಖ್ಯಮಂತ್ರಿಗಳು

Downloaded From:www.kpscvaani.com



ಜುಲೈ 17 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫಾಕ್ಸ್ ಕಾನ್ ಸಿಇಓ ಬ್ರಾಂಡ್ ಚೆಂಗ್ ಅವರೊಂದಿಗೆ ಮಾತುಕತೆ ನಡೆಸಿದರು.
ಈ ಸಂದರ್ಭದಲ್ಲಿ ಸಚಿವಾರಾದ ಎಂ.ಬಿ.ಪಾಟೀಲ್, ಪ್ರಿಯಾಂಕ ಖರ್ಗೆ ಅವರು ಉಪಸ್ಥಿತರಿದ್ದರು.



ಬೆಂಗಳೂರಿನಲ್ಲಿರುವ ಬ್ರಿಟಿಷ್ ಹೈ ಕಮಿಷನ್‌ನ ಡೆಪ್ಯುಟಿ ಹೈ ಕಮಿಷನರ್ ಚಂದ್ರು ಅಯ್ಯರ್ ಅವರು ತಮ್ಮ ಸಹೋದ್ಯೋಗಿಗಳೊಂದಿಗೆ
ಜುಲೈ 11 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಸಂದರ್ಭ.

Downloaded From:www.kpscvaani.com



ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-06 • ಸಂಚಿಕೆ-11 • ಆಗಸ್ಟ್ 2023

**06** ಕರ್ನಾಟಕ ಅಭಿವೃದ್ಧಿಯ 'ಮಾದರಿ ಬಜೆಟ್'
• ಕೇಶವ ಜಿ. ಝಿಂಗಾಡೆ

**10** ಕಟ್ಟುವೆವು ನಾವು ಸಮ ಸಮಾಜದ ಸಾಮರಸ್ಯದ ನಾಡನ್ನು
• ನಂಜುಂಡಪ್ಪ ವಿ

**13** ಆಯವ್ಯಯ ಮಂಡನೆಯಲ್ಲಿ ಮುಖ್ಯಮಂತ್ರಿಗಳ ಚರಿತ್ರಾರ್ಹ ದಾಖಲೆ
• ಶಫಿ. ಎಸ್

**17** ಬುಡಕಟ್ಟು ಜನರಲ್ಲಿ ಹೊಸ ಭರವಸೆ ಮೂಡಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಸಂವಾದ
• ಮಂಜುನಾಥ ಡಿ.ಡೊಳ್ಳಿನ

**20** ತಾಯಿ ಹೃದಯದ ಅನ್ನಭಾಗ್ಯ
• ಹರತೀಸುತ

**24** ಗೃಹಜ್ಯೋತಿಗೆ ಜನರಿಂದ ಚೇತೋಹಾರಿ ಸ್ಪಂದನೆ
• ಉಮೇಶ್ ಕೊಲಿಗೆರೆ

**28** ಗೃಹಲಕ್ಷ್ಮಿ : ಮಹಿಳೆಯರ ಆರ್ಥಿಕ ಸಬಲೀಕರಣದತ್ತ ಸರ್ಕಾರದ ದಿಟ್ಟಹೆಜ್ಜೆ...
• ಬಿ.ಜಿ.ಪೂರ್ಣಿಮ

**32** ಅತ್ಯುತ್ತಮ ಶಾಸಕ ಪುರಸ್ಕಾರ ಪಡೆದ ಇಬ್ಬರು ಜನಪ್ರತಿನಿಧಿಗಳು
• ಶುಭ

**33** ನಿಮ್ಮ ಮನೆ ಬಾಗಿಲಿಗೆ ಸಿದ್ದು ಹಲಸಿನ ಸಸಿಗಳು
• ಲಕ್ಷ್ಮೀಕಾಂತರಾಜು ಎಂ ಜಿ

**34** ವಾರ್ತಾ ಇಲಾಖೆಯಿಂದ ಅಭಿನಂದನಾ ಸಮಾರಂಭ

**37** ಗಿನ್ನಿಸ್ ದಾಖಲೆ ಸೃಷ್ಟಿಸಿದ ಕರ್ನಾಟಕದ ಲಂಬಾಣಿ ಕಸೂತಿ ಕಲೆ
• ಡಾ. ವರಪ್ರಸಾದ್ ರಾವ್ ಪಿ ವಿ

**40** ಡೆಂಗ್ಯೂ ಹತೋಟಿಗೆ ಇದು ಸಕಾಲ
• ಶೇಷಾದ್ರಿ ಡಿ. ಎಸ್.

**43** ಐತಿಹಾಸಿಕ ಹಂಪಿಯಲ್ಲಿ ಜರುಗಿದ ಜಿ-20 ಶೃಂಗ ಸಭೆ
• ಬಿ.ವಿ.ತುಕಾರಾಂ

**45** ಸ್ವರಾಜ್ಯ ಆಂದೋಲನ ಮತ್ತು ರಾಷ್ಟ್ರೀಯ ಭಾವನೆ
• ಡಾ. ಆರ್.ಶಂಕರಪ್ಪ

**48** ತಂತ್ರಜ್ಞಾನಕ್ಕೆ ಪರಿವರ್ತನೆಗೊಳ್ಳುತ್ತಿರುವ ಗ್ರಂಥಾಲಯಗಳು
• ವೆಂಕಟೇಶ್ ತೂಬಿನಕೆರೆ

**50** ಪದಬಂಧ-45





**ಪ್ರಧಾನ ಸಂಪಾದಕರು**
**ಹೇಮಂತ್ ಎಂ ನಿಂಬಾಳ್ಕರ್, ಐ.ಪಿ.ಎಸ್**
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
**ಪಲ್ಲವಿ ಹೊನ್ನಾಪುರ**
ಜಂಟಿ ನಿರ್ದೇಶಕರು

**ಸಹನಾ ಎಂ.**
ಉಪ ನಿರ್ದೇಶಕರು

**ಉಪ ಸಂಪಾದಕರು**
**ಬಿ. ಜಿ. ಪೂರ್ಣಿಮ**

**ಪ್ರಕಾಶಕರು**
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು-50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಉಚಿತ ಬಸ್ ಸೇವೆ ಒದಗಿಸುವ 'ಶಕ್ತಿ' ಯೋಜನೆಗೆ ಈಗಾಗಲೇ ಚಾಲನೆ ನೀಡಲಾಗಿದೆ. ಈ ಯೋಜನೆಯ ಕುರಿತು ಜುಲೈ ಸಂಚಿಕೆಯಲ್ಲಿ ಪ್ರಕಟಿಸಲಾಗಿರುವ 'ಸಬಲೀಕರಣದತ್ತ ಮಹಿಳೆಯರ ಪಯಣ' ಲೇಖನವು ಗ್ಯಾರಂಟಿ ಯೋಜನೆಗಳು ಜಾರಿಗೊಳ್ಳುವುದು ಅನುಮಾನ ಎಂದು ಹೇಳುತಿದ್ದವರ ಬಾಯನ್ನು ಮುಚ್ಚಿಸಿದೆ. ಲೇಖನದಲ್ಲಿ ಹೇಳಿರುವಂತೆ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಹಾರುವ ಕನಸಿಗೆ ಈ ಯೋಜನೆಯು ರೆಕ್ಕೆ ಮೂಡಿಸುವ ಮೂಲಕ ಮಹಿಳೆಯರು ಆತ್ಮ ವಿಶ್ವಾಸದ ಹೆಜ್ಜೆ ಇಡುವಂತೆ ಮಾಡಿರುವುದು ನೂರಕ್ಕೆ ನೂರು ಸತ್ಯ.

ಮಾನ್ಯ ಮುಖ್ಯಮಂತ್ರಿ ಅವರು ಹೇಳಿರುವಂತೆ ಮಹಿಳೆಯರಿಂದ ದೇಶದಲ್ಲಿ ಬದಲಾವಣೆ ಸಾಧ್ಯ. ಹಾಗಾಗಿ ಈ ಶಕ್ತಿ ಯೋಜನೆ ಮೂಲಕ ಹೆಣ್ಣು ಮಕ್ಕಳಿಗೆ ಶಕ್ತಿ ತುಂಬಲು ಸರ್ಕಾರವು ಮುಂದಾಗಿದೆ. ಒಟ್ಟಿನಲ್ಲಿ ಗ್ಯಾರಂಟಿ ಯೋಜನೆಗಳ ಮೂಲಕ ಅಶಕ್ತರನ್ನು ಮುಂದೆ ತರುವ ಕಾರ್ಯದಲ್ಲಿ ಸರ್ಕಾರವು ಮುಂದಾಗಿದೆ.

**–ಹೊಂಬೇಗೌಡ, ಮೈಸೂರು**

* * *

ದೇವಾಲಯಗಳ ಚಕ್ರವರ್ತಿ ಎಂದು ಕರೆಯುವ ಇಟಗಿಯ 'ಮಹದೇವ ದೇವಾಲಯದ ಮಾಹಿತಿ, ವರ್ಣನೆ ಸೂಕ್ಷ್ಮವಾಸ್ತು ಶಿಲ್ಪದ ಕೈಗನ್ನಡಿಯಂತಿದೆ, ಹಾಗೂ ಅಂತರಜಲಕ್ಕೆ ಹೇಗೆಂದರೆ ಹಾಗೆ ಲಗ್ಗೆ ಇಟ್ಟು ಬಳಸುವ ನಾವು ಮಳೆಕೊಯ್ಲು ಮುಖಾಂತರ ಜಲವನ್ನು ಮರು ಪೂರಣ ಮಾಡಬೇಕೆಂಬ ಪ್ರವೀಣ್ ಚೆನ್ನಾವರ ಅವರ ಲೇಖನ ಎಚ್ಚರಿಕೆಯ ಘಂಟೆಯಂತಿದೆ. 'ವಿಶ್ವ ಜನಸಂಖ್ಯಾ ದಿನದ' ಲೇಖನ ಜನಸಂಖ್ಯೆ ಹೆಚ್ಚಳ ಹೇಗೆಲ್ಲಾ ಹಾನಿ ತರುತ್ತದೆ ಎಂದು ತಿಳಿಸುತ್ತದೆ.

ಇನ್ನು 'ಮಹಿಳಾ ಸಬಲೀಕರಣದತ್ತ ದಿಟ್ಟ ಹೆಜ್ಜೆ' ಲೇಖನ ಶಕ್ತಿ ಯೋಜನೆಯ ಸಂಪೂರ್ಣ ಮಾಹಿತಿ ನೀಡಿ ಈ ಪತ್ರಿಕೆ ಕಾಯ್ದಿರಿಸಿಕೊಳ್ಳಲು ಯೋಗ್ಯವಾಗಿದೆ.

**–ಸುಮಂತ.ರಾ. ತುಪ್ಪದ, ಹಾನಗಲ್ಲ**

* * *

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ನಾವು ಯೋಜನೆಗಾಗಿ ಎಷ್ಟು ಅನುದಾನವನ್ನು ಖರ್ಚು ಮಾಡುತ್ತೇವೆ ಎನ್ನುವುದಕ್ಕಿಂತ ಯಾರಿಗಾಗಿ ಆ ಹಣವನ್ನು ವಿನಿಯೋಗ ಮಾಡಲಾಗುತ್ತಿದೆ ಎನ್ನುವುದು ಮುಖ್ಯ' ಎಂದು ಹೇಳಿರುವುದನ್ನು ವಾರ್ತಾ ಜನಪದ ಪತ್ರಿಕೆಯಲ್ಲಿ ಕೋಟ್ ಮಾಡಿರುವುದು ಹೆಚ್ಚು ಸೂಕ್ತವಾಗಿದೆ. ಅವರು ಹೇಳಿರುವಂತೆ ಬಡತನ ಮತ್ತು ಮಧ್ಯಮ ವರ್ಗದವರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಇಂತಹ ಯೋಜನೆಗಳನ್ನು ರೂಪಿಸುವುದು ಅವಶ್ಯಕವಾಗಿದೆ.

**–ಗಂಗಾಂಭಿಕ, ಹೊಳೆನರಸೀಪುರ**

* * *

ಜುಲೈ ಸಂಚಿಕೆಯ ವಾರ್ತಾ ಜನಪದ ಸಂಚಿಕೆಯಲ್ಲಿ ಬಂದಿರುವ ರೈತನೊಬ್ಬನ ತರಕಾರಿ ಪಾರ್ಕ್ ಲೇಖನ ನನಗೆ ತುಂಬಾ ಮೆಚ್ಚುಗೆ ಆಯಿತು. ಪದವೀಧರನಾಗಿದ್ದರೂ ಕೂಡ ಕೃಷಿಯನ್ನೇ ಕಸುಬಾಗಿಸಿಕೊಂಡು ದುಡಿಯುತ್ತಿದ್ದಾರೆ. ಜಮಖಂಡಿಯ ಮಹಾಂತೇಶ ಅವರು ಅತ್ಯಂತ ಕಡಿಮೆ ಖರ್ಚಿನಲ್ಲಿ ವಿವಿಧ ತರಕಾರಿಗಳನ್ನು ಬೆಳೆಯುವ ಮೂಲಕ ಅಧಿಕ ಇಳುವರಿ ಪಡೆಯುತ್ತಿರುವುದು




ಅಭಿನಂದನಾರ್ಹವಾದುದು. ಎಸ್‌ಎಸ್‌ಎಲ್‌ಸಿ, ಪಿಯುಸಿ ಓದಿದವರು ಕೃಷಿ ಮಾಡಲು ಹಿಂಜರಿಯುವಾಗ ಮಹಾಂತೇಶ ಅವರು ಕೃಷಿಯಲ್ಲೇ ಲಕ್ಷಾಂತರ ಆದಾಯವನ್ನು ಗಳಿಸುವ ಜೊತೆಗೆ ಹತ್ತಾರು ಜನರಿಗೆ ತಮ್ಮ ಜಮೀನಿನಲ್ಲಿ ಉದ್ಯೋಗ ನೀಡಿರುವುದು ಶ್ಲಾಘನೀಯವಾದುದು.

ಇಷ್ಟಲ್ಲದೆ ಈ ಯುವ ರೈತ ಇತರೆ ಕೃಷಿಕರಿಗೆ ವಿವಿಧ ತರಕಾರಿ ಬೆಳೆಗಳನ್ನು ಬೆಳೆಯುವುದು ಹೇಗೆ ಎಂಬ ವಿಚಾರವಾಗಿ ಉಚಿತವಾಗಿ ಪಾಠ ಮಾಡುತ್ತಿದ್ದಾರೆ ಎಂಬುದನ್ನು ತಿಳಿದು ಸಂತಸವಾಯಿತು. ಯಾವುದೇ ಕ್ಷೇತ್ರದಲ್ಲಾದರೂ ಮನಸ್ಸು ಕೊಟ್ಟು ಕೆಲಸ ಮಾಡಿದಾಗ ಪ್ರತಿಫಲ ಚನ್ನಾಗಿರುತ್ತದೆ ಎಂಬುದಕ್ಕೆ ಇವರು ಸಾಕ್ಷಿಯಾಗಿದ್ದಾರೆ.

**–ಬಿ.ಎಸ್. ಸಂಗಮೇಶ, ಬಸವನ ಬಾಗೇವಾಡಿ**

* * *

ಇತ್ತೀಚೆಗೆ ಎಲ್ಲರೂ ಮಹಿಳೆಯರ ಉಚಿತ ಪ್ರಯಾಣ ಕುರಿತು ಟೀಕೆಗಳನ್ನು ಮಾಡುತ್ತಿದ್ದಾರೆ. ಆದರೆ ಕಡಿಮೆ ವೇತನಕ್ಕೆ ದುಡಿಯುವ ಮಹಿಳೆಯರಿಗೆ ಈ ಯೋಜನೆಯಿಂದ ತುಂಬಾ ಉಪಯೋಗವಾಗುತ್ತಿದೆ. ಬಹಳಷ್ಟು ಮಹಿಳೆಯರು ಗಾರ್ಮೆಂಟ್ಸ್ ಸೇರಿದಂತೆ ಸಣ್ಣಪುಟ್ಟ ಕೆಲಸಗಳಲ್ಲಿ ದುಡಿಯುತ್ತಿದ್ದು, ಅವರಿಗೆ ವೇತನ ಕೂಡ ಅತ್ಯಂತ ಕಡಿಮೆ ಇರುತ್ತದೆ. ಹಾಗಾಗಿ ಶಕ್ತಿ ಯೋಜನೆಯಿಂದ ಅವರಿಗೆ ಉಚಿತ ಪ್ರಯಾಣ ಸಿಗುತ್ತಿರುವುದರಿಂದ ಅವರ ಅಲ್ಪ ದುಡಿಮೆಯ ಹಣದಲ್ಲಿ ಉಳಿತಾಯವಾಗುತ್ತಿದೆ. ಹೀಗೆ ಉಳಿತಾಯವಾಗುವಂತಹ ಹಣದಿಂದ ಅವರು ತಮ್ಮ ಮಕ್ಕಳಿಗೆ ಮತ್ತು ಮನೆಗೆ ಬೇಕಾಗುವ ಸಾಮಗ್ರಿಗಳನ್ನು ಕೊಳ್ಳಲು ಬಳಸಿಕೊಳ್ಳುತ್ತಿರುವುದರಿಂದ ಮಹಿಳೆಯರು ಸಂತೋಷವಾಗಿದ್ದಾರೆ. ತಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ 'ಸಬಲೀಕರಣದತ್ತ ಮಹಿಳೆಯರ ಪಯಣ' ಲೇಖನ ಉಪಯುಕ್ತ ಮಾಹಿತಿಯನ್ನು ಒದಗಿಸಿದೆ. ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಒದಗಿಸಿದ ಸರ್ಕಾರಕ್ಕೆ ನಿಮ್ಮ ಪತ್ರಿಕೆಯ ಮೂಲಕ ಧನ್ಯವಾದಗಳನ್ನು ತಿಳಿಸಲು ಇಚ್ಛಿಸುತ್ತೇನೆ.

**–ಶೀಥಲ್, ಬೆಂಗಳೂರು**

ಈಗಿನ ಆಹಾರ ಪದ್ಧತಿ, ಜೀವನ ಶೈಲಿಗಳು ಆರೋಗ್ಯಕ್ಕೆ ಮಾರಕವಾಗಿರುವುದರಲ್ಲಿ ಸಂಶಯವಿಲ್ಲ. ಇದರ ಸುಧಾರಣೆಗೆ ಜನರು ಆಯುರ್ವೇದ, ಗಿಡಮೂಲಿಕೆಗಳಿಗೆ ಮಾರು ಹೋಗುತ್ತಿದ್ದಾರೆ. ಕಾರಣ ಇದ್ಯಾವುದೂ ಅಡ್ಡ ಪರಿಣಾಮ ಬೀರುವುದಿಲ್ಲ ಎಂಬ ನಂಬಿಕೆ. ಇದು ಸತ್ಯವೂ ಹೌದು. ಈ ನಿಟ್ಟಿನಲ್ಲಿ ಅಡೇಮನೆಯ ಕೃಷಿಕ ಪ್ರಕಾಶ ಭಟ್ಟರು ಜನರಿಗೆ ಉಪಯೋಗವಾಗುವಂತಹ ಔಷಧಿ ವನವನ್ನು ನಿರ್ಮಿಸಿರುವುದು ಪ್ರಶಂಸನೀಯವಾಗಿದೆ. ಇವರ ಶ್ರಮ ಇನ್ನೊಬ್ಬರಿಗೆ ಪ್ರೇರಣೆಯಾಗಿದೆ.

**–ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ**

'ವಾರ್ತಾ ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ವಾರ್ಷಿಕ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ https://sevasindhu.karnataka.gov.in ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

## ಪ್ರಗತಿಪರ ಅಭಿವೃದ್ಧಿ ...

**ಪ್ರಿಯ ಓದುಗ ಮಿತ್ರರೇ,**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸರ್ಕಾರ ನುಡಿದಂತೆ ನಡೆಯುವ ಸರ್ಕಾರ ಎಂಬುದನ್ನು ತಾವು ಮಂಡಿಸಿರುವ 2023-24 ನೇ ಸಾಲಿನ ಬಜೆಟ್ ಮುಖಾಂತರ ನಾಡಿನ ಜನತೆಗೆ ಸ್ಪಷ್ಟ ಪಡಿಸಿದ್ದಾರೆ. ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಲಾಗಿದ್ದ ಐದು ಗ್ಯಾರಂಟಿಗಳಲ್ಲಿ ನಾಲ್ಕು ಗ್ಯಾರಂಟಿಗಳಿಗೆ ಪ್ರಸಕ್ತ ಸಾಲಿಗೆ 35410 ಕೋಟಿ ರೂ. ಮೊತ್ತವನ್ನು ನಿಗದಿಪಡಿಸಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಈ ಐದು ಗ್ಯಾರಂಟಿಗಳಿಗೆ ಹೆಚ್ಚು ಹಣ ವೆಚ್ಚವಾಗುವುದರಿಂದ ಅಭಿವೃದ್ಧಿ ಯೋಜನೆಗಳು ಕುಂಠಿತಗೊಳ್ಳುತ್ತವೆ ಎಂಬ ಮಾತುಗಳು ಕೇಳಿ ಬಂದಿತ್ತು. ಆದರೆ ಮುಖ್ಯಮಂತ್ರಿ ಅವರು ಗ್ಯಾರಂಟಿ ಯೋಜನೆಗಳಿಗೆ ಜನರ ಮೇಲೆ ಯಾವುದೇ ತೆರಿಗೆ ಭಾರ ಹೊರಿಸದೇ ಹಣವನ್ನು ಹೊಂದಿಸಲು ಕ್ರಮ ಕೈಗೊಂಡಿದ್ದಾರೆ. ಮುಖ್ಯಮಂತ್ರಿಗಳು ತಮ್ಮ 14ನೇ ಆಯವ್ಯಯ ಮಂಡಿಸುವ ಮೂಲಕ ರಾಜ್ಯದಲ್ಲಿ ಅತಿ ಹೆಚ್ಚು ಬಾರಿ ಆಯವ್ಯಯ ಮಂಡಿಸಿದ ಕೀರ್ತಿಗೆ ಭಾಜನರಾದರು. ಅವರು ತಮ್ಮ ಪ್ರತಿ ಬಜೆಟ್‌ನಲ್ಲೂ ಮಹಿಳೆಯರು, ಶ್ರಮಿಕರು, ಹಿಂದುಳಿದ ವರ್ಗದವರು ಸೇರಿದಂತೆ ಎಲ್ಲಾ ವರ್ಗದ ಬಡ ಜನರಿಗೆ ಭದ್ರತೆಯನ್ನು ಒದಗಿಸುತ್ತಾ ಬಂದಿದ್ದಾರೆ. ಅದೇ ರೀತಿಯಲ್ಲಿ ಈ ಬಾರಿ ಕೂಡ ಸರ್ವರಿಗೂ ಸಮ್ಮತವಾಗುವಂತಹ ಬಜೆಟ್ ಅನ್ನು ಮಂಡಿಸಿದ್ದಾರೆ.

ಅಸಂಘಟಿತ ವಲಯದಲ್ಲಿ ದುಡಿಯುವ ವರ್ಗಕ್ಕೆ ವಿಮೆ ಸೌಲಭ್ಯವನ್ನು ಇದೇ ಮೊದಲ ಬಾರಿಗೆ ಜಾರಿಗೆ ತಂದಿರುವುದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ವೀರೇಂದ್ರ ಹೆಗ್ಗಡೆ ಅವರು ಮುಖ್ಯಮಂತ್ರಿ ಅವರಿಗೆ ಪತ್ರ ಬರೆದು ಶಕ್ತಿ ಯೋಜನೆಗೆ ಶ್ಲಾಘನೆ ವ್ಯಕ್ತಪಡಿಸಿರುವುದಲ್ಲದೆ ರಾಜ್ಯದ ಜನತೆಗೆ ಉಪಯುಕ್ತ ಕಾರ್ಯಕ್ರಮಗಳನ್ನು ನೀಡುತ್ತಿದ್ದೀರಿ ಎಂದು ಪ್ರೋತ್ಸಾಹಿಸಿದ್ದಾರೆ.

ಇದಕ್ಕೂ ಮುನ್ನ ರಾಜ್ಯಪಾಲರು ಜಂಟಿ ಅಧಿವೇಶವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ "ಅನ್ನವನ್ನು ನೀಡುವುದು ನನ್ನಿಯನು ನುಡಿಯುವುದು, ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ" ಎಂದು ಕವಿ ಸರ್ವಜ್ಞ ಹೇಳಿರುವುದನ್ನು ಉಲ್ಲೇಖಿಸಿ, "ನನ್ನ ಸರ್ಕಾರ ಐದು ಗ್ಯಾರಂಟಿಗಳ ಮೂಲಕ ಸಾಧಿಸಲು ಹೊರಟಿರುವುದೂ ಇದನ್ನೇ ಎಂದು ಹೇಳಿದ್ದಾರೆ. ಬಡವರ ಹಸಿವು ತಣಿಸಲು ಸ್ಥಾಪಿಸಿದ್ದ ಇಂದಿರಾ ಕ್ಯಾಂಟೀನುಗಳು ಲಕ್ಷಾಂತರ ಜನರ ಹಸಿದ ಹೊಟ್ಟೆಯನ್ನು ತುಂಬಿಸಿವೆ. ಹಾಗಾಗಿ ಈ ಕ್ಯಾಂಟೀನುಗಳನ್ನು ಇನ್ನೂ ಸಮರ್ಥವಾಗಿ ನಡೆಸುವ ಮೂಲಕ ರಾಜ್ಯವನ್ನು ಹಸಿವು ಮುಕ್ತ ಮಾಡಲಿದೆ ಎಂದಿದ್ದಾರೆ.

ಈಗಾಗಲೇ ಶಕ್ತಿ ಯೋಜನೆ, ಅನ್ನಭಾಗ್ಯ, ಹಾಗೂ ಗೃಹಜ್ಯೋತಿ ಯೋಜನೆಗಳು ಜಾರಿಯಾಗಿವೆ. ಗೃಹಲಕ್ಷ್ಮಿ ಯೋಜನೆಗೆ ನೋಂದಣಿ ಪ್ರಕ್ರಿಯೆ ಆರಂಭವಾಗಿದೆ. ಹಾಗಾಗಿ ಭರವಸೆ ನೀಡಲಾಗಿದ್ದ ಐದು ಗ್ಯಾರಂಟಿಗಳಲ್ಲಿ ನಾಲ್ಕು ಗ್ಯಾರಂಟಿಗಳಿಗೆ ಚಾಲನೆ ದೊರಕಿದಂತಾಗಿದೆ. ಉಳಿದಿರುವ ಯುವನಿಧಿ ಯೋಜನೆಯ ಕುರಿತು ಸರ್ಕಾರಿ ಆದೇಶ ಹೊರಡಿಸಲಾಗಿದ್ದು, 2022-23 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪದವಿ/ ಡಿಪ್ಲೊಮಾ ಪಡೆದ ಯುವಜನರಿಗೆ ಆರು ತಿಂಗಳು ಕಳೆದರೂ ಉದ್ಯೋಗ ದೊರೆಯದ ಸಂದರ್ಭದಲ್ಲಿ ಈ ಯೋಜನೆ ಸೌಲಭ್ಯ ಪಡೆಯ ಬಹುದಾಗಿದೆ.

ಸರ್ಕಾರವನ್ನು ಆಯ್ಕೆ ಮಾಡಿರುವ ಜನರು ಸರ್ಕಾರದಿಂದ ತಮಗೆ ಅನುಕೂಲವಾಗುವಂತಹ ಯೋಜನೆಗಳನ್ನು ನಿರೀಕ್ಷಿಸುವುದು ಸಹಜ. ಸರ್ಕಾರ ಕೂಡ ಜನರ ನಿರೀಕ್ಷೆಯನ್ನು ಹುಸಿ ಮಾಡಲಿಲ್ಲ. 'ನುಡಿದಂತೆ ನಡೆಯಬೇಕು' ಎಂಬ ಬಸವಣ್ಣನವರ ನುಡಿಯಂತೆ ಮುನ್ನಡೆಯುತ್ತಿದೆ. ಬೆಲೆ ಏರಿಕೆ ಹಾಗೂ ಕಡಿಮೆ ಆದಾಯದಿಂದ ತತ್ತರಿಸಿರುವ ಜನರಿಗೆ ಸಾರ್ವತ್ರಿಕ ಮೂಲ ಆದಾಯ (Universal Basic Income) ಎಂಬ ಹೊಸ ಪರಿಕಲ್ಪನೆಯೊಂದಿಗೆ ಜನರ ಜೇಬಿಗೇ ಹಣ ಹಾಕುವ ಐದು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಬಡ ಮತ್ತು ಮಧ್ಯಮ ವರ್ಗದ ಜನರು ಬೆಲೆ ಏರಿಕೆಯ ದುಷ್ಪರಿಣಾಮಗಳಿಂದ ಚೇತರಿಸಿಕೊಳ್ಳಲು ಈ ಗ್ಯಾರಂಟಿ ಯೋಜನೆಗಳು ಸಹಕಾರಿಯಾಗಲಿವೆ.

ಈ ಸಂಚಿಕೆಯಲ್ಲಿ ಆಯವ್ಯಯ, ರಾಜ್ಯಪಾಲರ ಜಂಟಿ ಅಧಿವೇಶನದ ಭಾಷಣ, ಬುಡಕಟ್ಟು ಜನರೊಂದಿಗೆ ರಾಷ್ಟ್ರಪತಿ ಅವರ ಸಂವಾದ ಸೇರಿದಂತೆ ಜುಲೈನಲ್ಲಿ ಪ್ರಾರಂಭಗೊಂಡ ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮಿ ಯೋಜನೆ ಕುರಿತಂತಹ ಲೇಖನಗಳನ್ನು ಪ್ರಕಟಿಸಲಾಗಿದೆ.

ಓದುಗರೆಲ್ಲರಿಗೂ ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು.

**ಹೇಮಂತ್ ಎಂ ನಿಂಬಾಳ್ಕರ್, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001. email : feedbackjanapada@gmail.com



Downloaded From:www.kpscvaani.com



# ಕರ್ನಾಟಕ ಅಭಿವೃದ್ಧಿಯ 'ಮಾದರಿ ಬಜೆಟ್'

**ರಾಜ್ಯದ ಜನತೆಯ ಸರ್ವಾಂಗೀಣ ಪ್ರಗತಿ ಕೇಂದ್ರಿತ ಅಭಿವೃದ್ಧಿ ಮಂತ್ರ ಜಪಿಸಿರುವ 2023-24ನೇ ಸಾಲಿನ ಬಜೆಟ್‌ನಲ್ಲಿ ಅಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯವನ್ನು ಜೊತೆಯಾಗಿ ಮುಂದಕ್ಕೆ ಕೊಂಡೊಯ್ಯುವ ಇರಾದೆಯು ಸ್ಪಷ್ಟವಾಗಿ ಕಾಣಿಸುತ್ತದೆ.**

ಕೇಶವ ಜಿ. ಝಿಂಗಾಡೆ

ಹಣಕಾಸು ವರ್ಷ 2023-24ರ ರಾಜ್ಯ ಆಯವ್ಯಯ ಪತ್ರವನ್ನು ನಾಡಿನ ಜನತೆ ಹಿಂದೆಂದೂ ಕಾಣದಂತಹ ಬಹಳ ಕುತೂಹಲದಿಂದ ಎದುರು ನೋಡುತ್ತಿದ್ದರು. ಮತದಾರರಿಗೆ ಐದು ಗ್ಯಾರಂಟಿಗಳನ್ನು ಜಾರಿ ಮಾಡುವುದಾಗಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯನ್ನು ಕಾಂಗ್ರೆಸ್ ಸರ್ಕಾರ ಯಾವ ಬಗೆಯಲ್ಲಿ ಕಾರ್ಯಗತಗೊಳಿಸಲಿದೆ. ಗ್ಯಾರಂಟಿಗಳಿಗೆ 'ಬಜೆಟ್ ಖಾತರಿ' ದೊರೆಯುವುದೇ ಎನ್ನುವುದು ಜನಸಾಮಾನ್ಯರ ನಿರೀಕ್ಷೆಯಾಗಿತ್ತು. ಗ್ಯಾರಂಟಿಗಳ ಜಾರಿಗೆ ಬೇಕಾಗಿರುವ ದೊಡ್ಡ ಮೊತ್ತಕ್ಕೆ ಸರ್ಕಾರ ಸಂಪನ್ಮೂಲಗಳನ್ನು ಹೇಗೆ ಕ್ರೋಢೀಕರಣ ಮಾಡಲಿದೆ ಎನ್ನುವ ಅನುಮಾನವು ಆರ್ಥಿಕ ತಜ್ಞರನ್ನು ಕಾಡುತ್ತಿತ್ತು.





Downloaded From:www.kpscvaani.com





ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜುಲೈ 7ರಂದು ವಿಧಾನಸಭೆಯಲ್ಲಿ ಮಂಡಿಸಿದ ಮುಂಗಡಪತ್ರವು ಪಾಮರರು ಮತ್ತು ಪಂಡಿತರ ಇಂತಹ ಹಲವಾರು ಅನುಮಾನಗಳನ್ನೆಲ್ಲ ದೂರ ಮಾಡುವಲ್ಲಿ ಯಶಸ್ವಿಯಾಗಿದೆ. ತಮ್ಮ ಸುದೀರ್ಘ ರಾಜಕೀಯ ಬದುಕಿನಲ್ಲಿ ದಾಖಲೆಯ 14ನೇ ಬಾರಿಗೆ ಬಜೆಟ್ ಮಂಡಿಸಿರುವ ಸಿದ್ದರಾಮಯ್ಯ ಅವರು, ತಮ್ಮ ರಾಜಕೀಯ ಅನುಭವವನ್ನೆಲ್ಲ ಧಾರೆ ಎರೆದು ಸರ್ವರಿಗೂ ಸಮ್ಮತವಾಗುವಂತಹ ಬಜೆಟ್ ಮಂಡಿಸಿ ಸೈ ಎನಿಸಿಕೊಂಡಿದ್ದಾರೆ. ಗ್ಯಾರಂಟಿ ಯೋಜನೆಗಳ ಜಾರಿಯ ಕಾರಣಕ್ಕೆ ರಾಜ್ಯ ಸರ್ಕಾರದ ಆರ್ಥಿಕ ಶಿಸ್ತು ಏರುಪೇರಾಗಲಿದೆ ಎನ್ನುವ ತಮ್ಮ ಕಟು ಟೀಕಾಕಾರರಿಗೆ ಸರಿಯಾದ ಉತ್ತರವನ್ನೂ ನೀಡಿದ್ದಾರೆ.

ಈ ಬಜೆಟ್ ಹಲವಾರು ವೈಶಿಷ್ಟಗಳಿಂದ ಗಮನ ಸೆಳೆಯುತ್ತದೆ. ನಾರಿ ಶಕ್ತಿಯ ಸಬಲೀಕರಣಕ್ಕೆ ಒತ್ತು ನೀಡಲಾಗಿದೆ. ಅಸಂಘಟಿತ ವಲಯದಲ್ಲಿ ದುಡಿಯುವ ವರ್ಗಕ್ಕೆ ವಿಮೆ ಸೌಲಭ್ಯಗಳನ್ನು ಇದೇ ಮೊದಲ ಬಾರಿಗೆ ಜಾರಿಗೆ ತರಲಾಗುತ್ತಿದೆ. ರಾಜ್ಯ ಸರ್ಕಾರದ ಆಯವ್ಯಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಪಂಚ ಖಾತರಿಗಳ ಪೈಕಿ 4 ಖಾತರಿಗಳಿಗೆ – 57,910 ಕೋಟಿ ಮೊತ್ತವನ್ನು ಮೀಸಲು ಇಟ್ಟಿರುವುದು ಸೇರಿದಂತೆ ಹಲವಾರು ಇತರ ಪ್ರಥಮಗಳಿಗೂ ಈ ಬಜೆಟ್ ಸಾಕ್ಷಿಯಾಗಿದೆ.

ಐದರಲ್ಲಿ ನಾಲ್ಕು ಗ್ಯಾರಂಟಿ ಯೋಜನೆಗಳಿಗೆ ನಿರ್ದಿಷ್ಟ ಮೊತ್ತವನ್ನು ನಿಗದಿಪಡಿಸಿರುವುದು ರಾಜ್ಯದ ಜನತೆಗೆ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಲಾಗಿದ್ದ ಭರವಸೆಗಳನ್ನು ಜಾರಿಗೆ ತರುವ ಸರ್ಕಾರದ ಬದ್ಧತೆಗೆ ನಿದರ್ಶನವಾಗಿದೆ. ಅಸಂಘಟಿತ ವಲಯದ ಕಾರ್ಮಿಕರಿಗೆ–4 ಲಕ್ಷ ಮೊತ್ತದ ವಿಮೆ ಸೌಲಭ್ಯ ಪರಿಚಯಿಸಿರುವುದೂ ಈ ಬಜೆಟ್‌ನ ಇನ್ನೊಂದು ವಿಶೇಷತೆಯಾಗಿದೆ.

ಗ್ಯಾರಂಟಿ ಯೋಜನೆಗಳಿಗೆ – 57,910 ಕೋಟಿಯಷ್ಟು ದೊಡ್ಡ ಮೊತ್ತ ವೆಚ್ಚವಾಗುವುದರಿಂದ ಅಭಿವೃದ್ಧಿ ಯೋಜನೆಗಳಿಗೆ ಹಣದ ಕೊರತೆ ಎದುರಾಗಬಹುದು ಎನ್ನುವ ಶಂಕೆ ದೂರ ಮಾಡುವ ಜಾಣ್ಮೆಯನ್ನೂ ಮುಖ್ಯಮಂತ್ರಿ ಮೆರೆದಿದ್ದಾರೆ. ಜನಸಮುದಾಯದ ಸಮಗ್ರ ಸ್ವರೂಪದ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚು ಹಣ ಹೊಂದಿಸುವ ಉದ್ದೇಶಕ್ಕೆ, ಅಭಿವೃದ್ಧಿ ಯೋಜನೆಗಳಿಗೆ ನಿಗದಿ ಪಡಿಸಬೇಕಾದ ಅನುದಾನವನ್ನು ಮರು ಹಂಚಿಕೆ ಮಾಡಲಿದ್ದಾರೆ ಎನ್ನುವ ನಿರೀಕ್ಷೆಯನ್ನೂ ಹುಸಿ ಮಾಡಿದ್ದಾರೆ.

### ಬಜೆಟ್ ಮುಖ್ಯಾಂಶಗಳು

- **ರೈತರ ಶೂನ್ಯ ಬಡ್ಡಿ ದರದ ಸಾಲದ ಮಿತಿ –5 ಲಕ್ಷಕ್ಕೆ ಹೆಚ್ಚಳ.**
- **ಕೃಷಿ ಸಂಬಂಧಿತ ನವೋದ್ಯಮಗಳಿಗೆ ಉತ್ತೇಜನ.**
- **4 ಸಾವಿರ ಗ್ರಾಮ ಪಂಚಾಯ್ತಿಗಳಲ್ಲಿ ಶಿಶುಪಾಲನಾ ಕೇಂದ್ರ 'ಕೂಸಿನ ಮನೆ' ಆರಂಭ.**
- **ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ – 5,000 ಕೋಟಿ.**
- **ಮಹಿಳಾ ಸಹಕಾರಿಗಳಿಗೆ 'ಉದ್ಯಮ ಶಕ್ತಿ' ಯೋಜನೆಯಡಿ 100 ಕಡೆ ಪೆಟ್ರೋಲ್ ಬಂಕ್ ಸ್ಥಾಪನೆ.**
- **9–10ನೇ ತರಗತಿಗೆ ಮಕ್ಕಳಿಗೂ ವಾರಕ್ಕೆರಡು ಬಾರಿ ಮೊಟ್ಟೆ–ಬಾಳೆಹಣ್ಣು ವಿತರಣೆ.**
- **ಬಡ, ಮಧ್ಯಮ ವರ್ಗದವರಿಗೆ ತೆರಿಗೆ ಹೊರೆ ಇಲ್ಲದಿರುವುದು.**



Downloaded From:www.kpscvaani.com



## ಶಕ್ತಿ ಯೋಜನೆಗೆ ಧರ್ಮಾಧಿಕಾರಿ ಶ್ಲಾಘನೆ

ಶಕ್ತಿ ಯೋಜನೆಯನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರು ಮುಕ್ತಕಂಠದಿಂದ ಶ್ಲಾಘಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

'ಉಚಿತ ಬಸ್ ಪ್ರಯಾಣ ಸೌಲಭ್ಯದ ಕಾರಣಕ್ಕೆ ಧರ್ಮಸ್ಥಳಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುತ್ತಿದ್ದಾರೆ. ಅನೇಕ ಮಹಿಳೆಯರು ನಿಮ್ಮ ಹೆಸರಿನಲ್ಲಿ ಮಂಜುನಾಥ ಸ್ವಾಮಿಗೆ ಸೇವೆ – ಕಾಣಿಕೆ ಸಲ್ಲಿಸುತ್ತಿದ್ದಾರೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಬಜೆಟ್ ಬಗ್ಗೆ ಪತ್ರದಲ್ಲಿ ಹೊಗಳಿಕೆ ವ್ಯಕ್ತಪಡಿಸಿರುವ ಹೆಗ್ಗಡೆ ಅವರು, 'ಧರ್ಮಸ್ಥಳಕ್ಕೆ ಬರುವವರಲ್ಲಿ ವಿಶೇಷವಾಗಿ ಮಹಿಳೆಯರು ಶಕ್ತಿ ಯೋಜನೆ ಬಗ್ಗೆ ಸಂತೋಷ ವ್ಯಕ್ತಪಡಿಸುತ್ತಿದ್ದಾರೆ. ಇತರ ಅನೇಕ ಯೋಜನೆಗಳ ಮೂಲಕವೂ ನೀವು ರಾಜ್ಯದ ಜನತೆಗೆ ಉಪಯುಕ್ತ ಕಾರ್ಯಕ್ರಮಗಳನ್ನು ನೀಡಿರುವಿರಿ. ಜೈನ ಸಮುದಾಯಕ್ಕೆ ವಿಶೇಷ ಅನುದಾನ ನೀಡಿ ಪ್ರೋತ್ಸಾಹಿಸಿರುವ ವಿಚಾರ ತಿಳಿದು ಇಡೀ ಸಮಾಜಕ್ಕೆ ಸಂತೋಷವಾಗಿದೆ' ಎಂದೂ ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

ಬಜೆಟ್‌ಗೆ ಜನಮನ್ನಣೆ ಯಾವ ರೀತಿ ಇದೆ ಎನ್ನುವುದಕ್ಕೆ ಈ ಪತ್ರವೇ ಸಾಕ್ಷಿಯಾಗಿದೆ.

ಅಭಿವೃದ್ಧಿ ಉದ್ದೇಶದ ಯೋಜನೆಗಳಿಗೆ ಬಹುಮಟ್ಟಿಗೆ ಅನುದಾನ ಕೊರತೆ ಎದುರಾಗದಂತೆ ಎಚ್ಚರವಹಿಸಿದ್ದಾರೆ.

ರಾಜ್ಯದ ಜನತೆಯ ಸರ್ವಾಂಗೀಣ ಪ್ರಗತಿ ಕೇಂದ್ರಿತ ಅಭಿವೃದ್ಧಿ ಮಂತ್ರ ಜಪಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಹೆಚ್ಚುವರಿ ಹಣ ಹೊಂದಿಸಲು ಜನರ ಮೇಲೆ ಹೆಚ್ಚುವರಿ ತೆರಿಗೆ ಹೊರೆ ಬೀಳಲಿದೆ ಎನ್ನುವ ನಿರೀಕ್ಷೆಯನ್ನೂ ಹುಸಿ ಮಾಡಿದ್ದಾರೆ. ಮದ್ಯ ಪ್ರಿಯರಿಗೆ ಮಾತ್ರ ಬೆಲೆ ಏರಿಕೆಯ ಬಿಸಿ ಮುಟ್ಟಿಸಿದ್ದಾರೆ. ತೆರಿಗೆ ಸಂಗ್ರಹ ಸುಧಾರಣೆ, ಸರ್ಕಾರದ ಅನಗತ್ಯ ವೆಚ್ಚಗಳ ಕಡಿತ, ಸೋರಿಕೆಗೆ ಕಡಿವಾಣ ಹಾಕುವ ಕ್ರಮಗಳ ಮೂಲಕ ಹೆಚ್ಚಿನ ಸಂಪನ್ಮೂಲದ ಅಗತ್ಯವನ್ನು ಈಡೇರಿಸಲು ಉದ್ದೇಶಿಸಿರುವುದು ಪ್ರಜ್ಞಾಪೂರ್ವಕ ಜಾಣ ನಡೆಯಾಗಿದೆ. ಅಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯವನ್ನು ಜೊತೆಯಾಗಿ ಮುಂದಕ್ಕೆ ಕೊಂಡೊಯ್ಯುವ ಇರಾದೆಯು ಬಜೆಟ್‌ನಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ.

### ಸ್ತ್ರೀ ಶಕ್ತಿ ಸಬಲೀಕರಣ ; ಸಾಕಾರಗೊಂಡ ಆಶಯ

ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ರಾಜ್ಯದ ವ್ಯಾಪ್ತಿ ಒಳಗೆ ಉಚಿತ ಪ್ರಯಾಣ ವ್ಯವಸ್ಥೆ ಕಲ್ಪಿಸಲಾಗಿದೆ. ಶಾಲಾ – ಕಾಲೇಜ್ ವಿದ್ಯಾರ್ಥಿನಿಯರಿಗೂ ಉಚಿತ ಪಾಸ್ ಸೌಲಭ್ಯ ಅನ್ವಯವಾಗಲಿದೆ. ಶಕ್ತಿ ಯೋಜನೆಗೆ – 4,000 ಕೋಟಿ ತೆಗೆದು ಇರಿಸಲಾಗಿದೆ. ಕುಟುಂಬದ ಯಜಮಾನಿಗೆ ಪ್ರತಿ ತಿಂಗಳು – 2,000 ನೀಡುವ ಗೃಹಲಕ್ಷ್ಮೀ ಯೋಜನೆಗೆ – 30,000 ಕೋಟಿ ಮೊತ್ತದ ಅನುದಾನ ನಿಗದಿಪಡಿಸಲಾಗಿದೆ. ಮಹಿಳಾ ಸಬಲೀಕರಣ ಉದ್ದೇಶಕ್ಕೆ ಜಾರಿಯಾಗುತ್ತಿರುವ ಮಹತ್ವದ ಯೋಜನೆಗಳೆಂದೇ ಇವುಗಳನ್ನು ಪರಿಗಣಿಸಲಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಉದ್ದೇಶದ ಅನುದಾನವನ್ನು ಶೇ 2 ರಿಂದ ಶೇ 7ರಷ್ಟಕ್ಕೆ ಹೆಚ್ಚಿಸಲಾಗಿದೆ. ಗೃಹಲಕ್ಷ್ಮಿ, ಶಕ್ತಿಯಂತಹ ಮಹಿಳಾ ಕೇಂದ್ರಿತ 'ಗ್ಯಾರಂಟಿ' ಯೋಜನೆ ಜಾರಿಗೆ ಹಣ ಹೊಂದಿಸಲು ಈ ಹೆಚ್ಚಳ ಮಾಡಲಾಗಿದೆ.

### ಜನಪರ ಕಾರ್ಯಕ್ರಮಗಳಿಗೆ ಒತ್ತು

ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಒತ್ತು ನೀಡಿರುವ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ – ಪಂಗಡ ಹಾಗೂ ಅಲ್ಪಸಂಖ್ಯಾತ ಸಮುದಾಯಗಳಿಗೆ ಆದ್ಯತೆ ದೊರೆತಿದೆ. ಇತರ ಸಮುದಾಯಗಳ ಕಲ್ಯಾಣ ಕಾರ್ಯಕ್ರಮಕ್ಕೂ ಗಮನಾರ್ಹ ಪ್ರಮಾಣದಲ್ಲಿ ಅನುದಾನ ನಿಗದಿ ಪಡಿಸಲಾಗಿದೆ. ಅಭಿವೃದ್ಧಿ ಹಾಗೂ ಜನಸಮುದಾಯದ ಕಲ್ಯಾಣ ಕಾರ್ಯಕ್ರಮಗಳ ಮಧ್ಯೆ ಜಾಣ್ಮೆಯಿಂದ ಸಮತೋಲನ ಸಾಧಿಸಲಾಗಿದೆ.

### ಪರಿಶಿಷ್ಟರ ಅಭ್ಯುದಯಕ್ಕೆ ಆದ್ಯತೆ

ಪರಿಶಿಷ್ಟ ಜಾತಿ– ಪಂಗಡ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳ ಆರ್ಥಿಕ, ಸಾಮಾಜಿಕ ಅಭ್ಯುದಯಕ್ಕೂ ಒತ್ತು ನೀಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆ ಆಧರಿಸಿದ ಅನುದಾನ ಹಂಚಿಕೆಯ ಮೊತ್ತವನ್ನು – 34,294 ಕೋಟಿಗೆ (4,079 ಕೋಟಿ ಏರಿಕೆ) ಹೆಚ್ಚಿಸಲಾಗಿದೆ.



Downloaded From:www.kpscvaani.com

ಬುಡಕಟ್ಟು ಪಂಗಡಗಳಾದ ಕೊರಗ, ಜೇನುಕುರುಬ, ಸೋಲಿಗ, ಎರವ, ಕಾಡು ಕುರುಬ, ಮಲೆಕುಡಿಯ, ಸಿದ್ಧಿ, ಹಸಲರು, ಗೌಡಲು, ಗೊಂಡ ಮತ್ತು ಬೆಟ್ಟಕುರುಬ ಜನಾಂಗದ ಕುಟುಂಬಗಳಿಗೆ ಪೌಷ್ಟಿಕ ಆಹಾರ ಯೋಜನೆಯನ್ನು 12 ತಿಂಗಳಿಗೆ ವಿಸ್ತರಿಸಲು ಕ್ರಮ ಕೈಗೊಳ್ಳಲಾಗಿದೆ.

**ಕಲ್ಯಾಣ ಕರ್ನಾಟಕದ ಕಲ್ಯಾಣಕ್ಕೆ – 5,000 ಕೋಟಿ**

ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ – 5,000 ಕೋಟಿ ಮೀಸಲು ಇಡಲಾಗಿದೆ. 400 ಸಮುದಾಯ ಶೌಚಾಲಯ ಸಂಕೀರ್ಣಗಳ ನಿರ್ಮಾಣ ಹಾಗೂ ನಿರ್ವಹಣೆ, ಪ್ರವಾಸಿ ತಾಣಗಳು ಮತ್ತು ಕೋಟೆಗಳ ಅಭಿವೃದ್ಧಿ, ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಜಿಮ್ಸ್) 200 ಹಾಸಿಗೆಯ ಹೊಸ ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಕೈಗಾರಿಕಾ ವಸಾಹತುಗಳ ಸ್ಥಾಪನೆ, ಬೀದರ್ ಜಿಲ್ಲೆಯಲ್ಲಿ ಕೃಷ್ಣಮೃಗ ಸಂರಕ್ಷಣಾ ಮೀಸಲು ಪ್ರದೇಶ ಸ್ಥಾಪನೆ, ಕೊಪ್ಪಳದಲ್ಲಿ ಜನಪದ ಲೋಕ ಸ್ಥಾಪನೆ ಸೇರಿದಂತೆ ಹಲವಾರು ಯೋಜನೆಗಳಿಗೆ – 5,000 ಕೋಟಿ ಮೊತ್ತದ ಅನುದಾನ ನೀಡಲಾಗಿದೆ.

**ಕೃಷಿ ಉತ್ಪನ್ನಕ್ಕೆ ಬ್ರ್ಯಾಂಡಿಂಗ್ ಪರಿಕಲ್ಪನೆ**

ಕೃಷಿ ವಲಯಕ್ಕೆ ಉದ್ಯಮದ ಸ್ಪರ್ಶ ನೀಡುವ ಯತ್ನ, ಕೃಷಿ ಉತ್ಪನ್ನ ಮಾರುಕಟ್ಟೆಗಳ ಬಲವರ್ಧನೆ, ಕೃಷಿ ಭಾಗ್ಯ ಯೋಜನೆಗೆ ಮರು ಚೈತನ್ಯ, ಕೃಷಿ ಉತ್ಪನ್ನಗಳಿಗೆ ಬ್ರ್ಯಾಂಡಿಂಗ್ ಪರಿಕಲ್ಪನೆ ಹಾಗೂ ಕೃಷಿ ನವೋದ್ಯಮಗಳಿಗೆ ಉತ್ತೇಜನ ನೀಡುವ ಆಶಯ ಬಜೆಟ್‌ನಲ್ಲಿ ಸಾಕಾರಗೊಂಡಿದೆ.

**ಅಸಂಘಟಿತ ಕಾರ್ಮಿಕರಿಗೆ ವಿಮೆ ಸೌಲಭ್ಯ**

ಅಸಂಘಟಿತ ವಲಯದ ಕಾರ್ಮಿಕರಿಗೆ ಜೀವ ವಿಮೆ ಮತ್ತು ಅಪಘಾತ ವಿಮೆ ಸೌಲಭ್ಯವನ್ನು ಇದೇ ಮೊದಲ ಬಾರಿಗೆ ಜಾರಿಗೆ ತರಲಾಗಿದೆ.

ಸ್ವಿಗಿ, ಜೊಮ್ಯಾಟೊ, ಅಮೆಜಾನ್ ಸೇರಿದಂತೆ 'ಇ–ಕಾಮರ್ಸ್' ಸಂಸ್ಥೆಗಳ ಕಾರ್ಮಿಕರಿಗೆ – 2 ಲಕ್ಷ ಜೀವ ವಿಮೆ ಸೌಲಭ್ಯ, 2 ಲಕ್ಷ ಅಪಘಾತ ವಿಮೆ ಸೌಲಭ್ಯ ಸೇರಿ ಒಟ್ಟು 4 ಲಕ್ಷ ವಿಮೆ ಭದ್ರತೆ ಒದಗಿಸಲಾಗಿದೆ. ಈ ವಿಮೆ ಯೋಜನೆಯ ಸಂಪೂರ್ಣ ಕಂತನ್ನು ಸರ್ಕಾರವೇ ಭರಿಸಲಿದೆ.

| ಹಣಕಾಸು ವರ್ಷ | ಬಜೆಟ್ ಗಾತ್ರ (ಕೋಟಿಗಳಲ್ಲಿ) | ಹೆಚ್ಚಳ (ಕೋಟಿಗಳಲ್ಲಿ) |
|---|---|---|
| 2022–23 | 3,09,182 | – |
| 2023–24 | 3,27,747 | 18,565 |

**ಬ್ರ್ಯಾಂಡ್ ಬೆಂಗಳೂರು**

ರಾಜಧಾನಿ ಬೆಂಗಳೂರಿನಲ್ಲಿ ಇಂದಿರಾ ಕ್ಯಾಂಟೀನ್‌ಗಳಿಗೆ ಮರು ಚಾಲನೆ ನೀಡುವ ಮೂಲಕ ಹಸಿದ ಹೊಟ್ಟೆಗಳಿಗೆ ಅನ್ನ ಉಣಬಡಿಸುವ ಮಾನವೀಯತೆಯ ಕೆಲಸ ಒಂದೆಡೆ ಇದ್ದರೆ, ಇನ್ನೊಂದೆಡೆ ನಗರದ ಮೂಲ ಸೌಕರ್ಯಗಳನ್ನು ಮೇಲ್ದರ್ಜೆಗೆ ಹೆಚ್ಚಿಸಿ ನಗರಾಭಿವೃದ್ಧಿಗೆ ವೇಗ ನೀಡುವ ಇರಾದೆಯೂ ಬಜೆಟ್ ನಲ್ಲಿ ಇದೆ. ರಸ್ತೆಗಳ ವೈಟ್ ಟಾಪಿಂಗ್, ವೈಜ್ಞಾನಿಕವಾಗಿ ತ್ಯಾಜ್ಯ ನಿರ್ವಹಣೆ, ರಾಜಕಾಲುವೆಗಳ ಅತಿಕ್ರಮಣಕ್ಕೆ ತಡೆ, ರಸ್ತೆಗಳ ಗುಂಡಿ ಭರ್ತಿ, ನಮ್ಮ ಮೆಟ್ರೊ ಸಂಪರ್ಕ ಎರಡೂವರೆ ಪಟ್ಟು ಹೆಚ್ಚಿಸುವುದೂ ಸೇರಿದಂತೆ ನಗರ ಸ್ನೇಹಿ ಹಲವಾರು ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಾಗಿದೆ.

**ಸಂಪನ್ಮೂಲ ಕ್ರೋಡೀಕರಣ**

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಗೆ ಬಂದ ನಂತರದ ವರ್ಷಗಳಲ್ಲಿ ಸಂಪನ್ಮೂಲ ಕ್ರೋಡೀಕರಣಕ್ಕೆ ರಾಜ್ಯ ಸರ್ಕಾರಗಳಿಗೆ ಇದ್ದ ತೆರಿಗೆ ಹೆಚ್ಚಳದ ಅವಕಾಶಗಳು ಸೀಮಿತವಾಗಿವೆ. ರಾಜ್ಯಗಳ ಅಧಿಕಾರದ ವ್ಯಾಪ್ತಿಯಲ್ಲಿ ಇರುವ ಅಬಕಾರಿ ಸುಂಕ, ಮುದ್ರಾಂಕ ಶುಲ್ಕ, ವಾಹನ ನೋಂದಣಿ ಶುಲ್ಕ ಹೆಚ್ಚಳದಂತಹ ಸೀಮಿತ ಮಾರ್ಗೋಪಾಯಗಳನ್ನೇ ನೆಚ್ಚಿಕೊಳ್ಳಬೇಕಾಗಿದೆ. ಇದೇ ಕಾರಣಕ್ಕೆ ಹಿಂದೆ ಉಳಿತಾಯ ಬಜೆಟ್‌ಗೆ ಆದ್ಯತೆ ನೀಡುತ್ತಿದ್ದ ಸಿದ್ದರಾಮಯ್ಯ ಅವರು, ಈ ಬಾರಿ ಅನಿವಾರ್ಯವಾಗಿ ಕೊರತೆ ಬಜೆಟ್ ಮಂಡಿಸಿದ್ದಾರೆ. ಜೊತೆಗೆ ಸಾಲಕ್ಕೂ ಮೊರೆ ಹೋಗಿದ್ದಾರೆ.

ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಹೆಚ್ಚುವರಿ ಸಂಪನ್ಮೂಲ ಸಂಗ್ರಹಿಸಲು ಮದ್ಯದ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಶೇಕಡ 20ರಷ್ಟು, ಬಿಯರ್ ಮೇಲಿನ ಹೆಚ್ಚುವರಿ ಸುಂಕವನ್ನು ಶೇ 10ರಷ್ಟು ಹೆಚ್ಚಳ ಮಾಡಲಾಗಿದೆ. ಈ ಮೂಲದಿಂದ ರೂ. 1,000 ಕೋಟಿ ಹೆಚ್ಚುವರಿ ವರಮಾನ ನಿರೀಕ್ಷಿಸಲಾಗಿದೆ. ಸ್ಥಿರಾಸ್ತಿ ಮಾರ್ಗಸೂಚಿ ದರಗಳನ್ನು ಪರಿಷ್ಕರಿಸಲು ಉದ್ದೇಶಿಸಲಾಗಿದೆ. ಆಯ್ದ ವಾಹನಗಳ ಮೇಲಿನ ಮೋಟಾರು ವಾಹನಗಳ ತೆರಿಗೆ ಹೆಚ್ಚಳಕ್ಕೆ ಪ್ರಸ್ತಾಪಿಸಲಾಗಿದೆ. ಈ ಎಲ್ಲ ಬಾಬತ್ತುಗಳಲ್ಲಿ ಈ ವರ್ಷ ರೂ. 6 ಸಾವಿರ ಕೋಟಿ ಹೆಚ್ಚುವರಿ ವರಮಾನ ನಿರೀಕ್ಷಿಸಲಾಗಿದೆ.

ಬಜೆಟ್‌ನಲ್ಲಿ ವರಮಾನ, ಖರ್ಚು–ವೆಚ್ಚಗಳ ವಿವರ ಇರುವುದರ ಜೊತೆಗೆ ಕವಿ ಹೃದಯದ, ಕನಸುಗಳನ್ನು ಕಾಣುವ, ಅವುಗಳನ್ನು ಸಾಕಾರಗೊಳಿಸುವ ಹಾದಿಯಲ್ಲಿನ ಕವಿ–ಸಾಹಿತಿಗಳ ಆಶಯವೂ ಪ್ರಸ್ತಾಪಗೊಂಡಿರುವುದು ಗಮನಾರ್ಹವಾಗಿದೆ.

'ಬೆಳಕಿಲ್ಲದ ಹಾದಿಯಲ್ಲಿ ನಡೆಯಬಹುದು. ಆದರೆ, ಕನಸುಗಳಿಲ್ಲದ ಹಾದಿಯಲ್ಲಿ ನಡೆಯಲಿ ಹೇಗೆ?' ಎಂಬ ಗಿರೀಶ್ ಕಾರ್ನಾಡರ ಯಯಾತಿ ನಾಟಕದ ಸಾಲುಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೆನಪಿಸಿಕೊಂಡಿದ್ದಾರೆ. ಇದು, ಮಹಿಳೆಯರ, ಹಿಂದುಳಿದವರ ಕನಸುಗಳನ್ನು ನನಸಾಗಿಸಲು ಶ್ರಮಿಸುವ ಗ್ಯಾರಂಟಿಯನ್ನೂ ನೀಡಿರುವುದಕ್ಕೆ ಸಾಕ್ಷಿಯಾಗಿದೆ.

'ಆಯವ್ಯಯವೆನ್ನುವುದು ಹಣಕಾಸಿನ ನಿರ್ವಹಣೆಯ ಕಸರತ್ತು ಮಾತ್ರವೇ ಅಲ್ಲ. ನಮ್ಮ ಆದ್ಯತೆಗಳನ್ನು, ಗುರಿಗಳನ್ನು ನಿಚ್ಚಳವಾಗಿಸಿಕೊಳ್ಳುವ, ಸಾಕಾರಗೊಳಿಸಿಕೊಳ್ಳುವ ಸಾಧನ' ಎಂಬ ಅರ್ಥಪೂರ್ಣ ಸಂದೇಶವನ್ನೂ ಒಳಗೊಂಡಿರುವ ಸಿದ್ದರಾಮಯ್ಯ ಅವರ ಬಜೆಟ್, ಈ ಆಶಯ ಸಾಕಾರಗೊಳಿಸುವ ನಿಟ್ಟಿನಲ್ಲಿನ ದಾಪುಗಾಲು ಆಗಿರುವುದರಲ್ಲಿ ಎನಿತೂ ಸಂದೇಹ ಇಲ್ಲ.



Downloaded From:www.kpscvaani.com



# ಕಟ್ಟುವೆವು ನಾವು ಸಮ ಸಮಾಜದ, ಸಾಮರಸ್ಯರ ನಾಡನ್ನು
## – ಥಾವರ್ ಚಂದ್ ಗೆಹ್ಲೋಟ್

**(ರಾಜ್ಯದ ಪ್ರಥಮ ಪ್ರಜೆ, ಘನತೆವೆತ್ತ ರಾಜ್ಯಪಾಲರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣದ ಸಾರಾಂಶ.)**

ನಂಜುಂಡಪ್ಪ. ವಿ

**ಸಂ**ಸದೀಯ ಪ್ರಜಾತಂತ್ರದಲ್ಲಿ ರಾಜ್ಯಪಾಲರ ಭಾಷಣಕ್ಕೆ ಹೆಚ್ಚಿನ ಮಹತ್ವವಿದೆ. ಪ್ರತಿಯೊಂದು ವಿಧಾನಸಭೆಯ ಸಾರ್ವತ್ರಿಕ ಚುನಾವಣೆಯ ನಂತರದ ಮತ್ತು ವರ್ಷದ ಆರಂಭದ ಅಧಿವೇಶನದಲ್ಲಿ ರಾಜ್ಯದ ಪ್ರಥಮ ಪ್ರಜೆ, ಸಂವಿಧಾನ ರಕ್ಷಕರಾದ ರಾಜ್ಯಪಾಲರು ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡುವುದು ಸಂಪ್ರದಾಯ. ಸಂಸದೀಯ ನಡಾವಳಿಯಲ್ಲಿ ಇದಕ್ಕೆ ವಿಶೇಷತೆಯಿದ್ದು, ಅದರಂತೆ ಈ ಬಾರಿಯೂ ರಾಜ್ಯಪಾಲರ ಭಾಷಣಕ್ಕೆ ವಂದನೆ ಅದರಲ್ಲೂ ವಿಶೇಷವಾಗಿ ಹೊಸದಾಗಿ ಆಯ್ಕೆಯಾಗಿರುವ ಶಾಸಕರಿಗೆ ಉತ್ತಮ ಸಂಸದೀಯ ಪಟುವಾಗಲು ಇದು ವೇದಿಕೆಯಾಗಿತ್ತು.

ಜುಲೈ 3 ರಂದು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿದರು. ಬೆಳಿಗ್ಗೆ ವಿಧಾನಸೌಧದ ಮುಖ್ಯ ದ್ವಾರಕ್ಕೆ ಆಗಮಿಸಿದ ರಾಜ್ಯಪಾಲರನ್ನು ಸಭಾಧ್ಯಕ್ಷರಾದ ಯು.ಟಿ ಖಾದರ್, ಸಭಾಪತಿಗಳಾದ ಬಸವರಾಜ್ ಹೊರಟ್ಟಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಬರಮಾಡಿಕೊಂಡರು.

ನಂತರ ರಾಜ್ಯಪಾಲರು ತಮ್ಮ ಭಾಷಣ ಆರಂಭಿಸಿ, "ಹೊಸಭರವಸೆ, ಹೊಸಕನಸುಗಳನ್ನು ಹೊತ್ತಿರುವ ನೂತನ ಸದಸ್ಯರಿಗೆ ಸ್ವಾಗತಕೋರಿದರು. ನಾಡು ನುಡಿಗಾಗಿ ಅವಿರತವಾಗಿ ಶ್ರಮಿಸಿದ ಸಂತರು, ಕವಿಗಳು, ಚಿಂತಕರ ನುಡಿಮುತ್ತುಗಳನ್ನು ಸುಂದರವಾಗಿ ಜೋಡಿಸಿ ಮಾಡಿದ ಭಾಷಣ ನಿಜಕ್ಕೂ ಅಮೋಘವಾಗಿತ್ತು. ಚುನಾವಣೆಯಲ್ಲಿ ಜನತೆ ನೀಡಿದ ಜನಾದೇಶವನ್ನು ಅತ್ಯಂತ ಮಹತ್ವಪೂರ್ಣವಾಗಿ ರಾಜ್ಯಪಾಲರು ವ್ಯಾಖ್ಯಾನಿಸಿದ್ದು, ಗಮನ ಸೆಳೆಯಿತು. ನಾಡಿನ ರಕ್ಷಣೆಗೆ ಹೊಸ ಸರ್ಕಾರವನ್ನು ಚುನಾಯಿಸುವಾಗ ಜನರ ನಿರೀಕ್ಷೆಗಳು ಹೊಸತಾಗಿರುತ್ತವೆ. ಹಳೆಯದಕ್ಕಿಂತ ಭಿನ್ನ ಮತ್ತು ತಮ್ಮ ಆಶೋತ್ತರಗಳನ್ನು ಪ್ರತಿಬಿಂಬಿಸುವ ಆಡಳಿತ ವ್ಯವಸ್ಥೆಯನ್ನು ನಿರೀಕ್ಷಿಸುತ್ತಾರೆ. 34 ವರ್ಷಗಳಲ್ಲೇ ಅತ್ಯಧಿಕ ಬಹುಮತದೊಂದಿಗೆ ಹೊಸ ಸರ್ಕಾರವನ್ನು ಜನ ಆಯ್ಕೆ ಮಾಡಿದ್ದಾರೆ. ಅಂದರೆ ಅವರು ಈ ನಿರ್ಣಾಯಕ ತೀರ್ಪಿನ ಮೂಲಕ ಮಹತ್ತರವಾದುದನ್ನೇ ನಿರೀಕ್ಷಿಸುತ್ತಿದ್ದಾರೆ. ಇದನ್ನು ಹುಸಿಗೊಳಿಸುವುದಿಲ್ಲ. ಬಸವಣ್ಣನವರ ದೀಕ್ಷಾ ವಾಕ್ಯವಾದ 'ನುಡಿದಂತೆ ನಡೆಯಬೇಕು' ಎಂಬುದನ್ನು ಸರ್ಕಾರ ಕರ್ತವ್ಯ ಗೀತೆಯಾಗಿ ಅಳವಡಿಸಿಕೊಂಡಿದೆ ಎಂದು ಹೇಳಿದರು.

ಜನಪರ ಆಡಳಿತದ ಅನನ್ಯ ಮತ್ತು ಅನುಕರಣೀಯವಾದ ಹಲವು ಮಾದರಿಗಳನ್ನು ಆವಿಷ್ಕರಿಸಿದ ಖ್ಯಾತಿ



Downloaded From:www.kpscvaani.com

ಕರ್ನಾಟಕದ್ದು, ಈ ಸರ್ಕಾರವನ್ನು ಅಧಿಕಾರಕ್ಕೆ ತಂದಿರುವ ಜನಾದೇಶದ ಸಂದೇಶವೂ ಇದೇ ಆಗಿದೆ. ಬರುವ ದಿನಗಳಲ್ಲಿ ಜನಕೇಂದ್ರಿತ ಆರ್ಥಿಕತೆಗೆ ಒತ್ತು ನೀಡಿ, ಸಾಮಾಜಿಕವಾಗಿ ಎಲ್ಲರನ್ನೂ ಒಳಗೊಳ್ಳುವ ಮತ್ತು ಸಾಂಸ್ಕೃತಿಕವಾಗಿ ಚೈತನ್ಯರೂಪಿಯಾದ ಆರ್ಥಿಕ ಶಕ್ತಿಯಾಗಿ ಕರ್ನಾಟಕ ಹೊರ ಹೊಮ್ಮುವಂತೆ ಮಾಡುವುದು ಸರ್ಕಾರದ ಗುರಿ. ಕರ್ನಾಟಕ ಜಾತಿ–ಧರ್ಮ ಭೇದದ ವಿರುದ್ಧ ಮೊದಲಿನಿಂದಲೂ ಜೀವಪರ ಸೆಲೆಯನ್ನು ಚಿಮ್ಮುತ್ತಾ ಬಂದಿದೆ. ಕವಿರಾಜಮಾರ್ಗದಲ್ಲಿ ಕವಿ ಶ್ರೀವಿಜಯ "ಪರ ವಿಚಾರಗಳನ್ನು, ಪರ ಧರ್ಮಗಳನ್ನು, ಪರ ಬದುಕಿನ ನೀತಿಗಳನ್ನು ಗೌರವಿಸುವುದೇ ನಿಜವಾದ ಬಂಗಾರದ ಒಡವೆ" ಎಂದಿದ್ದಾರೆ. ಆದಿಕವಿ ಪಂಪ 'ಮನುಷ ಜಾತಿ ತಾನೊಂದೆ ವಲಂ', ರಾಷ್ಟ್ರಕವಿ ಕುವೆಂಪು ಕನ್ನಡ ನಾಡನ್ನು 'ಸರ್ವ ಜನಾಂಗದ ಶಾಂತಿಯ ತೋಟ' ಎಂದು ಬಣ್ಣಿಸಿದ್ದಾರೆ. ಹೀಗೆ ಈ ನೆಲ ಹಾದು ಬಂದ ಹಾದಿಯನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸ್ಮರಿಸಿದ್ದಾರೆ. ಸರ್ಕಾರಕ್ಕೆ ದೊರೆತ ಜನಾದೇಶ, ಮುಂದಿನ ಆಶಯಗಳನ್ನು ಅತ್ಯಂತ ಆಳವಾಗಿ ರಾಜ್ಯಪಾಲರು ಪ್ರಸ್ತಾಪಿಸಿದ್ದಾರೆ.

ವಿತ್ತೀಯ, ಆಡಳಿತಾತ್ಮಕ ಮತ್ತು ಶಾಸನಾತ್ಮಕ ಸ್ವಾಯತ್ತತೆಗಳನ್ನು ಸಮರ್ಥವಾಗಿ ಬಲಪಡಿಸಬೇಕಾಗಿದೆ. ದೇಶದ ಬೊಕ್ಕಸಕ್ಕೆ ಅಪಾರ ಕೊಡುಗೆ ನೀಡುತ್ತಿರುವ ಕರ್ನಾಟಕ ಒಂದು ರೀತಿಯ ಸಂಕಟದಲ್ಲಿದ್ದು, ಈ ಸ್ಥಿತಿಯಿಂದ ರಾಜ್ಯವನ್ನು ಮೇಲೆತ್ತುವುದು ಸರ್ಕಾರದ ಆದ್ಯತೆಯಾಗಲಿದೆ. ಜನ ಕಲ್ಯಾಣ ಮತ್ತು ಆರ್ಥಿಕ ಸ್ಥಿತಿ ಎರಡನ್ನೂ ಸಮತೂಕದಲ್ಲಿ ನಿಭಾಯಿಸಿ ಕರ್ನಾಟಕದ್ದೇ ಆದ ಹೊಸ ಆಡಳಿತ ಮಾದರಿಯನ್ನು ನನ್ನ ಸರ್ಕಾರ ದೇಶಕ್ಕೆ ಪರಿಚಯಿಸಲಿದೆ ಎಂದರು.

"ಅನ್ನವನ್ನು ನೀಡುವುದು ನನ್ನಿಯನು ನುಡಿಯುವುದು, ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ" ಕವಿ ಸರ್ವಜ್ಞ ಹೇಳಿರುವುದನ್ನು ಉಲ್ಲೇಖಿಸಿರುವ ರಾಜ್ಯಪಾಲರು, "ನನ್ನ ಸರ್ಕಾರ ಐದು ಗ್ಯಾರಂಟಿಗಳ ಮೂಲಕ ಸಾಧಿಸಲು ಹೊರಟಿರುವುದೂ ಇದನ್ನೇ ಎಂದು ಬಹಳ ಅರ್ಥವತ್ತಾಗಿ ವಿಶ್ಲೇಷಿಸಿದ್ದಾರೆ. ಬಿಪಿಎಲ್ ಕುಟುಂಬಗಳಿಗೆ ಐದು ಕೆ.ಜಿ. ಬದಲಿಗೆ ಪ್ರತಿ ತಿಂಗಳು 10 ಕೆ.ಜಿ. ಅಕ್ಕಿ ನೀಡುವ ಅನ್ನಭಾಗ್ಯ



ಅತ್ಯಾಧುನಿಕ ತಂತ್ರಜ್ಞಾನ ಇಡೀ ಜಗತ್ತನ್ನೇ ಬೆಸೆಯುತ್ತಿದ್ದು, ಸಾಮರಸ್ಯವನ್ನು ಕದಡುವ ದುಷ್ಟ ಚಿಂತನೆಗಳು ಸಹ ತಲೆಯೆತ್ತಿವೆ. ಭಿನ್ನ ಸಂಸ್ಕೃತಿಗಳ ಜನರು ಒಂದುಗೂಡಿ ಬದುಕುವುದೇ ಕರ್ನಾಟಕದ ನಿಜವಾದ ತತ್ವ ಎಂಬುದನ್ನು ಸಹಸ್ರಾರು ವರ್ಷಗಳಿಂದ ಈ ನೆಲ ಪೊರೆಯುತ್ತಾ ಬಂದಿದೆ. ಇದಕ್ಕೆ ಪೂರಕವಾದ ಒಳ್ಳೆಯ ಚಿಂತನೆಗಳನ್ನು ಸರ್ಕಾರ ಅಳವಡಿಸಿಕೊಂಡು ಜನರನ್ನು ಪರಸ್ಪರ ಬೆಸೆಯಲಿದೆ

**– ಥಾವರ್ ಚಂದ್ ಗೆಹ್ಲೋಟ್, ಘನತೆವೆತ್ತ ರಾಜ್ಯಪಾಲರು**

ಯೋಜನೆಯನ್ನುಪರಿಣಾಮಕಾರಿಯಾಗಿ ಜಾರಿಗೊಳಿಸಲಿದೆ. ಇದಕ್ಕಾಗಿ ಹೆಚ್ಚುವರಿ ಅಕ್ಕಿ ದೊರೆಯುವವರೆಗೆ ಪ್ರತಿ ತಿಂಗಳು, ಫಲಾನುಭವಿ ಕುಟುಂಬದವರಿಗೆ ಪ್ರತಿ ಕೆ.ಜಿ ಅಕ್ಕಿಗೆ ಬದಲಾಗಿ 34 ರೂಪಾಯಿಯಂತೆ ಹಣವನ್ನು ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡುತ್ತದೆ. ಅದಕ್ಕಾಗಿ ಯಾವುದೇ ತ್ಯಾಗ ಮಾಡಿಯಾದರೂ ಸರಿ ನನ್ನ ಸರ್ಕಾರವು ಈ ಯೋಜನೆಯನ್ನು ನುಡಿದಂತೆ ಅನುಷ್ಠಾನ ಮಾಡಿಯೇ ತೀರುತ್ತದೆ. ಹಸಿವು ತಣಿಸಲು ಸ್ಥಾಪಿಸಿದ್ದ ಇಂದಿರಾ ಕ್ಯಾಂಟೀನುಗಳು ಲಕ್ಷಾಂತರ ಜನರ ಹಸಿದ ಹೊಟ್ಟೆ ತುಂಬಿಸಿ ತೃಪ್ತಿ ನೀಡಿವೆ. ಇವುಗಳನ್ನು ಇನ್ನೂ ಸಮರ್ಥವಾಗಿ ನಡೆಸುವ ಮೂಲಕ ರಾಜ್ಯವನ್ನು ಹಸಿವು ಮುಕ್ತ ಮಾಡಲಿದೆ ಎಂದರು.

ಯುವನಿಧಿ ಯೋಜನೆಯಡಿ 2022–23 ರಲ್ಲಿ ಉತ್ತೀರ್ಣರಾಗಿ 6 ತಿಂಗಳೊಳಗೆ ಉದ್ಯೋಗ ಸಿಗದ ನಿರುದ್ಯೋಗಿ ಪದವೀಧರ, ಸ್ನಾತಕೋತ್ತರ ಪದವೀಧರರಿಗೆ ತಿಂಗಳಿಗೆ ರೂ. 3,000/, ಡಿಪ್ಲೊಮಾದಾರರಿಗೆ ರೂ.1,500/– ನೀಡುವ ಯೋಜನೆಯನ್ನು ರೂಪಿಸಿದ್ದು, 24 ತಿಂಗಳುಗಳ ಕಾಲ ಅಥವಾ ಉದ್ಯೋಗ ಸಿಗುವವರೆಗೆ, ಸ್ವ–ಉದ್ಯೋಗ ಪ್ರಾರಂಭಿಸಿ ಸ್ವಾವಲಂಬಿಯಾಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಭತ್ಯೆ ನೀಡಲಾಗುವುದು.

ಗೃಹಜ್ಯೋತಿ ಯೋಜನೆಯಲ್ಲಿ 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ನೀಡುವುದರಿಂದ ಸುಮಾರು 2.14 ಕೋಟಿ ಕುಟುಂಬಗಳ ಗ್ರಾಹಕರಿಗೆ ಅಂದರೆ ಶೇ.98 ರಷ್ಟು ಕುಟುಂಬಗಳಿಗೆ ಪ್ರಯೋಜನವಾಗಲಿದೆ. ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ತಿಂಗಳು ಕುಟುಂಬದ ಮುಖ್ಯಸ್ಥರಾಗಿರುವ ಮಹಿಳೆಯರಿಗೆ ರೂ 2,000/– ನೀಡುತ್ತೇವೆ. ಬೆಲೆ ಏರಿಕೆಯಿಂದಾಗಿ ತತ್ತರಿಸಿರುವ ಮಹಿಳೆಯರಿಗೆ ಇದರಿಂದಾಗಿ ಆರ್ಥಿಕ ಚೈತನ್ಯ ಲಭಿಸಲಿದೆ ಎಂದು ಹೇಳಿದರು.

ಅನೇಕ ದೇಶಗಳು ಜನಕೇಂದ್ರಿತ ಆರ್ಥಿಕತೆಯನ್ನು ಪ್ರತಿಪಾದಿಸುತ್ತಿದ್ದು, ಇಲ್ಲಿ ಸಾರ್ವತ್ರಿಕ ಮೂಲ ಆದಾಯ ಎಂಬ ಪರಿಕಲ್ಪನೆಯು ಪ್ರಬಲಗೊಳ್ಳುತ್ತಿದೆ. ಇದು ಉಳ್ಳವರು ಮತ್ತು ಇಲ್ಲದವರ ನಡುವಿನ ಅಂತರವನ್ನು ತುಸುವಾದರೂ ಕಡಿಮೆ ಮಾಡಲಿದೆ. ಮಾನವೀಯತೆ ಮತ್ತು ಅಭಿವೃದ್ಧಿಪರ ಚಿಂತನೆಯೊಂದಿಗೆ ವಿಕಾಸವಾಗುತ್ತಿರುವ ಈ ಆರ್ಥಿಕ ನೀತಿಯಿಂದ ಸಂಪತ್ತು ಕೆಲವರ ಕೈಯಲ್ಲೇ ಕೇಂದ್ರೀಕೃತಗೊಳ್ಳುವುದನ್ನು ನಿವಾರಿಸುತ್ತದೆ. ಬೆಲೆ ಏರಿಕೆ ಹಾಗೂ ಕಡಿಮೆ ಆದಾಯದಿಂದ ತತ್ತರಿಸಿರುವ ಜನರಿಗೆ ಘನತೆ ತಂದುಕೊಡುತ್ತದೆ. ಈ ಯೋಜನೆಗಳ ಮೂಲಕ ಹೊಸ ಅಭಿವೃದ್ಧಿ ಮಾದರಿಯೊಂದನ್ನು ರೂಪಿಸಿ, ಜನರಿಗೆ ಅವರಿಂದಲೇ ಸೃಷ್ಟಿಯಾದ ಸಂಪತ್ತಿನಲ್ಲಿ



Downloaded From:www.kpscvaani.com



ಒಂದು ಪಾಲನ್ನು ಕೊಡುವ ಕೆಲಸವನ್ನು ನನ್ನ ಸರ್ಕಾರ ಮಾಡಲಿದೆ. ಬಡವರು, ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದವರ ಜೊತೆಗೆ ಎಲ್ಲರೂ ನ್ಯಾಯಯುತ ಪಾಲು ಪಡೆಯುವಂತೆ ಮಾಡುವುದು ಸರ್ಕಾರದ ಗುರಿಯಾಗಿದೆ ಎಂದರು.

ಮಕ್ಕಳ ಮೂಲಭೂತ ಹಕ್ಕನ್ನು ಸಂರಕ್ಷಿಸಿ, ಪ್ರತಿ ಮಗು ಕೂಡ ದೇಶದ ಸಂಪತ್ತು ಎಂಬ ಪ್ರಾಥಮಿಕ ತಿಳುವಳಿಕೆಯ ಮೂಲಕ ಆಡಳಿತ ನಡೆಸಲು ಬದ್ಧರಾಗಿದ್ದೇವೆ. ಸ್ಥಳೀಯ ಜ್ಞಾನದ ಪರ್ವತಗಳಾಗಿರುವ ರೈತರು, ಕುಶಲಕರ್ಮಿಗಳು, ವಿವಿಧ ಕ್ಷೇತ್ರಗಳ ತಜ್ಞರು ಆಡಳಿತ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವುದು ಅಗತ್ಯ. ಅದಕ್ಕೆ ಬೇಕಿರುವ ಆಡಳಿತಾತ್ಮಕ ಚೌಕಟ್ಟುಗಳನ್ನು ಸರ್ಕಾರ ರೂಪಿಸಿ ಜಾರಿಗೊಳಿಸಲಿದೆ. ನಮ್ಮ ಶಿಕ್ಷಣದಲ್ಲಿ ಕರುಣೆ, ಬುದ್ಧಿ ಮತ್ತು ಕೌಶಲ್ಯಗಳು ಏಕೀಭವಿಸಿದ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕಾಗಿದೆ. ಕೈ ಕಾಲುಗಳ ಮೂಲಕ ಕೌಶಲ್ಯವನ್ನು, ಮೆದುಳು, ಹೃದಯದ ಮೂಲಕ ಬುದ್ಧಿ-ಕರುಣೆಗಳು ಸೇರಿದ ಸಮಗ್ರ ಶಿಕ್ಷಣವನ್ನು ರೂಪಿಸಲು ಬೇಕಾದ ವ್ಯವಸ್ಥೆಯನ್ನು ರಚಿಸಲಾಗುವುದು. ಇದು ಸಾಧ್ಯವಾಗಬೇಕಾದರೆ ನಿರ್ಭೀತ, ಮುಕ್ತ, ಉದಾರ, ವೈಚಾರಿಕ ಮತ್ತು ವೈಜ್ಞಾನಿಕವೂ ಆದ ತಜ್ಞರು, ಚಿಂತನಶೀಲ ಜನರು, ಬುದ್ಧಿವಂತರು ಭಾಗವಹಿಸುವ ವ್ಯವಸ್ಥೆ ಪೂರ್ಣ ಪ್ರಮಾಣದಲ್ಲಿ ನಿರ್ಮಾಣವಾಗಬೇಕು. ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಸಾಮರಸ್ಯದ ವಾತಾವರಣದಲ್ಲಿ ಮಕ್ಕಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸರ್ಕಾರ ಸಂಪೂರ್ಣ ಗಮನ ನೀಡುತ್ತದೆ. ಜ್ಞಾನಾಧಾರಿತ ಶಿಕ್ಷಣದಿಂದ ಕೌಶಲ್ಯಾಧರಿತ ಶಿಕ್ಷಣದತ್ತ ಪರಿವರ್ತನೆಯಾಗಿರುವ ಇಂದಿನ ಯುಗದಲ್ಲಿ ಜ್ಞಾನ-ಕೌಶಲ್ಯ ಒಳಗೊಂಡ ಸಮಗ್ರ ಶಿಕ್ಷಣದ ಮಹತ್ವವನ್ನು ರಾಜ್ಯಪಾಲರು ಸಾರಿದ್ದಾರೆ.

ಪರಿಶಿಷ್ಟ ಜಾತಿ, ಪಂಗಡದ ಜನರ ಭೂಮಿಗಳ ರಕ್ಷಣೆಗೆ ಸಂಬಂಧಿಸಿದಂತೆ ಪಿ.ಟಿ.ಸಿ.ಎಲ್ ಕಾಯ್ದೆಗೆ ಅಗತ್ಯ ತಿದ್ದುಪಡಿ ತಂದು, ದಮನಿತ ಸಮುದಾಯಗಳ ಯುವಜನರಿಗೆ ಸಶಕ್ತವಾದ ಕೌಶಲ್ಯಭರಿತ ತರಬೇತಿ ನೀಡಿ ಉದ್ಯೋಗ ಪಡೆದು ಸ್ವಾವಲಂಬಿಗಳಾಗುವಂತೆ ಮಾಡಲಾಗುವುದು. ಪೌರಕಾರ್ಮಿಕರು, ಚಾಲಕರು, ಬೀದಿಬದಿ ವ್ಯಾಪಾರಿಗಳು, ಸಿದ್ಧಉಡುಪು, ಕಟ್ಟಡ ಕಾರ್ಮಿಕರು, ಅಸಂಘಟಿತ ಮತ್ತು ಹಿರಿಯ ನಾಗರಿಕರು, ವಿಶೇಷ ಚೇತನರು, ದೇವದಾಸಿಯರು, ಲೈಂಗಿಕ ಅಲ್ಪಸಂಖ್ಯಾತರು ಸೇರಿದಂತೆ ಎಲ್ಲ ವರ್ಗಗಳ ಕಲ್ಯಾಣಕ್ಕೆ ಸರ್ಕಾರ ಆದ್ಯತೆ ನೀಡಲಿದೆ. ನಾಗರಿಕ ಸಮಾಜದ ಮಾನಸಿಕ ಆರೋಗ್ಯ ರಕ್ಷಿಸಿ, ತಲೆ ಮೇಲೊಂದು ಸೂರು ಪಡೆಯುವ ಪರಿಕಲ್ಪನೆಯನ್ನು ಸಾಕಾರಗೊಳಿಸುತ್ತೇವೆ. ಪ್ರಾದೇಶಿಕ ಅಸಮಾನತೆ ನಿವಾರಣೆ ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಅಭ್ಯುದಯದ ಬಗ್ಗೆಯೂ ರಾಜ್ಯಪಾಲರು ಬೆಳಕು ಚೆಲ್ಲಿದ್ದಾರೆ.

ಕೃಷಿ ವ್ಯವಸ್ಥೆಯನ್ನು ಸಮಗ್ರ ದೃಷ್ಟಿಕೋನದ ಮೂಲಕ ಮುನ್ನಡೆಸುವ, ರೈತರ ಪಾರಂಪರಿಕ ಜ್ಞಾನ, ಆಧುನಿಕ, ವೈಜ್ಞಾನಿಕ ಪದ್ಧತಿಗಳು ಸಮ್ಮಿಲನಗೊಂಡ ವ್ಯವಸ್ಥೆಯನ್ನು ರೂಪಿಸಲಾಗುವುದು. ರೈತರ ಕೃಷಿ ಉತ್ಪನ್ನಗಳ ಮಾರುಕಟ್ಟೆಗಳ ಮರು ನಿರ್ಮಾಣ, ಎ.ಪಿ.ಎಂ.ಸಿ ಗಳನ್ನು ಇನ್ನಷ್ಟು ಸುಧಾರಿಸಿ ರೈತಸ್ನೇಹಿಯಾಗಿಸಲಿದ್ದೇವೆ ಎಂದು ರಾಜ್ಯಪಾಲರು ಹೇಳಿದ್ದಾರೆ.

ಸರ್ಕಾರವು ಜನ, ಪರಿಸರ ಸ್ನೇಹಿಯೂ ಆದ ಪ್ರವಾಸೋದ್ಯಮವನ್ನು ಉತ್ತೇಜಿಸಿ ಕನಿಷ್ಠ 5 ಲಕ್ಷ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿದೆ. ನಾಡಿನಲ್ಲಿರುವ ಪುವಾಸಿ ಸ್ಥಳಗಳ ಪರಿಸರ, ಸಂಸ್ಕೃತಿ ಸೂಕ್ಷ್ಮತೆಯನ್ನು ಅರಿತು ಗೌರವಿಸುವಂತೆ ಪ್ರವಾಸಿಗರಿಗೆ ಅರಿವು ಮೂಡಿಸಲು ಎಲ್ಲಾ ಕ್ರಮಗಳನ್ನು ಸರ್ಕಾರ ಕೈಗೊಳ್ಳಲಿದೆ. ಕೃತಕ ಬುದ್ಧಿಮತ್ತೆ ಒಂದು ಹೊಸ ತಂತ್ರಜ್ಞಾನವಾಗಿದ್ದು, ಇದು ಸರಿ ಸಾಟಿಯಿಲ್ಲದ ಅವಕಾಶಗಳ ಜೊತೆಗೆ ಭಯದ ವಾತಾವರಣವನ್ನೂ ಸೃಷ್ಟಿಸುತ್ತದೆ. ಯಾವುದೇ ತಂತ್ರಜ್ಞಾನವನ್ನು ಮಾನವಕುಲದ ಪುಯೋಜನಕ್ಕಾಗಿ ಬಳಸಬಹುದು, ಆದರೆ ಅದೇ ಸಮಯದಲ್ಲಿ ಅದನ್ನು ದುರುಪಯೋಗ ಪಡಿಸಿಕೊಳ್ಳಲೂಬಹುದು. ಆದ್ದರಿಂದ ಅನೇಕ ದೇಶಗಳು ಕೃತಕ ಬುದ್ಧಿಮತ್ತೆಯನ್ನು ನಿಯಂತ್ರಿಸುವ ಕಾರ್ಯಕ್ಕೆ ಮುಂದಾಗುತ್ತಿವೆ. ಕೃತಕ ಬುದ್ಧಿಮತ್ತೆಯ ಸಕಾರಾತ್ಮಕ ಜನ-ಆಧಾರಿತ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ ಎಂದು ರಾಜ್ಯಪಾಲರು ಆಧುನಿಕ ತಂತ್ರಜ್ಞಾನದ ಬಗ್ಗೆಯೂ ಬೆಳಕು ಚೆಲ್ಲಿದ್ದಾರೆ.

ಮಹಾತ್ಮಾ ಗಾಂಧಿ ನರೇಗಾ ಯೋಜನೆಯು ಗ್ರಾಮೀಣ ಬಡವರ ಆರ್ಥಿಕ ಸಬಲೀಕರಣಕ್ಕಾಗಿ ರೂಪುಗೊಂಡ ವಿಶ್ವದಲ್ಲಿಯೇ ಅತಿದೊಡ್ಡ ಕಾರ್ಯಕ್ರಮ. ಇದನ್ನು ರಾಜ್ಯದಲ್ಲಿ ಇನ್ನಷ್ಟು ಸಮರ್ಥವಾಗಿ ಬಲಪಡಿಸುತ್ತೇವೆ. ಕಾನೂನು ಸುವ್ಯವಸ್ಥೆಯ ನಿಯಂತ್ರಣ, ಸಮರ್ಥ ಪೊಲೀಸ್ ವ್ಯವಸ್ಥೆಯನ್ನು ನಿರ್ಮಿಸಲು ಸರ್ಕಾರ ಬದ್ಧವಾಗಿದೆ. ಜೊತೆಗೆ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ, ಯೋಗಕ್ಷೇಮಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲು ಪೊಲೀಸ್ ಇಲಾಖೆಯನ್ನು ಮಹಿಳಾ ಮತ್ತು ಮಕ್ಕಳ ಸ್ನೇಹಿಯಾಗಿ ರೂಪಿಸುವುದು ಸರ್ಕಾರದ ಆದ್ಯತೆಯಾಗಿದೆ. ಕರ್ನಾಟಕದ ಆರ್ಥಿಕತೆಯಲ್ಲಿ ದೇಶದ ಅಭಿವೃದ್ಧಿಗೂ ಸಿಂಹಪಾಲನ್ನು ನೀಡುತ್ತಿರುವ ಬೆಂಗಳೂರನ್ನು ಮತ್ತೊಮ್ಮೆ ವಿಶ್ವದ ಗಮನ ಸೆಳೆಯುವಂತೆ ಮಾಡಲಿದೆ ಎಂದರು.

ರಾಜ್ಯಪಾಲರ ಭಾಷಣದ ಮೇಲೆ ವಿಧಾನಮಂಡಲದಲ್ಲಿ ಸಮಗ್ರವಾಗಿ ಚರ್ಚೆ ನಡೆಯಿತು. ವಿಶೇಷವಾಗಿ ಮೊದಲಬಾರಿಗೆ ಆಯ್ಕೆಯಾದ ಶಾಸಕರು ಸಹ ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎರಡೂ ಸದನಗಳಲ್ಲಿ ಚರ್ಚೆಗೆ ಸಮರ್ಥವಾಗಿ ಉತ್ತರ ನೀಡಿ, ಸರ್ಕಾರ ಸರ್ವರ ಶ್ರೇಯೋಭಿವೃದ್ಧಿಯ ಜೊತೆಗೆ ಸಂವಿಧಾನದ ಆಶಯಗಳನ್ನು ಈಡೇರಿಸಲಿದೆ ಎಂದು ರಾಜ್ಯಪಾಲರ ಭಾಷಣವನ್ನು ಬಲವಾಗಿ ಸಮರ್ಥಿಸಿ ಕೊಂಡರು. ಎರಡೂ ಸದನಗಳಲ್ಲಿ ವಂದನಾ ನಿರ್ಣಯ ಅಂಗೀಕಾರವಾಯಿತು. ■



Downloaded From:www.kpscvaani.com




# ಆಯವ್ಯಯ ಮಂಡನೆಯಲ್ಲಿ ಮುಖ್ಯಮಂತ್ರಿಗಳ ಚರಿತ್ರಾರ್ಹ ದಾಖಲೆ



ಶಫಿ. ಎಸ್

**ಕ**ರ್ನಾಟಕದಲ್ಲಿ ಅತಿ ಹೆಚ್ಚು ಬಜೆಟ್‌ಗಳನ್ನು ಮಂಡಿಸಿದ ಹೆಗ್ಗಳಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಾತ್ರರಾಗಿದ್ದಾರೆ. ಅವರು ಹಣಕಾಸು ಸಚಿವರಾಗಿ ಐದು ಬಾರಿ (1995 ರಿಂದ 2000), ಉಪ ಮುಖ್ಯಮಂತ್ರಿಯಾಗಿ ಎರಡು ಬಾರಿ (2004ರಿಂದ 2006) ಹಾಗೂ ಮುಖ್ಯಮಂತ್ರಿಯಾಗಿ ಏಳು ಬಾರಿ (2013 ರಿಂದ 2019 ಹಾಗೂ 2023) ಒಟ್ಟು 14 ಬಜೆಟ್‌ಗಳನ್ನು ಮಂಡಿಸಿದ್ದಾರೆ.

ಸಿದ್ದರಾಮಯ್ಯ ಅವರು ಪ್ರಥಮ ಬಾರಿಗೆ ಬಜೆಟ್ ಮಂಡಿಸಿದ್ದು 1995ರಲ್ಲಿ ಅಂದಿನ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ದೇವೇಗೌಡ ಅವರ ಸಂಪುಟದಲ್ಲಿ ಹಣಕಾಸು ಹಾಗೂ ಯೋಜನಾ ಖಾತೆ ಸಚಿವರಾಗಿದ್ದಾಗ. ಆಗ ಅವರಿಗೆ ಕೇವಲ 45ರ ಹರೆಯ.

'ಕರ್ನಾಟಕದಲ್ಲಿ  ನಮ್ಮ ಅಭಿವೃದ್ಧಿ ತತ್ವವು ಬಸವೇಶ್ವರ, ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಮಹಾತ್ಮಾ ಗಾಂಧಿಯವರ ಬೋಧನೆಗಳಿಂದ ರೂಪುಗೊಂಡಿದ್ದು, ಬಸವಣ್ಣನವರು ಪ್ರತಿಪಾದಿಸಿದ ಕಾಯಕ ಮತ್ತು ದಾಸೋಹ ತತ್ವಗಳು ನಮ್ಮ ಆಡಳಿತವನ್ನು ಆಳವಾಗಿ ಪ್ರಭಾವಿಸಿವೆ' ಎಂಬ ಸಿದ್ದರಾಮಯ್ಯ ಅವರ ಮಾತು ಅವರು ಮಂಡಿಸಿದ ಎಲ್ಲಾ ಆಯವ್ಯಯಗಳಲ್ಲಿ ಪ್ರತಿಫಲಿತವಾಗಿದೆ.

ಡಾ.ಅಂಬೇಡ್ಕರ್ ಅವರ 126ನೇ ಜಯಂತೋತ್ಸವ ಸ್ಮರಣಾರ್ಥ ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅಭಿವೃದ್ಧಿ


Downloaded From:www.kpscvaani.com





ಕುರಿತಾದ ಅವರ ಕಲ್ಪನೆಯನ್ನು ಕಾಣಬಹುದು. ಹಣಕಾಸು ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ಬಜೆಟ್ ರೂಪಿಸುವಾಗ, ಹಳ್ಳಿಯ ಶ್ರೀಮಂತನ ಮನೆಯ ಬಾಗಿಲಲ್ಲಿ ನಿಂತು, ಹಸಿವಿನಿಂದ ಬಳಲುತ್ತಿರುವ ತನ್ನ ಮಗಳಿಗಾಗಿ ಹಿಡಿ ಅನ್ನ ಬೇಡುವ ತಂದೆಯ ಚಿತ್ರ ಕಣ್ಣ ಮುಂದೆ ಬರುತ್ತದೆ. ರಾಜಕೀಯ ಹಕ್ಕುಗಳನ್ನು ಹಸಿದ ಹೊಟ್ಟೆ ಇಟ್ಟುಕೊಂಡು ಪಡೆಯುವುದು ಸಾಧ್ಯವಿಲ್ಲ ಎಂಬ ಅಂಬೇಡ್ಕರ್ ಅವರ ಮಾತು ನೆನಪಿಗೆ ಬರುತ್ತದೆ ಎಂದು ನೆನಪಿಸಿಕೊಂಡಿದ್ದರು.

ಸುದೀರ್ಘ ಕಾಲ ಕರ್ನಾಟಕ ರಾಜ್ಯದ ಆಯವ್ಯಯ ಪತ್ರವನ್ನು ಮಂಡಿಸಿರುವ ಸಿದ್ದರಾಮಯ್ಯ ಅವರ ಆರ್ಥಿಕ ಚಿಂತನೆಗಳಿಗೆ ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆಗಳೇ ಮೂಲವಾಗಿವೆ.

ತಮ್ಮ ಸಮ ಸಮಾಜದ ಕಲ್ಪನೆಯನ್ನು ಕೇವಲ ಮಾತಿಗೆ ಸೀಮಿತಗೊಳಿಸದೆ ಉದ್ದೇಶಿತ ಗುರಿ ಸಾಧನೆಗೆ ತಮ್ಮ ಬಜೆಟ್‌ಗಳಲ್ಲಿ ಒತ್ತು ನೀಡಿದ್ದಾರೆ. ಜಾತಿ ಮತ್ತು ಇತರ ಸಾಮಾಜಿಕ ಕಾರಣಗಳಿಂದಾಗಿ ಶೋಷಣೆ ಮತ್ತು ನಿರ್ಲಕ್ಷ್ಯಕ್ಕೆ ಒಳಗಾಗಿರುವ ತಳ ಸಮುದಾಯಗಳ ನೆಲೆಯಿಂದ ಇಡೀ ಕರ್ನಾಟಕವನ್ನು ನೋಡುವ ಅವರ ದೃಷ್ಟಿಕೋನವನ್ನು ಬಜೆಟ್‌ನಲ್ಲಿ ಕಾಣಬಹುದು.

ಹೆಚ್.ಡಿ.ದೇವೇಗೌಡ ಅವರ ಸಂಪುಟದಲ್ಲಿ ಹಣಕಾಸು ಮಂತ್ರಿಯಾಗಿ 1995ರ ಸಾಲಿನಲ್ಲಿ ಮಂಡಿಸಿದ್ದ ಚೊಚ್ಚಲ ಬಜೆಟ್‌ನಲ್ಲಿಯೇ ಅವರ ಸಾಮಾಜಿಕ ನ್ಯಾಯದ ವಿಷಯದಲ್ಲಿನ ಬದ್ಧತೆಗೆ ಉದಾಹರಣೆಗಳು ದೊರೆಯುತ್ತವೆ. ವೃದ್ಧರು, ವಿಧವೆಯರು ಮತ್ತು ಅಂಗವಿಕಲರ ಸಾಮಾಜಿಕ ಮತ್ತು ಆರ್ಥಿಕ ಭದ್ರತೆಗಾಗಿ ವೃದ್ಧಾಶ್ರಮಗಳಿಗೆ ನೆರವು, ವಿಧವೆಯರಿಗಾಗಿ ಸ್ವಶಕ್ತಿ ಕಾರ್ಯಕ್ರಮ, ವಿಶೇಷ ಚೇತನರಿಗಾಗಿ 'ಆಧಾರ' ಯೋಜನೆಯನ್ನು ಪ್ರಸ್ತಾಪಿಸುತ್ತಾರೆ.

ಪ್ರಕೃತಿ ವಿಕೋಪದಿಂದ ರೈತರಿಗೆ ಉಂಟಾದ ನಷ್ಟವನ್ನು ಪರಿಗಣಿಸಿ ಸಹಕಾರಿ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ, ಸಾರ್ವಜನಿಕ ಪಡಿತರ ವ್ಯವಸ್ಥೆ ಮೂಲಕ ನೀಡುವ ಅಕ್ಕಿ



Downloaded From:www.kpscvaani.com





ಸಬ್ಸಿಡಿ ಹೆಚ್ಚಳ, ಗ್ರಾಮೀಣಾಭಿವೃದ್ಧಿಗೆ ಶೇ.15ರಷ್ಟು ಅನುದಾನ ಹೆಚ್ಚಳ, ಬಡವರಿಗಾಗಿ 100 ಕೋಟಿ ರೂ. ಆರೋಗ್ಯ ನಿಧಿ ಸ್ಥಾಪನೆ, ಅಸಂಘಟಿತ ಕಾರ್ಮಿಕರ ಕನಿಷ್ಠ ಮಜೂರಿ ಹೆಚ್ಚಳ ಇವು ಸಿದ್ದರಾಮಯ್ಯ ಅವರ ಪ್ರಥಮ ಬಜೆಟ್‌ನ ಕೆಲವು ಜನಪರ ಅಂಶಗಳು.

ಅವರ ಇದೇ ಸಾಮಾಜಿಕ ಬದ್ಧತೆಯನ್ನು ಮುಂದಿನ ಎಲ್ಲಾ 13 ಬಜೆಟ್‌ಗಳಲ್ಲಿಯೂ ಕಾಣಬಹುದು. 1996 ನೇ ಸಾಲಿನ ಬಜೆಟ್‌ನಲ್ಲಿ ಹೆಣ್ಣು ಮಕ್ಕಳ ಕುರಿತಾದ ತಾರತಮ್ಯ ನಿವಾರಿಸುವ ಉದ್ದೇಶದಿಂದ 'ನಮ್ಮ ಮಗಳು ನಮ್ಮ ಶಕ್ತಿ' ಎಂಬ ಹೊಸ ಯೋಜನೆಯನ್ನು ಘೋಷಿಸುತ್ತಾರೆ. ಇದೇ ತುಡಿತಗಳನ್ನು ಅವರು 1999–2000 ನೇ ಸಾಲಿನಲ್ಲಿ ಮಂಡಿಸಿದ ಸತತ 5ನೇ ಬಜೆಟ್‌ನಲ್ಲಿಯೂ ಕಾಣಬಹುದು.

ಮುಂದೆ ಎನ್. ಧರ್ಮಸಿಂಗ್ ಅವರ ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಮಂತ್ರಿಯಾಗಿ ಅವರು ಮಂಡಿಸಿದ ಎರಡು ಬಜೆಟ್‌ಗಳಲ್ಲಿಯೂ ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆ ಸ್ಪಷ್ಟವಾಗುತ್ತದೆ.

ಅವರು 2004ರ ಬಜೆಟ್ ಭಾಷಣದಲ್ಲಿ ಅಭಿವೃದ್ಧಿ ಕುರಿತಾದ ತಮ್ಮ ನೋಟವನ್ನು ಈ ರೀತಿ ಹೇಳುತ್ತಾರೆ. 'ಅಭಿವೃದ್ಧಿಯ ಹಾದಿಯಲ್ಲಿ ನಮ್ಮ ನೀತಿ ಗ್ರಾಮೀಣ ಕೇಂದ್ರಿತ ನೋಟವನ್ನು ಕಳೆದು ಕೊಳ್ಳಬಾರದು. ಸಮಾನರ ನಡುವೆ ಮಾತ್ರ ಸಮಾನತೆ ಇರಲು ಸಾಧ್ಯ ಎನ್ನುವುದು ನನ್ನ ದೃಢವಾದ ನಂಬಿಕೆ. ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯಿಂದ ಬಳಲುತ್ತಿರುವ ಈ ಸಮಾಜದಲ್ಲಿ ಸಮಾನತೆ ತರುವಲ್ಲಿ ಸಹಾಯಧನಗಳು ಒಂದು ಸಾಧನ. ವರ್ಗರಹಿತ ಮತ್ತು ಜಾತಿರಹಿತ ಸಮಾಜ ನಿರ್ಮಿಸುವಲ್ಲಿ ಸಹಾಯಧನಗಳು ಅತ್ಯಗತ್ಯ ಎಂದು ಹೇಳಲು ನನಗೆ ಯಾವುದೇ ಹಿಂಜರಿಕೆ ಇಲ್ಲ'.

**ನೊಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಅಮಾರ್ತ್ಯ ಸೇನ್ ಹೇಳಿರುವಂತೆ 'ಜನರ ಬದುಕು ಉತ್ತಮಗೊಳ್ಳುವ, ಸಮೃದ್ಧಗೊಳ್ಳುವ ಪ್ರಕ್ರಿಯೆಯೇ ಅಭಿವೃದ್ಧಿ' ಎಂಬ ಸೈದ್ಧಾಂತಿಕ ನಿಲುವು ಸಿದ್ದರಾಮಯ್ಯ ಅವರದ್ದು.**



'ಮಾರುಕಟ್ಟೆ ಶಕ್ತಿಗಳನ್ನು ಸರ್ಕಾರ ನಿಯಂತ್ರಿಸದಿದ್ದರೆ, ಅವು ತಮ್ಮ ಹಿತಾಸಕ್ತಿಯನ್ನು ಈಡೇರಿಸಿಕೊಳ್ಳುವ ಭರದಲ್ಲಿ ದುರ್ಬಲ ವರ್ಗದ ಜನರನ್ನು ಮುಕ್ಕಿ ತಿನ್ನುತ್ತವೆ. ಆದ್ದರಿಂದ ನಮ್ಮ ಅಭಿವೃದ್ಧಿಯ ಪರಿಕಲ್ಪನೆಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುರ್ಬಲರಾಗಿರುವ ಜನಸಮುದಾಯಗಳು ಗೌರವಯುತವಾಗಿ ಜೀವನ ಸಾಗಿಸಲು ಪೂರಕವಾಗಿರಬೇಕು ಹಾಗೂ ಕೃಷಿ ಆಧಾರಿತ ಮತ್ತು ಕೆಳವರ್ಗದ ಜನತೆಯ ಆದಾಯ ಹೆಚ್ಚಿಸುವಂತಹ ಕಾರ್ಯಕ್ರಮಗಳತ್ತ ಕೇಂದ್ರೀಕೃತವಾಗಿರಬೇಕು'.

2005ರ ಬಜೆಟ್‌ನಲ್ಲಿ ರಾಜ್ಯದ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ವರ್ಗದ ಮಕ್ಕಳಿಗೆ 40 ವಸತಿ ಶಾಲೆಗಳನ್ನು ಆರಂಭಿಸುವುದು, ವಿದೇಶದಲ್ಲಿ ವಿದ್ಯಾಭ್ಯಾಸ ಮಾಡಲು ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಅವಕಾಶ ಕಲ್ಪಿಸುವ ಯೋಜನೆಯನ್ನು ಇತರ ಹಿಂದುಳಿದ



Downloaded From:www.kpscvaani.com



ವರ್ಗದವರಿಗೂ ವಿಸ್ತರಿಸುವ ಹಾಗೂ ಹಿಂದುಳಿದ ವರ್ಗದ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಿದ್ದರಾಮಯ್ಯ ಅವರು ಪ್ರಕಟಿಸುತ್ತಾರೆ.

ಸಿದ್ದರಾಮಯ್ಯ ಅವರು ಬಜೆಟ್ ಮೂಲಕ ಅನುಷ್ಠಾನಗೊಳಿಸಿದ ಹಲವಾರು ಯೋಜನೆಗಳು ಬಡವರ, ದೀನ ದಲಿತರ ಸ್ಥಿತಿಗತಿಗಳ ಸಮಗ್ರ ಅರಿವಿನ ತಳಹದಿಯಲ್ಲಿ ರೂಪಿತವಾದವು. ಅವರು 2013ರಲ್ಲಿ ಪ್ರಥಮ ಬಾರಿಗೆ ಮುಖ್ಯಮಂತ್ರಿಯಾದಾಗಿನ ಮೊದಲ ಸಂಪುಟ ಸಭೆಯಲ್ಲಿ 'ಅನ್ನಭಾಗ್ಯ' ಯೋಜನೆಯ ಘೋಷಣೆ ಅವರ ಸಾಮಾಜಿಕ ಬದ್ಧತೆಗೆ ಸಾಕ್ಷಿ.

ಪ್ರಥಮ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು 2013ರಿಂದ 2019ರವರೆಗೆ ಮಂಡಿಸಿದ ಆರು ಬಜೆಟ್‌ಗಳಲ್ಲಿ ಅಂಬೇಡ್ಕರ್ ಆಶಯದ ಸಾಮಾಜಿಕ ಸಮಾನತೆ ಸಾಧಿಸುವ ಗುರಿ ಹೊಂದಿದ ಕಾರ್ಯಕ್ರಮಗಳಿಗೆ ಒತ್ತು ಕೊಟ್ಟು ಅವುಗಳನ್ನು ಮತ್ತಷ್ಟು ವಿಸ್ತರಿಸಿದರು.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ತಕ್ಷಣ ಅವರು ಮಾಡಿದ ಮೊದಲ ಕೆಲಸವೆಂದರೆ, ಕಡು ಬಡವರ ಕುಟುಂಬಗಳಿಗೆ ಒಂದು ರೂಪಾಯಿಗೆ ಒಂದು ಕೆಜಿಯಂತೆ ಅಕ್ಕಿ ವಿತರಣೆ ಮಾಡುವ 'ಅನ್ನಭಾಗ್ಯ' ಯೋಜನೆಯ ಘೋಷಣೆ.

ಇದರೊಂದಿಗೆ ಸಹಕಾರಿ ಹಾಲು ಉತ್ಪಾದಕರಿಗೆ ನೀಡುತ್ತಿದ್ದ ಪ್ರೋತ್ಸಾಹ ಧನ ಹೆಚ್ಚಳ, ಈ ಉತ್ತೇಜನದಿಂದ ಹೆಚ್ಚುವರಿಯಾಗಿ ಉತ್ಪಾದನೆಯಾದ ಹಾಲನ್ನು ಅಂಗನವಾಡಿ ಹಾಗೂ ಶಾಲಾಮಕ್ಕಳಿಗೆ ಕುಡಿಯಲು ವಿತರಿಸುವ ಕ್ಷೀರಭಾಗ್ಯ, ವಿಚ್ಛೇದಿತ ಮಹಿಳೆಯರಿಗೆ ಮಾಸಾಶನ ಒದಗಿಸುವ 'ಮನಸ್ವಿನಿ', ಲೈಂಗಿಕ ಅಲ್ಪಸಂಖ್ಯಾತರಿಗೆ ಮಾಸಾಶನ ಕೊಡುವ 'ಮೈತ್ರಿ' ಮೂಲಕ ಸರ್ವರನ್ನೂ ಒಳಗೊಳ್ಳುವ ಅಭಿವೃದ್ಧಿಯ ಚಿಂತನೆಯನ್ನು ಸಾಕಾರಗೊಳಿಸಲು ಪ್ರಯತ್ನಿಸಿದರು.

2015ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದ 'ಋಣಮುಕ್ತ' ಯೋಜನೆಯಡಿ ಪರಿಶಿಷ್ಟ ಜಾತಿ,ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ 1368 ಕೋಟಿ ರೂ. ಸಾಲ ಮನ್ನಾ ಮಾಡಲಾಯಿತು. ದುರ್ಬಲ ವರ್ಗದವರ ಮನೆ ನಿರ್ಮಾಣದ ಕನಸು ನನಸು ಮಾಡಲು ತಂದ 'ವಸತಿ' ಭಾಗ್ಯ ಯೋಜನೆ, 319 ಕೋಟಿ ರೂ. ಬಾಕಿ ಬಿಲ್ಲುಗಳನ್ನು ತುಂಬಿದ 'ಭಾಗ್ಯ ಜ್ಯೋತಿ', ಬಡತನ ರೇಖೆಗಳಿಂತ ಮೇಲಿದ್ದ ಜನರಿಗಾಗಿ ತಂದ 'ಆರೋಗ್ಯ ಶ್ರೀ ಯೋಜನೆ', ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ತಂದ ವಿದ್ಯಾ ಸಿರಿ, ಮಳೆ ಆಶ್ರಿತ ಬೇಸಾಯವನ್ನು ಕೇಂದ್ರೀಕರಿಸಿ ರೂಪಿಸಿದ 'ಕೃಷಿ ಭಾಗ್ಯ', ಕೆರೆಗಳನ್ನು ಪುನಶ್ಚೇತನಗೊಳಿಸಲು 'ಕೆರೆ ಸಂಜೀವಿನಿ', ಮಹಿಳೆಯರು ಮತ್ತು ಮಕ್ಕಳ ಪೌಷ್ಠಿಕಾಂಶ ಕೊರತೆಯನ್ನು ನಿವಾರಿಸುವ 'ಮಾತೃಪೂರ್ಣ' ಇನ್ನೂ ಹಲವು ಜನಮುಖಿ ಕಾರ್ಯಕ್ರಗಳು ಸಿದ್ದರಾಮಯ್ಯ ಅವರ ಕೊಡುಗೆ.

ಹಸಿವು ಮುಕ್ತ ರಾಜ್ಯ ಮಾಡುವ ತಮ್ಮ ಪ್ರಮುಖ ಗುರಿಯನ್ನು ಈಡೇರಿಸುವ ನಿಟ್ಟಿನಲ್ಲಿ ನಗರ ಪ್ರದೇಶದಲ್ಲಿ ಬಡವರಿಗಾಗಿ ಕಡಿಮೆ ದರದಲ್ಲಿ ತಿಂಡಿ ನೀಡುವ ಇಂದಿರಾ ಕ್ಯಾಂಟೀನ್ ಯೋಜನೆ, 2023ರ ಬಜೆಟ್‌ನಲ್ಲಿ ಘೋಷಿಸಲಾಗಿರುವ ಗೃಹಜ್ಯೋತಿ, ಗೃಹಲಕ್ಷ್ಮಿ, ಯುವನಿಧಿ, ಶಕ್ತಿ ಮತ್ತು ಅನ್ನಭಾಗ್ಯ ಗ್ಯಾರಂಟಿ ಯೋಜನೆಗಳು ಸಿದ್ದರಾಮಯ್ಯ ಅವರ ಅಭಿವೃದ್ಧಿಯ ದೃಷ್ಟಿಕೋನವನ್ನು ಮತ್ತಷ್ಟು ಸ್ಪಷ್ಟಪಡಿಸುತ್ತವೆ.

ಸಿದ್ದರಾಮಯ್ಯ ಅವರು 1995ರ ಮಾರ್ಚ್ 23 ರಂದು ಮಂಡಿಸಿದ್ದ ತಮ್ಮ ಪ್ರಥಮ ಬಜೆಟ್ ಗಾತ್ರ 12,616 ಕೋಟಿ ರೂ. ಆಗಿದ್ದರೆ 2023ರ 14ನೇ ಬಜೆಟ್ ಗಾತ್ರ 3,33,000 ಕೋಟಿ ರೂ. ತಲುಪಿದೆ.

ಅಂತೂ ಸಿದ್ದರಾಮಯ್ಯ ಅವರು ಸರ್ವರನ್ನೂ ಒಳಗೊಳ್ಳುವ ಮತ್ತು ಸಮ ಸಮಾಜದ ಕನಸಿನ 14 ಬಜೆಟ್‌ಗಳನ್ನು ಮಂಡಿಸಿ ಜನಮನ ಗೆದ್ದಿರುವುದಷ್ಟೇ ಅಲ್ಲದೆ ದಾಖಲೆ ನಿರ್ಮಿಸಿದ್ದಾರೆ.



Downloaded From:www.kpscvaani.com









## ಬುಡಕಟ್ಟು ಜನರಲ್ಲಿ ಹೊಸ ಭರವಸೆ ಮೂಡಿಸಿದ ರಾಷ್ಟ್ರಪತಿ

# ದ್ರೌಪದಿ ಮುರ್ಮು ಸಂವಾದ



ಮಂಜುನಾಥ ಡಿ.ಡೊಳ್ಳಿನ

ಜಾಗತೀಕರಣ, ಮಾಹಿತಿ ತಂತ್ರಜ್ಞಾನದ ಈ ಅತ್ಯಾಧುನಿಕ ಯುಗದಲ್ಲಿ, ಇಡೀ ಜಗತ್ತನ್ನೇ ಕ್ಷಣಾರ್ಧದಲ್ಲಿ ಸಂಪರ್ಕಿಸಬಲ್ಲ ಸಂವಹನ ಕ್ರಾಂತಿಯಾಗಿದೆ. ತೀವ್ರಗತಿಯ ಬದಲಾವಣೆಯ ಕಾಲಘಟ್ಟದಲ್ಲಿಯೂ ಕರ್ನಾಟಕದ ದಟ್ಟ ಕಾಡಿನ ನಡುವೆ ಜೇನುತುಪ್ಪ, ಆಹಾರ ಸಂಗ್ರಹಣೆ, ಆನೆಗಳ ಪಳಗಿಸುವ ಕಾಯಕದ ಮೂಲಕವೇ ಬದುಕು ಕಟ್ಟಿಕೊಳ್ಳುತ್ತಿರುವ ಜೇನುಕುರುಬ ಹಾಗೂ ಕಾಡಿನ ಬಿಳಲು ಬಿದಿರು ಬಳಸಿಕೊಂಡು ಬುಟ್ಟಿಗಳು, ಮೀನು ಹಿಡಿಯುವ ಕುತ್ತರಿ, ಕದಿಕೆ, ಪೆಟಾರಿ, ತೊಟ್ಟಿಲು ತಯಾರಿಕೆಯನ್ನು ಮಾಡುತ್ತಿರುವ ಕೊರಗ ಬುಡಕಟ್ಟುಗಳನ್ನು, ಕರ್ನಾಟಕದ ನೈಜ ದುರ್ಬಲ ಬುಡಕಟ್ಟುಗಳೆಂದು ಗುರುತಿಸಲಾಗಿದೆ.

ಈ ಆದಿವಾಸಿ ಜನರನ್ನು ಕಂಡು ಮಾತನಾಡಬೇಕೆಂಬ ಸ್ವ ಇಚ್ಛೆ ಭಾರತದ ಗೌರವಾನ್ವಿತ ರಾಷ್ಟ್ರಪತಿಯವರಾದ ದ್ರೌಪದಿ ಮುರ್ಮು ಅವರದಾಗಿತ್ತು. ಇತ್ತೀಚೆಗೆ ರಾಜ್ಯದ ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಪ್ರವಾಸದ ಸಂದರ್ಭದಲ್ಲಿ ಇದಕ್ಕಾಗಿ ತಮ್ಮ ಸಮಯ ಮೀಸಲಿಟ್ಟು, ಕನ್ನಡ ನಾಡಿನ ನೈಜ ದುರ್ಬಲ ಬುಡಕಟ್ಟು ಜನರೊಂದಿಗೆ ಸಂವಾದದಲ್ಲಿ ಉತ್ಸಾಹದಿಂದ ಭಾಗವಹಿಸಿ, ಬುಡಕಟ್ಟು ಜನರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ದಿಕ್ಸೂಚಿ ಮಾತುಗಳನ್ನಾಡಿ, ಆದಿವಾಸಿಗಳಲ್ಲಿ ಹೊಸ ಸ್ಫೂರ್ತಿ ತುಂಬಿದರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಜುಲೈ 3 ರಂದು ರಾಜಭವನದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಆಯೋಜಿಸಿದ್ದ ರಾಜ್ಯದ ಚಾಮರಾಜನಗರ, ಮೈಸೂರು, ಕೊಡಗು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ನೈಜ ಬುಡಕಟ್ಟು ಸಮುದಾಯಗಳ ಸದಸ್ಯರೊಂದಿಗೆ ಸಂವಾದ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

ನೈಜ ದುರ್ಬಲ ಬುಡಕಟ್ಟು ಜನರ (Particularly Vulnerable Tribal Groups) ಸರ್ವಾಂಗೀಣ ವಿಕಾಸಕ್ಕಾಗಿ ವಸತಿ, ಶಿಕ್ಷಣ, ಆರ್ಥಿಕ ಚಟುವಟಿಕೆಗಳು, ಆರೋಗ್ಯ ಸೌಕರ್ಯಗಳ ಕನಿಷ್ಠ ಮೂಲಸೌಕರ್ಯಗಳನ್ನು ಕಲ್ಪಿಸಿ, ಸುಧಾರಣೆಯ ದಾರಿ ತೋರಿಸಿದರೆ ಸಾಕು ಅವರು ಮುನ್ನಡೆಯಬಲ್ಲರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೈಜ ದುರ್ಬಲ ಬುಡಕಟ್ಟುಗಳ ಕಲ್ಯಾಣಕ್ಕಾಗಿ ಆಂದೋಲನದ ಮಾದರಿಯಲ್ಲಿ (Mission Mode) ಕಾರ್ಯನಿರ್ವಹಿಸಬೇಕು.

ಕರ್ನಾಟಕದಲ್ಲಿ 2011 ರ ಜನಗಣತಿಯ ಪ್ರಕಾರ ಸುಮಾರು 43 ಲಕ್ಷ ಪರಿಶಿಷ್ಟ ಪಂಗಡಗಳ ಜನಸಂಖ್ಯೆಯಿದೆ. ಇದರಲ್ಲಿ ನೈಜ ದುರ್ಬಲ ಬುಡಕಟ್ಟುಗಳೆಂದು ಗುರುತಿಸಲಾಗಿರುವ ಜೇನುಕುರುಬರು ಹಾಗೂ ಕೊರಗ ಸಮುದಾಯಗಳ ಜನಸಂಖ್ಯೆ ಸುಮಾರು 50 ಸಾವಿರದಷ್ಟಿದೆ. ರಾಜ್ಯದ ನೈಜ ದುರ್ಬಲ ಬುಡಕಟ್ಟು ಸಮುದಾಯಗಳಲ್ಲಿಯೂ ಡಾಕ್ಟರೇಟ್ ಪದವಿ ಪಡೆದ ಮಹಿಳೆ, ಶುಶ್ರೂಷಕಿ (ಸ್ಟಾಫ್ ನರ್ಸ್), ಅಂಗನವಾಡಿ ಕಾರ್ಯಕರ್ತೆ, ಪಿಹೆಚ್‌ಡಿ ವ್ಯಾಸಂಗ ಮಾಡುತ್ತಿರುವ ಖಾಸಗಿ ಮಹಿಳಾ ನೌಕರರು ಇರುವುದು ಕಂಡು ಬಹಳ ಸಂತಸವಾಗಿದೆ. ಭಾರತ ದೇಶದಲ್ಲಿ ನೈಜ ದುರ್ಬಲ ಬುಡಕಟ್ಟು ಸಮುದಾಯಗಳ ಜನಸಂಖ್ಯೆ ಸುಮಾರು 28 ಲಕ್ಷದಷ್ಟಿದೆ. 75 ವಿವಿಧ ಬುಡಕಟ್ಟುಗಳನ್ನು ನೈಜ



Downloaded From:www.kpscvaani.com




ದುರ್ಬಲ ಬುಡಕಟ್ಟುಗಳೆಂದು ಪಟ್ಟಿ ಮಾಡಲಾಗಿದೆ. ಹಿಂದುಳಿದ ಅರಣ್ಯವಾಸಿ ಸಮುದಾಯಗಳನ್ನು ಗುರುತಿಸಿ ವಸತಿ, ಕೃಷಿಭೂಮಿ ಕಲ್ಪಿಸಿ ಮುಖ್ಯವಾಹಿನಿಗೆ ತರುವುದು ಸ್ಥಳೀಯ ಸರ್ಕಾರಗಳ ಜವಾಬ್ದಾರಿಯಾಗಿದೆ. ಶಾಲೆ, ರಸ್ತೆ, ಆರೋಗ್ಯದ ಸಮಸ್ಯೆಗಳು ಕರ್ನಾಟಕದಲ್ಲಿ ಮಾತ್ರವಲ್ಲ, ದೇಶದೆಲ್ಲೆಡೆ ಸಾಮಾನ್ಯವಾಗಿವೆ. ಅರಣ್ಯವಾಸಿ ಬುಡಕಟ್ಟುಗಳಲ್ಲಿನ ಕ್ಷಯರೋಗ ಹಾಗೂ ಇತರೆ ಆರೋಗ್ಯ ಸಮಸ್ಯೆಗಳನ್ನು ಸಂಪೂರ್ಣವಾಗಿ ಹೋಗಲಾಡಿಸಲು ಮಧ್ಯಪ್ರದೇಶ ರಾಜ್ಯ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮವನ್ನು ಪ್ರಸ್ತಾಪಿಸಿದ ರಾಷ್ಟ್ರಪತಿಯವರು  ದುರ್ಬಲ ಬುಡಕಟ್ಟುಗಳ ಜನಸಂಖ್ಯೆ ಋಣಾತ್ಮಕವಾಗುತ್ತಿರುವುದನ್ನು ತಡೆಯಲು ಇಂತಹ ಯೋಜನೆಗಳನ್ನು ಹಾಕಿಕೊಳ್ಳಬೇಕು ಎಂದರು.

ನೈಜ ದುರ್ಬಲ ಬುಡಕಟ್ಟುಗಳ ವಿಕಾಸಕ್ಕಾಗಿ ಕೇಂದ್ರ ಸರ್ಕಾರವು ಪ್ರಧಾನಮಂತ್ರಿ ಪಿವಿಟಿಜಿ ಅಭಿವೃದ್ಧಿ ಮಿಷನ್ ಅಡಿ 15 ಸಾವಿರ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. 2047ರ ವೇಳೆಗೆ ಸಿಕಲ್ ಸೆಲ್ ಅನೀಮಿಯಾ ನಿರ್ಮೂಲನೆ ಮಾಡಲು ಪ್ರಸಕ್ತ ಬಜೆಟ್‌ನಲ್ಲಿ ಘೋಷಿಸಿರುವ ಅಭಿಯಾನ ಅತ್ಯಂತ ಮಹತ್ವದ ಹೆಜ್ಜೆಯಾಗಿದೆ. ರಾಜ್ಯದಲ್ಲಿನ ಜನಸಂಖ್ಯೆಗೆ ಅನುಗುಣವಾಗಿ ಹಣ ಬಂದಿರುತ್ತದೆ ಮನೆ, ಶಾಲೆ, ರಸ್ತೆ, ವಿದ್ಯುದ್ದೀಪ, ನೀರು ಮೊದಲಾದ ಸೌಕರ್ಯಗಳನ್ನು ಒದಗಿಸಲು ಸರ್ಕಾರಗಳು ಆಂದೋಲನದ ರೀತಿ ಕಾರ್ಯೋನ್ಮುಖವಾಗಬೇಕು.

ಸರ್ಕಾರ ಬುಡಕಟ್ಟು ಜನರಿಗಾಗಿ ಒಂದು ಹೆಜ್ಜೆ ಮುಂದೆ ಇರಿಸಿ ದಾರಿ ತೋರಿದರೆ ಅವರು ನಿಧಾನವಾಗಿ ನಡೆಯಲು ಕಲಿತು ಹಂತ ಹಂತವಾಗಿ ಓಡಲು ಕಲಿಯುತ್ತಾರೆ. ಬುಡಕಟ್ಟು ಜನರು ತಮ್ಮ ಆತ್ಮಗೌರವ (Self Respect) ಕಾಪಾಡಿಕೊಳ್ಳಲು ಸಮಸ್ಯೆಗಳನ್ನು ಸಮರ್ಥವಾಗಿ ಅಭಿವ್ಯಕ್ತಿಗೊಳಿಸುವುದನ್ನು ರೂಢಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ನೈಜ ದುರ್ಬಲ ಬುಡಕಟ್ಟುಗಳು ಶಿಕ್ಷಣಕ್ಕೆ ಒತ್ತು ನೀಡಲಿ, ಎಸ್.ಎಸ್.ಎಲ್.ಸಿ ಓದಿದವರನ್ನು ಗುರುತಿಸಿ ಅವರಲ್ಲಿ ಇರುವ ಕರಕುಶಲ ಕಲೆ, ಜೀವನ ಕೌಶಲ್ಯಗಳನ್ನು ಪ್ರೋತ್ಸಾಹಿಸಿ ಅವರ ಉತ್ಪನ್ನಗಳಿಗೆ ಮೌಲ್ಯವರ್ಧನೆ ಕಲ್ಪಿಸಿದರೆ ಅವರು ಸಮಾಜದ ಮುಖ್ಯವಾಹಿನಿಯೊಂದಿಗೆ ಸಾಗಬಲ್ಲರು. ರಾಜ್ಯದಲ್ಲಿ ಕೇವಲ 50 ಸಾವಿರದಷ್ಟು ನೈಜ ದುರ್ಬಲ ಬುಡಕಟ್ಟು ಸಮುದಾಯವಿರುವುದರಿಂದ ಸರ್ಕಾರಕ್ಕೆ ಇದು ಕಷ್ಟದ ಕಾರ್ಯವಲ್ಲ. ರಾಜ್ಯದ ಸಮಾಜ ಕಲ್ಯಾಣ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳ ಆಶ್ರಮ ಶಾಲೆಗಳಲ್ಲಿ ನೈಜ ದುರ್ಬಲರಿಗೆ ವಿಶೇಷ ಗಮನ ನೀಡಿ ಶಿಕ್ಷಣಕ್ಕೆ ಪ್ರೋತ್ಸಾಹಿಸಬೇಕು. ತಾವು ಚಿಕ್ಕವರಿದ್ದಾಗ ತಮ್ಮ ತಂದೆಗೆ ಇಂತಹ ಯಾವ ಸೌಕರ್ಯಗಳು ಇಲ್ಲದಿದ್ದರೂ ತಮಗೆ ಶಿಕ್ಷಣ ಕೊಡಿಸಿದ್ದನ್ನು ರಾಷ್ಟ್ರಪತಿಯವರು ಹೆಮ್ಮೆಯಿಂದ ಸ್ಮರಿಸಿದರು.

## ಬುಡಕಟ್ಟು ಜನರ ಬಳಿಯೇ ಬಂದು ಆಪ್ತವಾಗಿ ಬೆರೆತ ರಾಷ್ಟ್ರಪತಿಗಳು

ಪ್ರಾರಂಭದಲ್ಲಿ, ಸಭಾಂಗಣದಲ್ಲಿ ನೆರೆದಿದ್ದ ನೈಜ ದುರ್ಬಲ ಬುಡಕಟ್ಟು ಜನರ ಜೀವನ ಮಟ್ಟ ಅರಿಯಲು ಪ್ರಯತ್ನಿಸಿದ ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮುರ್ಮು  ಅವರು, ಬುಡಕಟ್ಟು ಜನ ಮುಕ್ತವಾಗಿ ಮಾತನಾಡಲು ಹಿಂಜರಿದಾಗ  ಖುದ್ದು ತಾವೇ ಜನರ ಆಸನಗಳ ಬಳಿ ತೆರಳಿ ಒಬ್ಬೊಬ್ಬರನ್ನು ಪ್ರತ್ಯೇಕವಾಗಿ ಆಪ್ತವಾಗಿ ಮಾತನಾಡಿಸಿ, ಅವರಿಗೆ ಮನೆ ಇದೆಯೇ, ಸರ್ಕಾರ ಮನೆ ಕಟ್ಟಿಸಿಕೊಟ್ಟಿದೆಯೇ, ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆಯೇ, ಅರಣ್ಯಭೂಮಿಯಲ್ಲಿ ವಾಸವಾಗಿರುವವರು ಯಾರಿದ್ದೀರಿ ಎಂಬ ಪ್ರಶ್ನೆಗಳನ್ನು ಹಾಕಿ ಕೊರಗ ಮತ್ತು ಜೇನುಕುರುಬ ಬುಡಕಟ್ಟು ಜನರಿಂದ ನೇರ ಸಂವಾದದ ನಡೆಸಿದರು.


Downloaded From:www.kpscvaani.com




## ರಾಷ್ಟ್ರಪತಿ ಭವನದಿಂದ ಬುಡಕಟ್ಟು ಜನರಿಗೆ ಉಡುಗೊರೆ ಹಾಗೂ ಆಹ್ವಾನ

ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕೊರಗ ಹಾಗೂ ಜೇನುಕುರುಬ ಬುಡಕಟ್ಟುಗಳ ಜನರಿಗೆ ರಾಷ್ಟ್ರಪತಿ ಭವನದಿಂದ ತಂದಿದ್ದ ಉಡುಗೊರೆಗಳನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ವಿತರಿಸಿದರು.

ರಾಷ್ಟ್ರಪತಿ ಭವನವನ್ನು ಎಷ್ಟು ಜನ ನೋಡಿದ್ದೀರಿ ಎಂದು ಸಭಾಂಗಣದಲ್ಲಿ ನೆರೆದಿದ್ದ ಆದಿವಾಸಿಗಳನ್ನು ಕೇಳಿದ ರಾಷ್ಟ್ರಪತಿಯವರು ಒಂದಿಬ್ಬರು ಮಾತ್ರ ತಮ್ಮ ಕೈಗಳನ್ನು ಎತ್ತಿರುವುದನ್ನು ಕಂಡು ಉಳಿದ ಎಲ್ಲರಿಗೂ ಬರುವ ವರ್ಷ ರಾಷ್ಟ್ರಪತಿ ಭವನಕ್ಕೆ ಆಗಮಿಸಲು ಆಹ್ವಾನ ನೀಡಿದರು.

## ಸ್ಥಳೀಯ ಭಾಷೆಯಲ್ಲಿಯೇ ಮಾತನಾಡಲು ಪ್ರೋತ್ಸಾಹ

ಜೇನುಕುರುಬ ಸಮುದಾಯದ ಪರವಾಗಿ ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಯಡವನಾಡು ಹಾಡಿಯ ಚಂದ್ರು ಹಿಂದಿಯಲ್ಲಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಿದ್ದ ವೇಳೆಯಲ್ಲಿ ಮಧ್ಯೆ ಪ್ರವೇಶಿಸಿದ ರಾಷ್ಟ್ರಪತಿ ಅವರು, ಸ್ಥಳೀಯವಾಗಿ ನಿಮ್ಮ ಭಾಷೆಯಲ್ಲಿಯೇ ಮಾತನಾಡಿ ಎಂದು ಸೂಚಿಸಿ, ಪ್ರೋತ್ಸಾಹಿಸಿದಾಗ, ಚಂದ್ರು ಅವರು, ಆದಿವಾಸಿ ಮಹಿಳೆಯೊಬ್ಬರು ರಾಷ್ಟ್ರಪತಿ ಸ್ಥಾನ ಅಲಂಕರಿಸಿರುವುದು ಹೆಮ್ಮೆಯ ಸಂಗತಿ. ನಿಮ್ಮನ್ನು ಹತ್ತಿರದಿಂದ ಕಾಣಲು ಇಂದು ಬೆಳಗಿನಿಂದಲೂ ಕಾತುರರಾಗಿದ್ದೆವು ಎಂದು ಸಂತಸದಿಂದ ಹೇಳಿದಾಗ ಕರತಾಡನಗಳ ಮಳೆ ಸುರಿಯಿತು.

ಕೊರಗ ಸಮುದಾಯದ ಮೊಟ್ಟಮೊದಲ ಡಾಕ್ಟರೇಟ್ ಪದವೀಧರೆ, ಪ್ರಾಧ್ಯಾಪಕಿ ಉಡುಪಿ ಜಿಲ್ಲೆ ಸಾಲಿಗ್ರಾಮದ ಡಾ.ಸವಿತಾ ಮಾತನಾಡಿ, ಕೊರಗ ಸಮುದಾಯ ಅಪೌಷ್ಟಿಕತೆ, ಆರೋಗ್ಯ ಸಮಸ್ಯೆಗಳಿಂದ ಜನಸಂಖ್ಯೆ ಕ್ಷೀಣಿಸುತ್ತಿದೆ. ಈ ಕುರಿತು ಸಂಶೋಧನೆ ಮತ್ತು ಪರಿಹಾರ ಕಾರ್ಯಗಳು ನಡೆಯಬೇಕು ಎಂದರು.

ಬುಡಕಟ್ಟು ಸಮುದಾಯಗಳ ಚಂದ್ರು, ರತ್ನಾ, ಸುಂದರ, ಬಾಬು ಮತ್ತು ಅಯ್ಯಪ್ಪ ಅವರು ರಾಷ್ಟ್ರಪತಿ ಹಾಗೂ ರಾಜ್ಯಪಾಲರನ್ನು ಸನ್ಮಾನಿಸಿ, ನೆನಪಿನ ಕಾಣಿಕೆಗಳನ್ನು ನೀಡಿದರು.

ನೈಜ ದುರ್ಬಲ ಬುಡಕಟ್ಟುಗಳ ಜನ ತಮ್ಮೊಳಗಿನ ಸಾಮರ್ಥ್ಯ ಒರೆಗೆ ಹಚ್ಚಿಕೊಳ್ಳಬೇಕು. ನೆರೆಹೊರೆಯವರನ್ನು ನೋಡಿ ಶಿಕ್ಷಿತರಾಗಿ ಮುಂದೆ ಬರಬೇಕು ಎಂದು ಸ್ಫೂರ್ತಿದಾಯಕ ಮಾತುಗಳನ್ನಾಡಿದರು.

ರಾಜ್ಯಪಾಲರಾದ ಶ್ರೀ ಥಾವರಚಂದ್ ಗೆಹ್ಲೋಟ್ ಅವರ ಸಮ್ಮುಖದಲ್ಲಿ ನಡೆದ ಬುಡಕಟ್ಟು ಸಮುದಾಯಗಳೊಂದಿಗಿನ ಸಂವಾದದಲ್ಲಿ ಗುಂಡ್ಲುಪೇಟೆಯ ದೇಶಿಪುರ ಕಾಲೊನಿಯ ಸಿದ್ದಮ್ಮ, ಪುಟ್ಟಮ್ಮ, ಮದ್ದೂರು ಕಾಲೋನಿಯ ಗೋವಿಂದ, ಎಚ್.ಡಿ.ಕೋಟೆಯ ಬಸಮ್ಮ, ರಾಜೇಶ್, ಅಯ್ಯಪ್ಪ, ಭೈರಾ, ಸಿ. ಭಾಸ್ಕರ, ಪುಟ್ಟಬಸವಯ್ಯ, ಹುಣಸೂರಿನ ಜೆ.ಪಿ. ಪಾರ್ವತಿ, ಸುಮಾ, ರಾಜಪ್ಪ, ಸಚಿನ್, ಪಿರಿಯಾಪಟ್ಟಣದ ಜಯಮ್ಮ, ಗೌರಿ, ಲಕ್ಷ್ಮೀ, ಜಾನಕಮ್ಮ, ಬಸವಣ್ಣ, ಬಸಪ್ಪ, ಸರಗೂರಿನ ವಿಜಯ್, ಸೋಮವಾರಪೇಟೆಯ ಜೆ.ಕೆ. ಮುತ್ತಮ್ಮ, ಬಿ.ಕೆ. ಧರ್ಮಪ್ಪ, ಉಡುಪಿ ಜಿಲ್ಲೆಯ ನಳಿನಿ, ಡಾ. ಸಬಿತಾ, ಸುಶೀಲಾ, ಪ್ರಕೃತಿ, ಶಕೀಲಾ, ಸುನಂದಾ, ಕುಡ್ವಾ, ಬಾಬು, ರಮೇಶ್, ಕೊಗ್ಗ, ಅಕ್ಷಯ್, ಕುಮಾರ್, ಸಂಜೀವ ಕೊರಗ, ಕೆ. ಪುತ್ರಯ, ದಕ್ಷಿಣ ಕನ್ನಡ ಜಿಲ್ಲೆಯ ರತ್ನ, ಚಂದ್ರವತಿ, ಶಶಿಕಲಾ, ರಾಧಾ, ಎಂ.ಸುಂದರ್, ಬಾಬು, ಮಥಾಡಿ, ಶ್ಯಾಮ್ ಸೇರಿದಂತೆ ಮೈಸೂರು, ಚಾಮರಾಜನಗರ, ಕೊಡಗು, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಿಂದ ಆಗಮಿಸಿದ್ದ ಜೇನುಕುರುಬ ಹಾಗೂ ಕೊರಗ ಬುಡಕಟ್ಟು ಸಮುದಾಯಗಳ 50 ಜನ ಭಾಗವಹಿಸಿ ತಮ್ಮ ಸಾಂಸ್ಕೃತಿಕ, ಸಾಮಾಜಿಕ ಅಸ್ಮಿತೆಯ ವಿಶಿಷ್ಟತೆಗಳನ್ನು ಸಾರಿದರು.

ಸಮಾಜ ಕಲ್ಯಾಣ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಪಿ.ಮಣಿವಣ್ಣನ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿರ್ದೇಶಕರಾದ ಪಿ.ಎಸ್. ಕಾಂತರಾಜು ಮತ್ತಿತರ ಗಣ್ಯರು ಇದ್ದರು.

---

**ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನೈಜ ಬುಡಕಟ್ಟು ಜನರೊಂದಿಗೆ ಸಂವಾದ ನಡೆಸಿ ನಮಗೆಲ್ಲ ಹೊಸ ಸ್ಫೂರ್ತಿ ತುಂಬಿದ್ದಾರೆ. ಆಧುನಿಕ ಜಗತ್ತಿನ ಬೆಳವಣಿಗೆಯೊಂದಿಗೆ ಆದಿವಾಸಿಗಳು ಹೆಜ್ಜೆ ಹಾಕಲು ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ಮಾರ್ಗದರ್ಶನ, ಪ್ರೇರಣೆ ನೀಡಿದ್ದಾರೆ. ನೈಜ ದುರ್ಬಲ ಬುಡಕಟ್ಟು ಜನರಿಗೆ ಮನೆ, ಪೌಷ್ಠಿಕ ಆಹಾರ, ಶುದ್ಧ ಕುಡಿಯುವ ನೀರು, ಆರೋಗ್ಯ ಸೌಕರ್ಯಗಳನ್ನು ಸರ್ಕಾರ ಒದಗಿಸುತ್ತಿದೆ. ಶಿಕ್ಷಣ, ಮೂಲಸೌಕರ್ಯಗಳಲ್ಲಿ ಇನ್ನಷ್ಟು ಆದ್ಯತೆ ನೀಡಲು ಕ್ರಮವಹಿಸಲಾಗುವುದು.**

**ಬಿ.ನಾಗೇಂದ್ರ**
ಪರಿಶಿಷ್ಟ ವರ್ಗಗಳ ಕಲ್ಯಾಣ ಹಾಗೂ ಯುವಸಬಲೀಕರಣ ಸಚಿವರು

---


Downloaded From:www.kpscvaani.com




# ತಾಯಿ ಹೃದಯದ ಅನ್ನಭಾಗ್ಯ

**ರಾ**ಜ್ಯವನ್ನು 'ಹಸಿವು ಮುಕ್ತ' ಮಾಡುವ ಸ್ಪಷ್ಟ ಗುರಿಯನ್ನು ಇಟ್ಟುಕೊಂಡು 2013ರಲ್ಲಿ ರಾಜ್ಯಾಧಿಕಾರದ ಚುಕ್ಕಾಣಿಯನ್ನಿಡಿದ ಸಿದ್ದರಾಮಯ್ಯ ಅವರು ಅನ್ನಭಾಗ್ಯ ಯೋಜನೆಯನ್ನು ರೂಪಿಸಿದರು. ಬಡತನದ ಬೇಗೆಯಿಂದ ನರಳುವವರಿಗೆ ಎರಡು ಹೊತ್ತು ನೆಮ್ಮದಿಯಾಗಿ ಊಟ ಸಿಗುವಂತಾಗಬೇಕು ಹಾಗೂ ಅಪೌಷ್ಟಿಕತೆ ದೂರವಾಗಬೇಕು, ಆ ಮೂಲಕ ಮಾನವ ಸಂಪನ್ಮೂಲ ಅಭಿವೃದ್ಧಿಯಾಗಬೇಕು ಎಂಬ ಉದ್ದೇಶವನ್ನು ಸಿದ್ದರಾಮಯ್ಯ ಅವರು ಹೊಂದಿದ್ದರು.

> **'ಅನ್ನ ದೇವರಿಗಿಂತ ಇನ್ನು ದೇವರು ಇಲ್ಲ' ಸರ್ವಜ್ಞ ಕವಿಯ ಈ ಮಾತುಗಳು ರಾಜ್ಯದಲ್ಲಿ ಒಂದು ದಶಕದಿಂದ ಜಾರಿಯಲ್ಲಿರುವ 'ಅನ್ನಭಾಗ್ಯ' ಯೋಜನೆಗೆ ಪೂರಕವಾಗಿವೆ.**

ಹರತೀಸುತ

ಉಚಿತ ಅಕ್ಕಿ ನೀಡುವುದರಿಂದ ಜನ ಸೋಮಾರಿಗಳಾಗುತ್ತಾರೆ ಎಂಬ ಟೀಕೆಗಳು ಕೇಳಿ ಬಂದಾಗಲೂ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರು, "ಸಿದ್ದರಾಮಯ್ಯ ಅವರ ಕನಸಿನ ಅನ್ನಭಾಗ್ಯ ತಾಯಿ ಹೃದಯ ಹೊಂದಿರುವ ಮನಸಿನದು. ಬರ, ಕೊರೊನಾದಂತಹ ಸಂದರ್ಭದಲ್ಲಿ ಬಡವರನ್ನು ಕಾಪಾಡಿದೆ" ಎಂಬ ಮಾತುಗಳನ್ನು ಹೇಳಿರುವುದು ಅನ್ನಭಾಗ್ಯದ ಯಶಸ್ಸನ್ನು ತೋರಿಸುತ್ತಿದೆ. ಅದೇ ರೀತಿ ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು, "ಅನ್ನಭಾಗ್ಯದ ಬಗ್ಗೆ ಕೆಲವರ ಆಕ್ಷೇಪ ಬಂದಿರಬಹುದು, ಆದರೆ ನಾವು ಅದರಿಂದ ಆದ ಪ್ರಯೋಜನ ಗಮನಿಸಬೇಕು" ಎಂಬ ವಿಮರ್ಶೆಯ ಮಾತನ್ನು ಹೇಳಿದ್ದಾರೆ.

ಸರ್ವಜ್ಞ, ವೀರೇಂದ್ರ ಹೆಗ್ಗಡೆ, ಸುತ್ತೂರು ಮಠಾಧೀಶರ ಮಾತನ್ನು ಇಲ್ಲಿ ನೆನಪಿಸಿಕೊಳ್ಳುವುದಕ್ಕೆ ಕಾರಣಗಳಿವೆ. ಅನ್ನಭಾಗ್ಯ ಇದೀಗ ಮತ್ತೆ ರಾಜ್ಯಾದ್ಯಂತ ಚರ್ಚೆಗೆ ಒಳಗಾಗಿದೆ.

### ಅನುಭವಿಸಿದ ನೋವು

ಸಿದ್ದರಾಮಯ್ಯ ಅವರು ತಾವು ಚಿಕ್ಕವರಾಗಿದ್ದಾಗ ನೋಡಿ ತಿಳಿದ, ಅನುಭವಿಸಿದ ಬಡವರ ಯಾತನೆಯಿಂದಾಗಿಯೇ ಅನ್ನಭಾಗ್ಯ ಯೋಜನೆಯನ್ನು ರೂಪಿಸಿದ್ದು. ಅದನ್ನು ಅವರೇ ಸಾಕಷ್ಟು ಬಾರಿ ಹೇಳಿಕೊಂಡಿದ್ದಾರೆ. ಆದ್ದರಿಂದಲೇ ಈ



Downloaded From:www.kpscvaani.com



ಯೋಜನೆ ಯಶಸ್ವಿಯಾಗಿ ಮುನ್ನಡೆಯಲು ಸಾಧ್ಯವಾಗಿದೆ.

ಹತ್ತು ವರ್ಷಗಳ ಹಿಂದೆ ಸಿದ್ದರಾಮಯ್ಯ ಅವರು 2013ರ ಮೇ ನಲ್ಲಿ ಅಧಿಕಾರದ ಸೂತ್ರ ಹಿಡಿದು, ಪ್ರಮಾಣ ವಚನ ಸ್ವೀಕರಿಸಿದ ಕೆಲವೇ ಕ್ಷಣಗಳಲ್ಲಿ ಅನ್ನಭಾಗ್ಯ ಯೋಜನೆಯನ್ನು ಘೋಷಣೆ ಮಾಡಿದರು. ಯೋಜನೆ 2013ರ ಜುಲೈ ತಿಂಗಳಿನಿಂದ ರಾಜ್ಯದಲ್ಲಿ ಜಾರಿಗೆ ಬಂದಿತು. ಅದರೊಂದಿಗೆ ಬಡವರ ಭಾಗ್ಯದ ಬಾಗಿಲು ತೆರೆಯಿತು.

ಆರಂಭದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಕನಿಷ್ಠ 4 ಕೆಜಿ ಅಕ್ಕಿ, ಒಂದು ಕೆಜಿ ಗೋಧಿಯಂತೆ ಪ್ರತಿ ಕೆಜಿಗೆ ಒಂದು ರೂ. ದರ ನಿಗದಿ ಮಾಡಲಾಗಿತ್ತು. ಆದರೆ ಆ ನಂತರ ಅದನ್ನು ಉಚಿತ ಮಾಡಲಾಯಿತು.

ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಬಿಪಿಎಲ್ ಮತ್ತು ಅಂತ್ಯೋದಯ ಪಡಿತರದಾರರ ಕುಟುಂಬದ ಸದಸ್ಯರಿಗೆ ತಲಾ ಹತ್ತು ಕೆ.ಜಿ. ಅಕ್ಕಿಯನ್ನು ನೀಡಲಾಗುವುದೆಂದು ಕಾಂಗ್ರೆಸ್ ಪಕ್ಷವು ಘೋಷಣೆ ಮಾಡಿತ್ತು. ಪಕ್ಷ ಅಧಿಕಾರಕ್ಕೆ ಬಂದ ಹಿನ್ನೆಲೆಯಲ್ಲಿ ಅನ್ನಭಾಗ್ಯ ಯೋಜನೆಯನ್ನು ಜಾರಿಗೆ ತರಲು ಸರ್ಕಾರವು ಸಿದ್ಧತೆಯನ್ನು ನಡೆಸತೊಡಗಿತು. ರಾಜ್ಯದಲ್ಲಿ ಅಷ್ಟೊಂದು ಅಕ್ಕಿ ದಾಸ್ತಾನು ಇಲ್ಲದ ಹಿನೆಲೆಯಲ್ಲಿ ಕೇಂದ್ರ ಸರ್ಕಾರದಿಂದ ಅಕ್ಕಿ ಖರೀದಿಸಲು ಪ್ರಯತ್ನ ನಡೆಸಿತು.

ಜೂನ್ 23 ರಂದು ಸ್ವತಃ ಮುಖ್ಯಮಂತ್ರಿ ಅವರೇ ದೆಹಲಿಗೆ ತೆರಳಿ ಕೇಂದ್ರ ಗೃಹ ಮಂತ್ರಿಗಳಾದ ಅಮಿತ್ ಷಾ ಅವರನ್ನು ಭೇಟಿ ಮಾಡಿ ತಮ್ಮ ಬೇಡಿಕೆಯನ್ನು ಸಲ್ಲಿಸಿ ಬಂದರು. ಹಾಗೆಯೇ ಆಹಾರ ಖಾತೆ ಸಚಿವರಾದ ಕೆ.ಎಚ್.ಮುನಿಯಪ್ಪ ಅವರೂ ಕೂಡ ಕೇಂದ್ರ ಕೃಷಿ ಸಚಿವರಾದ ಪಿಯೂಷ್ ಗೋಯಲ್ ಅವರನ್ನು ಭೇಟಿ ಮಾಡಿ, ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಒದಗಿಸಲು 1.35 ಲಕ್ಷ ಮೆಟ್ರಿಕ್ ಟನ್ ಅಕ್ಕಿ ನೀಡಲು ವಿನಂತಿಸಿದರು. ವಿವಿಧ ಯೋಜನೆಗಳಿಗೆ ಅಕ್ಕಿಯನ್ನು ಮೀಸಲಿಡಲಾಗಿರುವುದರಿಂದ ರಾಜ್ಯಕ್ಕೆ ಅಕ್ಕಿ ನೀಡಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು.  ಹಾಗಾಗಿ ಕೇಂದ್ರ ಸರ್ಕಾರದಿಂದ ಅಕ್ಕಿ ದೊರೆಯುವ ಸಂಭವ ಕಾಣಿಸಲಿಲ್ಲ.

ಅಕ್ಕಿಯನ್ನು ನೀಡಲಾಗದಿದ್ದರೆ ಅಕ್ಕಿಗೆ ತಗಲುವ ಹಣವನ್ನೇ ಫಲಾನುಭವಿಗಳಿಗೆ ನೀಡಿಬಹುದಲ್ಲವೇ  ಎಂಬ ವಿಪಕ್ಷದವರ ಸಲಹೆಯನ್ನೇ ಸರ್ಕಾರ ಒಪ್ಪಿತು. ಸಾರ್ವಜನಿಕರಿಗೆ ಉಪಯುಕ್ತವಾಗುವಂತಹ ಉತ್ತಮ ಸಲಹೆಗಳು ಯಾರಿಂದಲೇ ಬಂದರು ಸ್ವೀಕರಿಸುವ ಮನೋಭಾವ ಮುಖ್ಯಮಂತ್ರಿ ಅವರದು. ಅಲ್ಲದೆ ಕೇಂದ್ರ ಸರ್ಕಾರವು ಅಕ್ಕಿಯನ್ನು ನೀಡಲು ಸಾಧ್ಯವಾಗುವುದಿಲ್ಲ ಎಂದಾಗ ವಿಪಕ್ಷದವರ ಸಲಹೆಯಂತೆ ನಗದು ನೀಡುವುದೇ ಸರಿ ಎಂದು ಸರ್ಕಾರವು ಪರಿಗಣಿಸಿತು.

'ನೆಮ್ಮದಿಯ ಬದುಕಿಗೆ ಆಹಾರ ಭದ್ರತೆ ಅನ್ನಭಾಗ್ಯ' ಎನ್ನುವ ಘೋಷವಾಕ್ಯದೊಂದಿಗೆ ಜುಲೈ 10 ರಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಅನ್ನಭಾಗ್ಯ ಯೋಜನೆಯ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆಗೆ ಚಾಲನೆ ನೀಡಲಾಯಿತು.

ಮೊದಲ ಹಂತವಾಗಿ ಅಂದು ಮೈಸೂರು ಮತ್ತು ಕೋಲಾರ ಜಿಲ್ಲೆಗಳ ಫಲಾನುಭವಿಗಳಿಗೆ ಮೊದಲಿಗೆ ಹಣ ವರ್ಗಾವಣೆ ಮಾಡಲಾಯಿತು. ಮುಂದಿನ ಹಂತದಲ್ಲಿ ರಾಜ್ಯದ ಎಲ್ಲಾ ಫಲಾನುಭವಿಗಳಿಗೂ ಹಣ ವರ್ಗಾವಣೆಯಾಗಲಿದೆ. ಅಕ್ಕಿಯ ಬದಲಿಗೆ ನಗದು ನೀಡಲಾಗುತ್ತಿರುವುದರಿಂದ ಬಡವರ ಬಳಿಯಲ್ಲಿ ಹಣದ ಒಳ ಹರಿವನ್ನು ಹೆಚ್ಚಿಸಿ ಖರೀದಿ ಸಾಮರ್ಥ್ಯ ಹಿಗ್ಗಿಸುವ ಮೂಲಕ ಆರ್ಥಿಕತೆ ವೃದ್ಧಿಗೆ ಸರ್ಕಾರವು ಮುಂದಾಗಿದೆ.

ಇಡೀ ಪ್ರಪಂಚವನ್ನು ಕೊರೊನಾ ಇನ್ನಿಲ್ಲದಂತೆ ಬಾಧಿಸಿದ ಸಂದರ್ಭದಲ್ಲಿ ದುಡಿಯುವ ಕೈಗಳಿಗೆ ಕೆಲಸವಿಲ್ಲದಂತಾದಾಗ ರಾಜ್ಯದಲ್ಲಿ ಬಡವರ ಕೈ ಹಿಡಿದಿದ್ದು ಸರ್ಕಾರ ಹತ್ತು ವರ್ಷಗಳ ಹಿಂದೆ ಜಾರಿಗೆ ತಂದಿದ್ದ ಅನ್ನಭಾಗ್ಯ ಎಂಬುದು ಸುಳ್ಳೇನು ಅಲ್ಲ.

ಪಡಿತರ ಉಚಿತ ಅಕ್ಕಿಯನ್ನು ಆದ್ಯತಾ ಕುಟುಂಬ (ಬಿಪಿಎಲ್) ಹಾಗೂ ಅಂತ್ಯೋದಯ ಅನ್ನ ಯೋಜನೆಯ ಫಲಾನುಭವಿಗಳಿಗೆ ನೀಡಲಾಗುತ್ತಿದೆ. ಎಪಿಎಲ್ ಕಾರ್ಡುದಾರರಿಗೂ ನೀಡಿದರೂ ಅದು ಉಚಿತವಿಲ್ಲ.

**ಅಂತ್ಯೋದಯ ಅನ್ನ ಯೋಜನೆ**

ಎರಡು ಹೊತ್ತು ಊಟಕ್ಕೆ ಗತಿಯಿಲ್ಲದ ಅತ್ಯಂತ ಕಡು ಬಡವರಿಗಾಗಿ ಅಂತ್ಯೋದಯ ಅನ್ನ ಯೋಜನೆಯನ್ನು ಕೇಂದ್ರ ಸರ್ಕಾರ 2002 ರಿಂದ ಜಾರಿಗೆ ತಂದಿದೆ. ಬಡತನ ರೇಖೆಯಲ್ಲಿ ಅತ್ಯಂತ ಕೆಳಗಿನ  ಕುಟುಂಬಗಳಾದ ಭೂ ರಹಿತ ಕೃಷಿ ಕಾರ್ಮಿಕರು, ವಿಧವೆ ಮುಖ್ಯಸ್ಥರಾಗಿರುವ ಕುಟುಂಬಗಳು, ಯಾವುದೇ ನಿರ್ದಿಷ್ಟ ವರಮಾನವಿಲ್ಲದ, ಎಚ್.ಐ.ವಿ. ಪೀಡಿತರು ಇರುವ ಕುಟುಂಬಗಳು, ಯಾವುದೇ ನಿಗದಿತ ವರಮಾನವಿಲ್ಲದ ವೃದ್ಧರು



Downloaded From:www.kpscvaani.com



> ಹಸಿದ ಹೊಟ್ಟೆಗೆ, ದುಡಿಯುವ ಕೈಗಳಿಗೆ ಶಕ್ತಿ-ಚೈತನ್ಯ ತುಂಬುವ ಸಲುವಾಗಿ ಅನ್ನಭಾಗ್ಯ ಯೋಜನೆಯನ್ನು ತರಲಾಗಿದೆ. ಆದರೆ ಕೇಂದ್ರ ಸರ್ಕಾರವು ಅನ್ನಭಾಗ್ಯ ಯೋಜನೆಗಾಗಿ ರಾಜ್ಯಕ್ಕೆ ಅಕ್ಕಿ ನೀಡಲು ಆಗುವುದಿಲ್ಲ ಎಂದು ಹೇಳಿತು. ಬಳಿಕ ಇ-ಹರಾಜು ಮೂಲಕ ಆ ಅಕ್ಕಿಯನ್ನು ಹರಾಜು ಹಾಕಲು ಮುಂದಾಯಿತು. ಆದರೆ ಈಗ ಇ-ಹರಾಜು ಮೂಲಕ ಅಕ್ಕಿ ಖರೀದಿಸಲು ಯಾರೂ ಮುಂದೆ ಬರುತ್ತಿಲ್ಲ ಎಂದು ಮಾಧ್ಯಮಗಳು ವರದಿ ಮಾಡಿವೆ. ಇದು ಕೇಂದ್ರ ಸರ್ಕಾರಕ್ಕೆ ಬಡವರ ಮೇಲಿರುವ ನಿಲುವನ್ನು ತೋರಿಸುತ್ತದೆ.
>
> **-ಸಿದ್ದರಾಮಯ್ಯ, ಮುಖ್ಯಮಂತ್ರಿಗಳು**

ಮುಖ್ಯಸ್ಥರಾಗಿರುವ ಕುಟುಂಬಗಳು ಅಂತ್ಯೋದಯ ಅನ್ನ ಯೋಜನೆಯ ಫಲಾನುಭವಿಗಳಾಗಿರುತ್ತಾರೆ. ರಾಜ್ಯದಲ್ಲಿ ಇಂತಹ 7,69,570 ಕುಟುಂಬಗಳಿವೆ.

ಅಂತ್ಯೋದಯ ಅನ್ನದ ಜತೆಗೆ ಹಿಂದೆ ಬಿಪಿಎಲ್ ಎಂದು ಕರೆಯುತ್ತಿದ್ದ ಈಗ ಆದ್ಯತಾ ಕುಟುಂಬ ಎಂದು ಮರು ನಾಮಾಂಕಿತವಾದ ಸುಮಾರು 1.21 ಕೋಟಿ ಕುಟುಂಬಗಳು ಒಳಪಡುತ್ತವೆ.

ಅನ್ನಭಾಗ್ಯ ಯೋಜನೆಗೆ ಒಟ್ಟಾರೆ 1,28,16,253 ಕಾರ್ಡುದಾರರಿದ್ದಾರೆ. 4.42 ಕೋಟಿ ಫಲಾನುಭವಿಗಳನ್ನು ಹೊಂದಿರುವ ಸರ್ಕಾರದ ಬಹುದೊಡ್ಡ ಯೋಜನೆ ಇದಾಗಿದೆ. ಪ್ರತಿ ಕಾರ್ಡುಗಳನ್ನು ಆಧಾರ್ ಜತೆ ಲಿಂಕ್ ಮಾಡುವ ಮೂಲಕ ಯೋಜನೆಗೆ ಉತ್ತರದಾಯಿತ್ವ ರೂಪಿಸಲಾಗಿದೆ. ಆ ಮೂಲಕ ಯೋಜನೆಯಲ್ಲಿ ಲೋಪ ಅಥವಾ ಅಕ್ರಮಗಳಾಗದಂತೆ ನೋಡಿಕೊಳ್ಳಲಾಗುತ್ತಿದೆ.

**ಅಕ್ಕಿಯ ಅಗತ್ಯತೆ**

ಪ್ರತಿ ತಿಂಗಳು ಫಲಾನುಭವಿಗೆ ತಲಾ 5 ಕೆಜಿಯಂತೆ ವಿತರಣೆ ಮಾಡಿದರೆ ರಾಜ್ಯಕ್ಕೆ 2.28 ಲಕ್ಷ ಮೆಟ್ರಿಕ್ ಟನ್ ಅಕ್ಕಿಯ ಅಗತ್ಯತೆ ಇದೆ. ಸರ್ಕಾರ 10 ಕೆಜಿ ನೀಡುವುದಕ್ಕೆ ಉದ್ದೇಶಿಸಿರುವುದರಿಂದ ಹೆಚ್ಚುವರಿಯಾಗಿ ಅಷ್ಟೇ ಪ್ರಮಾಣದ ಅಕ್ಕಿಯ ಅಗತ್ಯತೆ ಇದೆ.

ರಾಜ್ಯದಲ್ಲಿ ಅನ್ನಭಾಗ್ಯ ಜಾರಿಗೆ ಬಂದ ನಂತರ ಡಾ. ಮನಮೋಹನ್ ಸಿಂಗ್ ನೇತೃತ್ವದ ಕೇಂದ್ರ ಸರ್ಕಾರ ಆಹಾರ ಭದ್ರತಾ ಕಾಯ್ದೆಯನ್ನು ರೂಪಿಸಿತು. ಅದು 2013ರ ಸೆಪ್ಟೆಂಬರ್‌ನಲ್ಲಿ ಜಾರಿಗೆ ಬಂದಿತು. ಅದರ ಫಲವಾಗಿಯೇ ನರೇಂದ್ರ ಮೋದಿ ಸರ್ಕಾರ ಕೊರೊನಾ ನಂತರ ದೇಶದ 80 ಕೋಟಿ ಜನರಿಗೆ ತಲಾ 5 ಕೆಜಿಯಂತೆ ಆಹಾರ ಧಾನ್ಯ ನೀಡುತ್ತಿದೆ. ಆ ಅಕ್ಕಿ ರಾಜ್ಯದಲ್ಲಿ ಪಡಿತರ ಚೀಟಿದಾರರಿಗೆ ವಿತರಣೆಯಾಗುತ್ತಿದೆ.

**ನಗದು ವರ್ಗಾವಣೆ**

ರಾಜ್ಯ ಸರ್ಕಾರ ಆಹಾರ ಭದ್ರತೆಯಲ್ಲಿ ಕೇಂದ್ರದಿಂದ ಲಭ್ಯವಾಗುವ 5 ಕೆಜಿ ಅಕ್ಕಿಯ ಜತೆಗೆ ಇನ್ನೂ 5 ಕೆಜಿ ಸೇರಿಸಿ ಫಲಾನುಭವಿಗಳಿಗೆ ನೀಡುವ ಗುರಿ ಇತ್ತು. ಕೇಂದ್ರ ಆಹಾರ ನಿಗಮ ತಲಾ ಕೆಜಿ 34 ರೂ.ನಂತೆ ನೀಡುವುದಾಗಿ ಒಪ್ಪಿ, ಕಾರಣಾಂತರ ಹಿಂದೆ ಸರಿಯಿತು. ತೆಲಂಗಾಣ ಸರ್ಕಾರ ಭತ್ತ ಕೊಡುವುದಾಗಿ ಹೇಳಿತು. ಪಂಜಾಬ್ ಸೆಪ್ಟೆಂಬರ್ ನಂತರ ಎಂದರೆ, ಛತ್ತೀಸ್‌ಗಢ 1.50 ಲಕ್ಷ ಟನ್ ಮಾತ್ರ ಕೊಡುವುದಾಗಿ ಹೇಳಿತು. ಆದ್ದರಿಂದ ಇನ್ನೂ 4-5 ತಿಂಗಳು ಅಕ್ಕಿ ಸಿಗುವುದಿಲ್ಲವೆಂಬುದನ್ನು ಮನಗಂಡ ಸರ್ಕಾರ ನೇರ ನಗದು ಪಾವತಿಯ ಮೂಲಕ ಫಲಾನುಭವಿಗಳ ಖಾತೆಗೆ ಹಣ ಹಾಕುವ ಮೂಲಕ ಯೋಜನೆಯ ಸಾರ್ಥಕತೆಗೆ ಮುಂದಾಗಿದೆ.

**ಎಷ್ಟು ಹಣ ಹೇಗೆ ಪಾವತಿ**

ಪ್ರತಿ ಕೆಜಿಗೆ ಕೇಂದ್ರದಿಂದ ಖರೀದಿ ಮಾಡಿದ್ದರೆ 34 ರೂ. ನೀಡಲಾಗುತ್ತಿತ್ತು. ಅದೇ ರೀತಿಯಲ್ಲಿ ಪ್ರತಿ ಫಲಾನುಭವಿಗೆ 5 ಕೆಜಿಯ ಮೊತ್ತ 170 ರೂ.ಗಳನ್ನು ನೀಡಲಾಗುತ್ತದೆ. ಆ ಕುಟುಂಬದಲ್ಲಿ ಎಷ್ಟು ಜನ ಫಲಾನುಭವಿಗಳಿದ್ದಾರೋ ಅಷ್ಟು ಜನರಿಗೆ ತಲಾ 170 ರೂ.ಗಳಂತೆ ಯಜಮಾನರ ಖಾತೆಗೆ ನೇರ ನಗದು ರೂಪದಲ್ಲಿ ಪಾವತಿಸಲಾಗುತ್ತದೆ. ಕುಟುಂಬದಲ್ಲಿ 5 ಜನ ಸದಸ್ಯರಿದ್ದರೆ 850 ರೂ. ಹಾಗೂ 6 ಜನರಿದ್ದರೆ 1020 ರೂ.ಗಳು ಸಿಗಲಿದೆ ಎಂದು ಲೆಕ್ಕ ಹಾಕಲಾಗಿದೆ. ಅನ್ನಭಾಗ್ಯ ಯೋಜನೆಗೆ ವಾರ್ಷಿಕ ಸುಮಾರು 10 ಸಾವಿರ ಕೋಟಿ ರೂ.ಗಳಷ್ಟು ದೊಡ್ಡ ಮೊತ್ತ ಖರ್ಚಾಗಲಿದೆ ಎಂದೇ ಅಂದಾಜು ಮಾಡಲಾಗಿದೆ.

ಬ್ಯಾಂಕ್ ಖಾತೆ ಇಲ್ಲದಿದ್ದರೆ ಅಂತಹವರಿಗೆ ಪೋಸ್ಟಲ್ ಪೇಮೆಂಟ್ ಬ್ಯಾಂಕಿಂಗ್ ಅಥವಾ ಬ್ಯುಸಿನೆಸ್ ಕರೆಸ್ಪಾಂಡೆಂಟ್ ಮೂಲಕ ಪಾವತಿಗೂ ಯೋಜನೆ ರೂಪಿಸಲಾಗಿದೆ. ಮಾಸಿಕ ಸುಮಾರು 731 ಕೋಟಿ ರೂ.ಗಳು ಫಲಾನುಭವಿಗಳ ಕೈ ಸೇರಲಿದೆ. ಆದ್ದರಿಂದ ರಾಜ್ಯದ ಆರ್ಥಿಕತೆಯ ಬೆಳವಣಿಗೆಗೆ ಇದೊಂದು ದೊಡ್ಡ ಕೊಡುಗೆ ಎಂದೇ ಆರ್ಥಿಕ ತಜ್ಞರು ವಿಶ್ಲೇಷಣೆ ಮಾಡುತ್ತಾರೆ.

**ನಗದಿನಿಂದ ಪ್ರಯೋಜನ**

ಅನ್ನಭಾಗ್ಯ ಯೋಜನೆ ಹೇಗೆ ಬಡವರಿಗೆ ಅನುಕೂಲ ತಂದಿದೆಯೋ ಅದೇ ರೀತಿಯಲ್ಲಿ ಈಗ ನಗದು ಪಾವತಿ ಇನ್ನೊಂದು ರೀತಿಯ ಅನುಕೂಲ ತಂದಿದೆ. ಅನ್ನಭಾಗ್ಯ ಬಂದಾಗ ಸಾಕಷ್ಟು ಟೀಕೆಗಳು ಎದುರಾದವು. ಆದರೆ ಸಿದ್ದರಾಮಯ್ಯ ಅವರ ಸರ್ಕಾರ ತಲೆ ಕೆಡಿಸಿಕೊಳ್ಳದೇ ಬಡವರ ಪರ ನಿಂತಿತು. ಅನ್ನಕ್ಕಾಗಿ ಮಾಡುತ್ತಿದ್ದ ವೆಚ್ಚವನ್ನು ಬಡವರು



Downloaded From:www.kpscvaani.com




**ಹತ್ತು ವರ್ಷಗಳ ಹಿಂದೆ ಮೊದಲ ಬಾರಿ ಮುಖ್ಯಮಂತ್ರಿಯಾದ ಅವಧಿಯಲ್ಲಿ ಸಿದ್ದರಾಮಯ್ಯ ಅವರು ಅನ್ನಭಾಗ್ಯ ಯೋಜನೆಗೆ ಚಾಲನೆ ನೀಡಿದ್ದರು. ಬಸವ ಜಯಂತಿಯಂದು ಮೊದಲ ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದ ಸಿದ್ದರಾಮಯ್ಯ ಅವರು ಬಸವಣ್ಣನವರ ದಾಸೋಹ ಸಂಸ್ಕೃತಿಯಂತೆ ಹಸಿವು ಮುಕ್ತ ಕರ್ನಾಟಕ ಮಾಡುವ ತಮ್ಮ ಜೀವಮಾನದ ಆಶಯ ಮತ್ತು ಕಾಳಜಿಯ ಭಾಗವಾಗಿ ಅನ್ನಭಾಗ್ಯ ಯೋಜನೆಯನ್ನು ಘೋಷಿಸಿದ್ದರು.**

ಇನ್ನೊಂದು ಕಡೆ ತೊಡಗಿಸುವರು. ಇತರೆ ದಿನಸಿ ಖರೀದಿಸಲು, ಮಕ್ಕಳ ಶಿಕ್ಷಣ, ಆರೋಗ್ಯ, ಬಟ್ಟೆ ಹೀಗೆ ಬೇರೆ ಬೇರೆ ಅಗತ್ಯಗಳಿಗೆ ಬಳಸುವರು. ಹಾಗಾಗಿ ಅಕ್ಕಿಯ ಜತೆಗೆ ಕೈಗೆ ಬರುವ ತಲಾ 170 ರೂ.ಗಳು ಬೇರೆ ಬೇರೆ ರೂಪದಲ್ಲಿ ಕುಟುಂಬವನ್ನು ಸಲಹುದಕ್ಕೆ ಅನುಕೂಲವೆಂದೇ ಹೇಳಲಾಗುತ್ತಿದೆ.

**ಕಳ್ಳ ಮಾರಾಟಕ್ಕೆ ಬ್ರೇಕ್**

ಉಚಿತ ಅಕ್ಕಿ ನೀಡಿದರೆ ಜನರು ಅದನ್ನು ಮಾರಿಕೊಳ್ಳುತ್ತಾರೆ, ಅಲ್ಲದೆ ನ್ಯಾಯಬೆಲೆ ಅಂಗಡಿಗಳಲ್ಲಿ ಕೂಡ ಅಕ್ರಮ ನಡೆಯುತ್ತದೆ ಎಂದು ಹೇಳಲಾಗುತ್ತಿತ್ತು. ಆದರೆ ಇದೀಗ ನಗದು ನೀಡುವುದರಿಂದ ಬಡವರಿಗೆ ಅನುಕೂಲವಾದರೆ ಇನ್ನೊಂದೆಡೆ ಸರ್ಕಾರಕ್ಕೆ ಸೋರಿಕೆ ತಡೆಗಟ್ಟಲಿದೆ. ಕಳ್ಳತನಕ್ಕೂ ಕಡಿವಾಣ ಬೀಳಲಿದೆ. ಆರ್ಥಿಕತೆಯ ವೃದ್ಧಿಗೂ ಸಹಾಯವಾಗಲಿದೆ.

**ಹೆಚ್ಚುವರಿ ಬಡವರಿಗೆ ರಾಜ್ಯದಿಂದ ವೆಚ್ಚ**

ರಾಜ್ಯ ಸರ್ಕಾರದ ಬಳಿಯಲ್ಲಿ ಹೆಚ್ಚುವರಿ ಬಡವರ ಪಟ್ಟಿ ಇದೆ. ಈ ಪಟ್ಟಿಯಲ್ಲಿ ಸುಮಾರು 40 ಲಕ್ಷ ಫಲಾನುಭವಿಗಳಿದ್ದಾರೆ. ಕೇಂದ್ರ ಸರ್ಕಾರ ಈ ಪಟ್ಟಿಗೆ ತನ್ನ ಒಪ್ಪಿಗೆ ನೀಡಿಲ್ಲ. ಆದ್ದರಿಂದ ಈ ಪಟ್ಟಿಯಲ್ಲಿರುವ ಬಡವರಿಗೆ ರಾಜ್ಯ ಸರ್ಕಾರದಿಂದಲೇ ಅಕ್ಕಿ ಖರೀದಿ ಮಾಡಿ ನೀಡಲಾಗುತ್ತಿದೆ. ಅದಕ್ಕಾಗಿ ಸರ್ಕಾರ ವಾರ್ಷಿಕ 1680 ಕೋಟಿ ರೂ.ಗಳನ್ನು ವೆಚ್ಚ ಮಾಡುತ್ತಿದೆ.

**ಮಾನದಂಡ**

ಯಾವುದೇ ಯೋಜನೆ ನಿಜಕ್ಕೂ ಅರ್ಹರಿಗೆ ತಲುಪಲು ಕೆಲವೊಂದು ಮಾನದಂಡಗಳು ಇರಲೇಬೇಕಾಗುತ್ತದೆ. ಆದ್ಯತಾ ಕುಟುಂಬ ಪಡಿತರ ಚೀಟಿ ನೀಡಲು 14 ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ಸರ್ಕಾರಿ ಹಾಗೂ ಅನುದಾನಿತ ಸಂಸ್ಥೆಗಳ ನೌಕರರು, 3 ಹೆಕ್ಟೇರ್ ಭೂಮಿ ಹೊಂದಿರುವವರು, ನಗರದಲ್ಲಿ 1000 ಚದುರ ಅಡಿ ಮನೆ ಇರುವವರು, ವಾಣಿಜ್ಯ ವ್ಯವಹಾರ ಹೊಂದಿರುವವರು ಹೀಗೆ ವಿವಿಧ ಮಾನದಂಡಗಳಿವೆ.

ಇವುಗಳ ಜತೆಗೆ ಆಧಾರ್ ಲಿಂಕ್ ಮಾಡಿದ್ದರಿಂದ ಸಾಕಷ್ಟು ನಕಲಿ ಕಾರ್ಡುಗಳನ್ನು ರದ್ದು ಮಾಡಲಾಗಿದೆ. ಆ ಕಾರ್ಯ ಇನ್ನಷ್ಟು ಬಿಗಿಯಾಗಿ ಮಾಡಿದರೆ ಲಕ್ಷಾಂತರ ಅನರ್ಹರ ಕಾರ್ಡುಗಳನ್ನು ರದ್ದು ಮಾಡಲು ಹಾಗೂ ಆ ಮೂಲಕ ಸೋರಿಕೆ ತಡೆಗಟ್ಟಲು ಅವಕಾಶ ಇದೆ. ಎಸ್‌ಎಂಎಸ್, ಹೆಬ್ಬೆಟ್ಟು ಗುರುತು ಹೀಗೆ ತಂತ್ರಜ್ಞಾನವನ್ನು ಯೋಜನೆಯಲ್ಲಿ ಯಶಸ್ವಿಯಾಗಿಯೇ ಬಳಸಿಕೊಳ್ಳಲಾಗಿದೆ.

**ಖಾತರಿಯೂ ಇದೆ**

ಪಡಿತರ ಚೀಟಿದಾರರಿಗೆ ಸರ್ಕಾರ ನೀಡುವ ಪಡಿತರ ಸೋರಿಕೆಯಾಗಿ ನಷ್ಟವಾಗಬಾರದು ಎಂಬ ಕಾರಣಕ್ಕೆ ಪಡಿತರ ಖಾತರಿ ಯೋಜನೆಯನ್ನು ಸರ್ಕಾರ 2016ರಲ್ಲಿಯೇ ರೂಪಿಸಿದೆ. ಅದರ ಪ್ರಕಾರ ಯಾವ ದಿನ ಪಡಿತರ ನೀಡಬೇಕು, ಎಷ್ಟು ಗಂಟೆಯಿಂದ ಎಷ್ಟು ಗಂಟೆಯ ತನಕ ನೀಡಬೇಕೆಂದು ವೇಳಾಪಟ್ಟಿಯೇ ಇದೆ.

**ಅದಾಲತ್**

ಅನ್ನಭಾಗ್ಯ ಯೋಜನೆಯಲ್ಲಿ ಆಗುವ ಲೋಪಗಳನ್ನು ತಡೆಯುವುದಕ್ಕೆ ಪ್ರತಿ ನ್ಯಾಯಬೆಲೆ ಅಂಗಡಿಯ ವ್ಯಾಪ್ತಿಯಲ್ಲಿ ಅಧಿಕಾರಿಯೊಬ್ಬರ ಸಮ್ಮುಖದಲ್ಲಿ ನಿರ್ದಿಷ್ಟ ದಿನಾಂಕದಂದು ಅನ್ನಭಾಗ್ಯ ಅದಾಲತ್ ನಡೆಸಲಾಗುತ್ತದೆ.

**ಬಹುಮಾನ**

ಪಡಿತರ ಸೋರಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಾರ್ವಜನಿಕರ ಸಹಭಾಗಿತ್ವದಲ್ಲಿ ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲು ಬಹುಮಾನ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಮಾಹಿತಿದಾರರಿಗೆ ಪತ್ತೆಯಾದ ಅನರ್ಹ ಪಡಿತರ ಚೀಟಿಯೊಂದಕ್ಕೆ ತಲಾ ರೂ.400/– ನಗದು ಬಹುಮಾನ ನೀಡಲಾಗುತ್ತದೆ. ಅಲ್ಲದೇ, ಅಕ್ರಮ ಸಾಗಾಣಿಕೆ, ಕಾಳಸಂತೆಯಲ್ಲಿ ಪಡಿತರ ಮಾರಾಟವನ್ನು ಪತ್ತೆ ಮಾಡಿ ಮಾಹಿತಿ ನೀಡುವ ಸಾರ್ವಜನಿಕರಿಗೆ ಪ್ರಕರಣವು ಸಾಬೀತಾದ ನಂತರ ಒಟ್ಟು ದಾಸ್ತಾನಿನ ಮೌಲ್ಯದ ಶೇಕಡ 5 ರಷ್ಟು ನಗದು ಬಹುಮಾನವನ್ನು ನೀಡುವ ಯೋಜನೆಯನ್ನು ಜಾರಿಗೊಳಿಸಲಾಗಿದೆ.

**ದೂರು ವ್ಯವಸ್ಥೆ**

ಅನ್ನಭಾಗ್ಯ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರು ಯಾವುದೇ ದೂರುಗಳಿದ್ದರೆ ಉಚಿತ ಸಹಾಯವಾಣಿ ದೂರವಾಣಿ ಸಂಖ್ಯೆ 1967 ಹಾಗೂ 1800 425 9339ಕ್ಕೆ ಕರೆ ನೀಡುವ ಸೌಲಭ್ಯವನ್ನು ಒದಗಿಸಲಾಗಿದೆ.

**ವಿವಿಧ ಸಂಸ್ಥೆಗಳಿಗೂ ನೆರವು**

ಅನ್ನಭಾಗ್ಯದಲ್ಲಿಯೇ ದಾಸೋಹ ಯೋಜನೆಯಲ್ಲಿ ಕಿದ್ವಾಯಿ ಆಸ್ಪತ್ರೆಗೆ ಸಂಬಂಧಿಸಿದ ಧರ್ಮಶಾಲೆ, ರಿಮ್ಯಾಂಡ್ ಹೋಂಗಳು, ಸಂತ್ರಸ್ತ ಮಹಿಳಾ ವಸತಿ ನಿಲಯಗಳು ಇತ್ಯಾದಿಗಳಿಗೆ ವಿನಾಯಿತಿ ಒದಗಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ದಾಸೋಹ ಯೋಜನೆಯಡಿ ಒಟ್ಟು 413 ಸಂಸ್ಥೆಗಳ 27725 ನಿವಾಸಿಗಳಿಗೆ 277.25 ಮೆ.ಟನ್ ಅಕ್ಕಿ ಮತ್ತು 138.625 ಮೆ.ಟನ್ ಗೋಧಿ ಹಂಚಿಕೆಯಾಗಿದೆ.

ಒಟ್ಟಾರೆ ಅನ್ನಭಾಗ್ಯ ಎಂಬುದು ತಾಯಿ ಹೃದಯದ ಯೋಜನೆಯಾಗಿದೆ. ಆದ್ದರಿಂದಲೇ ಯೋಜನೆ ರಾಜ್ಯದಲ್ಲಿ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದೆ. ಬಡವರಿಗೆ ಎರಡು ಹೊತ್ತು ನೆಮ್ಮದಿಯ ಊಟ ನೀಡುವ ಮೂಲಕ ಆಹಾರದ ಚಿಂತೆಯನ್ನು ದೂರ ಮಾಡಿದೆ. ■


Downloaded From:www.kpscvaani.com



# ಗೃಹಜ್ಯೋತಿಗೆ ಜನರಿಂದ ಚೇತೋಹಾರಿ ಸ್ಪಂದನೆ

**ಉಚಿತ ವಿದ್ಯುತ್ ನೀಡಲಾಗುವ ಗೃಹಜ್ಯೋತಿ ಯೋಜನೆಗೆ ರಾಜ್ಯದ ಜನರು ಅತ್ಯುತ್ಸಾಹದಿಂದ ನೋಂದಣಿಗೆ ಮುಂದಾಗಿದ್ದಾರೆ.**

ಉಮೇಶ್ ಕೊಲಿಗೆರೆ

ಬೆಲೆ ಏರಿಕೆಯಿಂದ ಬಳಲುತ್ತಿರುವ ಜನಸಾಮಾನ್ಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಜಾರಿಗೊಳಿಸಿರುವ ಐದು ಗ್ಯಾರಂಟಿ ಯೋಜನೆಗಳು ವರದಾನವಾಗಿದ್ದು, ಹೊಸ ಆರ್ಥಿಕ ಬೆಳವಣಿಗೆಗೆ ಮುನ್ನುಡಿ ಬರೆದಿವೆ. ಅದರಲ್ಲೂ ದೇಶದಲ್ಲಿ ಮಾದರಿಯೆಂಬಂತೆ ಜಾರಿಯಾಗಿರುವ ಗೃಹ ಜ್ಯೋತಿ ಯೋಜನೆ ರಾಜ್ಯದ ಶೇ.99ರಷ್ಟು ಕುಟುಂಬಗಳನ್ನು ತಲುಪುವ ನಿರೀಕ್ಷೆಯಿದೆ.

ಪ್ರತಿಮನೆಯ ಗೃಹ ಬಳಕೆಗೆ 200 ಯೂನಿಟ್‌ವರೆಗೂ ಉಚಿತ ವಿದ್ಯುತ್ ನೀಡುವ ಗೃಹ ಜ್ಯೋತಿ ಯೋಜನೆಗೆ ಅರ್ಜಿ ಸಲ್ಲಿಕೆ ಚಾಲನೆಗೊಂಡ ದಿನದಿಂದ ಈವರೆಗೂ ಚೆತೋಹಾರಿ ಸ್ಪಂದನೆ ದೊರೆತಿದೆ. ತಿಂಗಳಲ್ಲೇ ಶೇ.50ಕ್ಕಿಂತ ಹೆಚ್ಚಿನ ಮಂದಿ ನೋಂದಾಯಿಸಿ ಕೊಂಡಿದ್ದಾರೆ. ರಾಜ್ಯ ಸರ್ಕಾರ ಯೋಜನೆ ಜಾರಿಗೆ ಮತ್ತು ನೋಂದಾವಣಿಗೆ ಯಾವುದೇ ಗಡುವು ವಿಧಿಸಿಲ್ಲವಾದರೂ ಆರಂಭದಿಂದಲೂ ಜನಸಾಮಾನ್ಯರು ಅತ್ಯುತ್ಸಾಹದಲ್ಲಿ ತಮ್ಮ ಅಪೇಕ್ಷೆಯನ್ನು ದಾಖಲಿಸುತ್ತಿದ್ದಾರೆ. ಈಗಲೂ ಪ್ರತಿದಿನ ಸಾವಿರಾರು ನೋಂದಣಿಗಳು ನಡೆಯುತ್ತಲೇ ಇವೆ. ಅಧಿಕೃತ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ 2 ಕೋಟಿ 16 ಲಕ್ಷ ಗೃಹ ಬಳಕೆಯ ವಿದ್ಯುತ್ ಸಂಪರ್ಕಗಳಿವೆ. ಅವುಗಳಲ್ಲಿ ಒಟ್ಟು ವಿದ್ಯುತ್ ಬಳಕೆಯನ್ನು ಸರಾಸರಿ ಪರಿಗಣಿಸಲಾಗಿದ್ದು, ಪ್ರತಿಮನೆಯೂ ಕನಿಷ್ಠ 53 ಯೂನಿಟ್ ಬಳಕೆ ಮಾಡುವುದಾಗಿ ಅಂದಾಜಿಸಲಾಗಿದೆ. ಒಟ್ಟು ಲೆಕ್ಕದಲ್ಲಿ ರಾಜ್ಯದ 2 ಕೋಟಿ 14 ಲಕ್ಷ ಸಂಪರ್ಕಗಳು ಗೃಹ ಜ್ಯೋತಿ ಸೌಲಭ್ಯ ಪಡೆಯಲು ಅರ್ಹವಾಗಿವೆ ಎಂದು ಪರಿಗಣಿಸಲಾಗಿದೆ.

**ಸರಳ ಮತ್ತು ಪಾರದರ್ಶಕ ನೋಂದಣಿ ಪದ್ಧತಿ:**

ಗೃಹ ಜ್ಯೋತಿ ಅನುಷ್ಠಾನದಲ್ಲಿ ಅತ್ಯಂತ ಸರಳ ಹಾಗೂ ಪಾರದರ್ಶಕ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಸರ್ಕಾರದ ಅಧಿಕೃತ ವೆಬ್ ಪೋರ್ಟಲ್ ಸೇವಾಸಿಂಧು ಪಂಚಖಾತ್ರಿ ಫಲಾನುಭವಿಗಳ ನೋಂದಣಿಯ ಆದ್ಯ ವೇದಿಕೆಯಾಗಿದೆ. ಗೃಹಜ್ಯೋತಿಗೆ ಸೇವಾಸಿಂಧು ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಲು ಸರಳ ವಿಧಾನ ಅಳವಡಿಸಲಾಗಿದೆ. ಬಳಕೆದಾರರು ತಮ್ಮ ವಿದ್ಯುತ್ ಸಂಪರ್ಕದ ಖಾತೆ ಸಂಖ್ಯೆ ಮತ್ತು ಆಧಾರ್ ಸಂಖ್ಯೆಯನ್ನು ಸೇವಾಸಿಂಧು ಪೋರ್ಟಲ್‌ನ ಪ್ರತ್ಯೇಕ ಲಿಂಕ್‌ನಲ್ಲಿ ನಮೂದಿಸಿದರೆ ಒಟಿಪಿ ಆಧಾರಿತವಾಗಿ ನೋಂದಣಿ ಖಚಿತಗೊಳ್ಳಲಿದೆ. ಯಾವುದೇ ದಾಖಲೆಗಳಿಲ್ಲದೆ ಸ್ವಯಂಚಾಲಿತವಾಗಿ ದತ್ತಾಂಶಗಳು ಅವಗಾನಿಸಲ್ಪಡುತ್ತವೆ. ಮುಂದಿನ ಹಂತದಲ್ಲಿ ಮನೆ ಮಾಲೀಕರು,



Downloaded From:www.kpscvaani.com

ಬಾಡಿಗೆದಾರರು, ಕುಟುಂಬದ ಸದಸ್ಯರು ಎಂಬ ಆಯ್ಕೆಗಳಲ್ಲಿ ವಾಸ್ತವಾದುದನ್ನುಆಯ್ಕೆ ಮಾಡಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದರೆ ನೋಂದಣಿ ಪೂರ್ಣಗೊಳ್ಳಲಿದೆ.

ಸೇವಾಸಿಂಧು ಪೋರ್ಟಲ್ ಸ್ವೀಕೃತ ಅರ್ಜಿಗಳನ್ನು ವಿಳಾಸವಾರು ಆಯಾ ಎಸ್ಕಾಂಗಳಿಗೆ ರವಾನೆ ಮಾಡಲಿದೆ. ವಿದ್ಯುತ್ ಸರಬರಾಜು ಕಂಪೆನಿಗಳು ಅರ್ಜಿಗಳನ್ನು ಪರಿಶೀಲಿಸಲಿವೆ. ಒಂದು ಆಧಾರ್‌ಗೆ ಒಂದು ಸಂಪರ್ಕ ಎಂಬ ಮಾನದಂಡವನ್ನು ಅನುಸರಿಸಲಾಗುತ್ತಿದೆ. ಬಾಡಿಗೆದಾರ, ಮಾಲೀಕ ಎಂಬ ಖಚಿತವಾದ ಆಯ್ಕೆ ಮಾನದಂಡಗಳಿವೆ. ಅವುಗಳಲ್ಲಿ ತಪ್ಪು ಮಾಹಿತಿ ನೀಡಿದರೆ ಆಯಾ ಪ್ರದೇಶಗಳ ಮೀಟರ್ ಮಾಪಕರು ಬಿಲ್ ನೀಡುವ ವೇಳೆ ಪರಿಶೀಲಿಸುತ್ತಾರೆ. ಆಧಾರ್ ಸಂಖ್ಯೆಯನ್ನು ಎರಡೆರಡು ಖಾತೆ ಸಂಖ್ಯೆಗಳಿಗೆ ಜೋಡಣೆ ಮಾಡುವುದು ಅನರ್ಹತೆಗೆ ಅವಕಾಶ ಮಾಡಿಕೊಡುತ್ತದೆ. 200 ಯೂನಿಟ್‌ಗಿಂತ ಹೆಚ್ಚಿನ ವಿದ್ಯುತ್ ಬಳಕೆದಾರರು ನೋಂದಾಯಿಸಿಕೊಂಡಿರುವ ಉದಾಹರಣೆಯಿದ್ದು ಅಂತಹವರ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ. ಉಳಿದಂತೆ ಅರ್ಹಎಲ್ಲಾ ಫಲಾನುಭವಿಗಳಿಗೂ ಬೇಷರತ್ ಆಗಿ ಉಚಿತ ವಿದ್ಯುತ್ ಸೌಲಭ್ಯ ದೊರೆಯಲಿದೆ.

ರಾಜ್ಯ ಸರ್ಕಾರ ಈಗಾಗಲೇ ಪ್ರಕಟಿಸಿರುವಂತೆ 2022–23ನೇ ಸಾಲಿನಲ್ಲಿ ವಾರ್ಷಿಕ ಬಳಕೆ ಮಾಡಿದ ವಿದ್ಯುತ್ ಅನ್ನು ಸರಾಸರಿಯನ್ನಾಗಿ ಪರಿಗಣಿಸಿ, ಹೆಚ್ಚುವರಿಯಾಗಿ ಶೇ.10ರಷ್ಟು ಬಳಕೆಗೆ ಅನುಮತಿಸಿ ಗೃಹಜ್ಯೋತಿ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಜಾತಿ, ಧರ್ಮ, ಬಡವ–ಶ್ರೀಮಂತ ಎಂಬ ವರ್ಗ ರಹಿತವಾಗಿ ತಾರತಮ್ಯವಿಲ್ಲದೆ ಸರ್ವರಿಗೂ ಯೋಜನೆಯ ಸೌಲಭ್ಯ ಕಲ್ಪಿಸಲಾಗುತ್ತಿದೆ. ಒಂದಕ್ಕಿಂತ ಹೆಚ್ಚು ಸಂಪರ್ಕಗಳಿರುವ ಕಟ್ಟಡದಲ್ಲಿ ಅದರಲ್ಲೂ ಬಹುಮಹಡಿ ಸಂಪರ್ಕಗಳಿರುವ ಅಪಾರ್ಟ್‌ಮೆಂಟ್‌ಗಳ ಕುರಿತು ಅನುಮಾನಗಳು ಸೃಷ್ಟಿಯಾಗಿವೆ. ಪ್ರತಿ ಸಂಪರ್ಕಕ್ಕೂ ಪ್ರತ್ಯೇಕ ಆಧಾರ್ ಸಂಖ್ಯೆಯನ್ನು ಜೋಡಿಸಬೇಕಿದೆ. ಬಹತೇಕ ಅಪಾರ್ಟ್‌ಮೆಂಟ್‌ಗಳಲ್ಲಿ ವಿದ್ಯುತ್ ಸಂಪರ್ಕಗಳು ಭೂಮಿ ಮಾಲೀಕರು ಅಥವಾ ಡೆವಲಪರ್ಸ್ ಹೆಸರಿನಲ್ಲಿವೆ. ವಾಸವಿರುವವರು ಫಲಾನುಭವಿಗಳಾಗಿರುತ್ತಾರೆ. ಅಂತಹ

**ಜುಲೈ 1 ರಿಂದ ಬಳಸಿದ ವಿದ್ಯುತ್‌ಗೆ ಆಗಸ್ಟ್ ತಿಂಗಳಿನಲ್ಲಿ ಎಸ್ಕಾಂಗಳು ನೀಡುವ ಬಿಲ್‌ಗಳ ಮೊತ್ತವನ್ನು ಅರ್ಹ ಗ್ರಾಹಕರ ಪರವಾಗಿ ಸರ್ಕಾರ ಪಾವತಿಸಲಿದೆ. ಆಗಸ್ಟ್‌ನಲ್ಲಿ ಬಿಲ್ ಪಡೆಯುವವರೆಗೂ ಗ್ರಾಹಕರು ಶುಲ್ಕ ಪಾವತಿಸಬೇಕು. ಕೆಲವು ಕಡೆ ಜುಲೈ 15ರಂದು ಬಿಲ್ ನೀಡಲಾಗಿದೆ. ಅದರಲ್ಲಿ ಜೂನ್ 15ರಿಂದ ಜುಲೈ 15ರವರೆಗೂ ಮೀಟರ್ ಮಾಪನ ಮಾಡಲಾಗಿದೆ. ಜುಲೈ 1ರಿಂದ ಶುಲ್ಕ ವಿನಾಯಿತಿ ಇದೆ ಎಂದು ಭಾವಿಸುವಂತಿಲ್ಲ. ಸರ್ಕಾರದ ಹೇಳಿಕೆಯ ಪ್ರಕಾರ ಆಗಸ್ಟ್ ತಿಂಗಳಿನಲ್ಲಿ ನೀಡಲಾಗುವ ಬಿಲ್‌ಗಳಿಗೆ ಮಾತ್ರ ಯೋಜನೆ ಅನ್ವಯವಾಗಲಿದೆ.**

ವೇಳೆಯಲ್ಲಿ ವಾಸವಿರುವ ಫಲಾನುಭವಿಗಳ ಆಧಾರ್ ಸಂಖ್ಯೆಯನ್ನೇ ಪರಿಗಣಿಸಿ ಸೌಲಭ್ಯ ನೀಡಲಾಗುತ್ತಿದೆ.

ಬೇರೆ ರಾಜ್ಯದಿಂದ ಬಂದು ಇಲ್ಲಿ ವಾಸವಿರುವವರಿಗೆ ಆಧಾರ್‌ಕಾರ್ಡ್‌ನಲ್ಲಿ ಹುಟ್ಟೂರಿನ ವಿಳಾಸ ಇರುವುದರಿಂದ ಬಹುಶಃ ಇಲ್ಲಿನ ಸೌಲಭ್ಯ ಸಿಗುವುದಿಲ್ಲ ಎಂಬ ಅನುಮಾನಗಳಿದ್ದವು. ಆದರೆ ಸರ್ಕಾರ ಆ ಅನುಮಾನವನ್ನು ಪರಿಹರಿಸಿದೆ. ಆಧಾರ್ ವಿಳಾಸಕ್ಕಿಂತಲೂ ಇಲ್ಲಿ ವಾಸಿಸುವ ಮನೆಯ ಆರ್‌ಆರ್ ಸಂಖ್ಯೆಯನ್ನು ಪ್ರಮುಖವಾಗಿ ಪರಿಗಣಿಸುವುದಾಗಿ ತಿಳಿಸಿದೆ.

ಸರಾಸರಿ ಪರಿಗಣಿಸುವಾಗ ಹೊಸ ಮನೆಯ ಸಂಪರ್ಕಗಳು, 12 ತಿಂಗಳ ಅವಧಿಗಿಂತ ಕಡಿಮೆ ತಿಂಗಳಲ್ಲಿ ಬಾಡಿಗೆಗೆ ಬಂದವರ ಸರಾಸರಿಯನ್ನು ಹೇಗೆ ಪರಿಗಣಿಸಬಹುದು ಎಂಬ ಪ್ರಶ್ನೆಗಳು ಉದ್ಭವಿಸಿದ್ದವು. ಎಸ್ಕಾಂಗಳು ಆರಂಭದಲ್ಲೇ ಪರಿಗಣಿಸಿದಂತೆ ಈ ರೀತಿಯ ಪ್ರಕರಣಗಳಲ್ಲಿ ರಾಜ್ಯದ ಸರಾಸರಿ ಬಳಕೆಯ 53 ಯೂನಿಟ್‌ಗೆ ಶುಲ್ಕ ವಿನಾಯಿತಿ ನೀಡಲು ನಿರ್ಧರಿಸಲಾಗಿದೆ. ಸರಾಸರಿ ಅರ್ಹ ವಿದ್ಯುತ್ ಪ್ರಮಾಣ ಮೀರಿ ಬಳಕೆ ಮಾಡುವ ವಿದ್ಯುತ್‌ಗೆ ಹೆಚ್ಚುವರಿ ಶುಲ್ಕವನ್ನು ಗ್ರಾಹಕರು ಪಾವತಿಸಬೇಕಾಗಿದೆ. ಉದಾಹರಣೆಗೆ ವಾರ್ಷಿಕ ಸರಾಸರಿಯಲ್ಲಿ 100 ಯೂನಿಟ್ ಬಳಕೆ ಮಾಡುವವರಿಗೆ ಶೇ.10ರಷ್ಟು ಹೆಚ್ಚುವರಿ ಬಳಕೆಗೆ ಅನುಮತಿ ನೀಡಿ 110 ಯೂನಿಟ್ ಬಳಕೆಗೆ ಗೃಹಜ್ಯೋತಿ ಯೋಜನೆ ಅನ್ವಯಗೊಳ್ಳಲಿದೆ. ಗ್ರಾಹಕರು 120 ಯೂನಿಟ್ ವಿದ್ಯುತ್ ಬಳಕೆ ಮಾಡಿದ್ದರೆ ಅರ್ಹತಾ ಪ್ರಮಾಣ ದಾಟಿದ 10 ಯೂನಿಟ್ ಶುಲ್ಕವನ್ನು ಪಾವತಿಸುವಂತೆ ಅಧಿಸೂಚಿಸಲಾಗಿದೆ.

200 ಯೂನಿಟ್ ದಾಟಿ ವಿದ್ಯುತ್ ಬಳಕೆಯಾಗಿದ್ದರೆ ಆ ತಿಂಗಳ ಸಂಪೂರ್ಣ ಶುಲ್ಕವನ್ನು ಗ್ರಾಹಕರು ಪಾವತಿಸಬೇಕಿದೆ. ಒಂದು ವೇಳೆ ಗೃಹಜ್ಯೋತಿ ಯೋಜನೆ ಸೌಲಭ್ಯ ಪಡೆಯಲು ಅರ್ಹರಾಗಿದ್ದು, ಆಗಸ್ಟ್‌ನಿಂದ ಫಲಾನುಭವಿಗಳಾಗಿದ್ದವರು, ಯಾವುದಾದರೂ ಒಂದು ತಿಂಗಳಿನಲ್ಲಿ ಅರ್ಹ ಮಿತಿ ದಾಟಿ ವಿದ್ಯುತ್ ಬಳಕೆ ಮಾಡಿದ್ದರೆ ಆ ತಿಂಗಳ ಶುಲ್ಕವನ್ನು ಸಂಪೂರ್ಣವಾಗಿ ಪಾವತಿಸಬೇಕಿದ್ದು, ಮುಂದಿನ ತಿಂಗಳು 200 ಯೂನಿಟ್ ಒಳಗೆ ಬಳಕೆ ಮಾಡಿದರೆ ಮತ್ತೆ ಸೌಲಭ್ಯದ ವ್ಯಾಪ್ತಿಗೆ ಒಳಪಡುತ್ತಾರೆ.

ಅರ್ಜಿ ಸಲ್ಲಿಸಿದ ಬಳಿಕ ಯಾವಾಗಿನಿಂದ ಸೌಲಭ್ಯ ದೊರೆಯಲಿದೆ ಎಂಬ ಹಲವು ರೀತಿಯ ಪ್ರಶ್ನೆಗಳು ಜನ ಸಾಮಾನ್ಯರನ್ನು ಕಾಡುತ್ತಿವೆ. ಎಸ್ಕಾಂಗಳು ಆಡಳಿತಾತ್ಮಕ ಅನುಕೂಲಕ್ಕಾಗಿ ಮೀಟರ್ ಮಾಪನಕ್ಕೆ ಬೇರೆ ಬೇರೆ ದಿನಗಳನ್ನು ನಿಗದಿ ಮಾಡಿಕೊಂಡಿವೆ. ಕರಾವಳಿ ಭಾಗದ ಮೆಸ್ಕಾಂ ತಿಂಗಳ ಒಂದನೇ ದಿನದಿಂದ 27 ದಿನಗಳವರೆಗೂ ಪ್ರದೇಶವಾರು ನಿಗದಿತ ದಿನದಂದು ಬಿಲ್‌ಗಳನ್ನು ನೀಡುತ್ತಿದೆ. ಉಳಿದ ಎಸ್ಕಾಂಗಳು ತಿಂಗಳ ಪೂರ್ತಿ ಹಿಂದಿನ ತಿಂಗಳ ವಿದ್ಯುತ್ ಬಳಕೆಯ ಮಾಪಕದ ಬಿಲ್‌ಗಳನ್ನು ವಿತರಿಸುತ್ತವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಾಗೂ ಇಂಧನ ಸಚಿವರಾದ ಕೆ.ಜೆ.ಜಾರ್ಜ್ ಅವರು ಪ್ರಕಟಿಸಿರುವ ಪ್ರಕಾರ ಆಗಸ್ಟ್ ತಿಂಗಳಿನಲ್ಲಿ ನೀಡಲಾಗುವ ಬಿಲ್‌ಗಳಿಗೆ ಗೃಹಜ್ಯೋತಿಯ ಶುಲ್ಕ ವಿನಾಯಿತಿ ದೊರೆಯಲಿದೆ. ರಾಜ್ಯ ಸರ್ಕಾರ ಮೇ 20ರಂದು ನಡೆಸಿದ ಸಚಿವ ಸಂಪುಟ ಸಭೆಯಲ್ಲಿ ಪಂಚಖಾತ್ರಿ ಯೋಜನೆಗಳ ಅನುಷ್ಠಾನಕ್ಕೆ ನಿರ್ಧಾರ ಕೈಗೊಂಡು ಅಧಿಸೂಚನೆ ಹೊರಡಿಸಿದೆ. ಜೂನ್ 2ರಂದು ಮುಂದುವರೆದ ಸಚಿವ ಸಂಪುಟ ಸಭೆಯಲ್ಲಿ ಯೋಜನೆಗಳ ಜಾರಿಯ ಕಾಲಮಿತಿ ಹಾಗೂ ಮಾರ್ಗಸೂಚಿಗಳ ಕುರಿತು ನಿರ್ಣಯ


Downloaded From:www.kpscvaani.com



ಕೈಗೊಳ್ಳಲಾಗಿದೆ. ಅದರ ಪ್ರಕಾರ ಜುಲೈ 1 ರಿಂದ ಬಳಸಿದ ವಿದ್ಯುತ್‌ಗೆ ಆಗಸ್ಟ್ ತಿಂಗಳಿನಲ್ಲಿ ಎಸ್ಕಾಂಗಳು ನೀಡುವ ಬಿಲ್‌ಗಳ ಮೊತ್ತವನ್ನು ಅರ್ಹ ಗ್ರಾಹಕರ ಪರವಾಗಿ ಸರ್ಕಾರ ಪಾವತಿಸಲಿದೆ. ಆಗಸ್ಟ್‌ನಲ್ಲಿ ಬಿಲ್ ಪಡೆಯುವವರೆಗೂ ಗ್ರಾಹಕರು ಶುಲ್ಕ ಪಾವತಿಸಬೇಕು. ಕೆಲವು ಕಡೆ ಜುಲೈ 15ರಂದು ಬಿಲ್ ನೀಡಲಾಗಿದೆ. ಅದರಲ್ಲಿ ಜೂನ್ 15ರಿಂದ ಜುಲೈ 15ರವರೆಗೂ ಮೀಟರ್ ಮಾಪನ ಮಾಡಲಾಗಿದೆ. ಜುಲೈ 1ರಿಂದ ಶುಲ್ಕ ವಿನಾಯಿತಿ ಇದೆ ಎಂದು ಭಾವಿಸುವಂತಿಲ್ಲ. ಆಗಸ್ಟ್ ತಿಂಗಳಿನಲ್ಲಿ ನೀಡಲಾಗುವ ಬಿಲ್‌ಗಳಿಗೆ ಮಾತ್ರ ಯೋಜನೆ ಅನ್ವಯವಾಗಲಿದೆ.

ಎಸ್ಕಾಂಗಳು ವಿದ್ಯುತ್ ಸರಬರಾಜು ನಿರ್ವಹಣಾ ವೆಚ್ಚವನ್ನು ಸರಿದೂಗಿಸಲು ದರ ಪರಿಷ್ಕರಣೆಗೆ ಕಳೆದ ಜನವರಿಯಿಂದಲೇ ಕರ್ನಾಟಕ ವಿದ್ಯುಚ್ಛಕ್ತಿ ಆಯೋಗದ ಮುಂದೆ ಪ್ರಸ್ತಾವನೆ ಮಂಡಿಸಿದ್ದವು. ಪ್ರಜಾಸತಾತ್ಮಕವಾಗಿ ವಿಚಾರಣೆ ನಡೆಸಿದ ಆಯೋಗ ಎಸ್ಕಾಂಗಳ ಪ್ರಸ್ತಾವನೆಯನ್ನು ಮಾನ್ಯ ಮಾಡಿ, ದರ ಏರಿಕೆಗೆ ಅನುಮತಿ ನೀಡಿರುವುದಲ್ಲದೆ, ಈ ಮೊದಲಿದ್ದ ಸ್ಲಾಬ್‌ಗಳನ್ನು ತೆಗೆದು ಹಾಕಿತ್ತು. ದರ ಪರಿಷ್ಕರಣೆಗೆ ಏಪ್ರಿಲ್‌ನಲ್ಲಿ ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಡೆಯಾಜ್ಞೆ ನೀಡಿದ್ದರು. ವಿಧಾನಸಭೆ ಚುನಾವಣೆ ಮುಗಿದು ಫಲಿತಾಂಶ ಪ್ರಕಟಗೊಳ್ಳುವ ಹಿಂದಿನ ದಿನ ಕೆಇಆರ್‌ಸಿ ದರ ಪರಿಷ್ಕರಣೆಯ ಆದೇಶವನ್ನು ಹೊರಡಿಸಿದ್ದು, ಈ ಆದೇಶ ಏಪ್ರಿಲ್ ನಿಂದಲೇ ಪೂರ್ವಾನ್ವಯವಾಗಲಿದೆ.

ಕೆಇಆರ್‌ಸಿ ಆದೇಶ ಮೇ ತಿಂಗಳಿನಲ್ಲಿ ಜಾರಿಯಾಗಿದ್ದರಿಂದ ಪೂರ್ವಾನ್ವಯಗೊಂಡ ಏಪ್ರಿಲ್ ತಿಂಗಳ ಹೆಚ್ಚುವರಿ ಶುಲ್ಕದ ಬಿಲ್ ಅನ್ನು ಎಸ್ಕಾಂಗಳು ಪ್ರತ್ಯೇಕವಾಗಿ ನೀಡಿವೆ. ಇದು ಗ್ರಾಹಕರನ್ನು ಗೊಂದಲಕ್ಕೀಡು ಮಾಡಿದೆ. ಆದರೆ ಆ ಬಾಕಿ ಪಾವತಿಗೆ ಮೂರು ತಿಂಗಳ ಕಾಲಾವಕಾಶ ನೀಡಲಾಗಿದೆ. ಇನ್ನೂ ಸ್ಲಾಬ್‌ಗಳನ್ನು ತೆಗೆದು ಹಾಕಿದ್ದರಿಂದ ಬಿಲ್ ಮೊತ್ತ ಕೊಂಚ ಏರಿಕೆಯಾಗಿದೆ. ಆಗಸ್ಟ್‌ನಿಂದ ಸರ್ಕಾರವೇ ವಿದ್ಯುತ್ ಶುಲ್ಕ ಪಾವತಿಸುವ ಮೂಲಕ ದರಏರಿಕೆಯ ಬಿಸಿ ಗ್ರಾಹಕರಿಗೆ ತಾಗದಂತೆ ಎಚ್ಚರಿಕೆ ವಹಿಸಿದೆ.

ಚುನಾವಣೆ ಮೊದಲು ಕಾಂಗ್ರೆಸ್ ನೀಡಿದ್ದ ಭರವಸೆಯ ಐದು ಗ್ಯಾರಂಟಿ ಯೋಜನೆಗಳಲ್ಲಿ ಶಕ್ತಿ ಯೋಜನೆಯನ್ನು ಹೊರತು ಪಡಿಸಿ ಉಳಿದ ನಾಲ್ಕು ಯೋಜನೆಗಳು ಹಂತ ಹಂತವಾಗಿ ಜಾರಿ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಗೃಹ ಜ್ಯೋತಿ ಯೋಜನೆಗೆ ವರ್ಷಕ್ಕೆ 13910 ಕೋಟಿ ರೂ ಅನುದಾನವನ್ನು ಬಜೆಟ್‌ನಲ್ಲಿ ನಿಗದಿ ಮಾಡಲಾಗಿದೆ. ಈ ವರ್ಷಕ್ಕೆ ಒಂಬತ್ತು ಸಾವಿರ ಕೋಟಿ ಖರ್ಚು ಮಾಡುವ ನಿರೀಕ್ಷೆಯಿದೆ.

ಸಂಪನ್ಮೂಲ ಕ್ರೋಡೀಕರಣ ಹಾಗೂ ಪಾರದರ್ಶಕವಾಗಿ ಯೋಜನೆ ಜಾರಿಗೊಳಿಸುವ ಸವಾಲಿಗೆ ಸರ್ಕಾರ ಎದೆಯೊಡ್ಡಿ ನಿಂತಿದೆ. ಸಾರ್ವಜನಿಕರಿಗೆ ಯಾವುದೇ ಹೊರೆಯಾಗದಂತೆ ಪಂಚ ಖಾತ್ರಿ ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜುಲೈ 7ರಂದು ಮಂಡಿಸಿರುವ ಬಜೆಟ್‌ನಲ್ಲಿ ಅಬಕಾರಿ ಶುಲ್ಕವನ್ನು ಶೇ.20ರಷ್ಟು ಪರಿಷ್ಕರಿಸಿದ್ದು ಹೊರತು ಪಡಿಸಿದರೆ ಉಳಿದ ಯಾವ ತೆರಿಗೆಗಳು ಏರಿಕೆಯಾಗಿಲ್ಲ. ಇರುವ ಸಂಪನ್ಮೂಲಗಳನ್ನೇ ಸದ್ಬಳಕೆ ಮಾಡಿಕೊಂಡು ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸಲು ಸರ್ಕಾರ ಮುಂದಾಗಿದೆ.

ಇಂಧನ ಸಚಿವರಾದ ಕೆ.ಜೆ. ಜಾರ್ಜ್ ಅವರ ಪ್ರಕಾರ, ಉಚಿತ ವಿದ್ಯುತ್ ನೀಡುವ ಗೃಹ ಜ್ಯೋತಿ ಯೋಜನೆಗಾಗಿ ಅನಗತ್ಯವಾಗಿ ವಿದ್ಯುತ್ ಕಡಿತ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ವಿದ್ಯುತ್ ಸೋರಿಕೆ, ಆದಾಯದ ಸಮರ್ಥ ಬಳಕೆ, ದುಂದು ವೆಚ್ಚ ತಗ್ಗಿಸುವಿಕೆ, ಆಮದುಗೊಳ್ಳುವ ಹಾಗೂ ದೇಶಿಯ



Downloaded From:www.kpscvaani.com

ಕಲ್ಲಿದ್ದಲುಗಳ ಅನುಪಾತ ಆಧಾರಿತ ಮಿಶ್ರಣ, ದುಬಾರಿ ದರದಲ್ಲಿ ವಿದ್ಯುತ್ ಖರೀದಿಯ ಒಪ್ಪಂದಗಳ ಪರಿಷ್ಕರಣೆಯ ಮೂಲಕ ಎಸ್ಕಾಂಗಳ ಮೇಲಾಗುವ ಆರ್ಥಿಕ ಹೊರೆಯನ್ನು ಕಡಿಮೆ ಮಾಡಲು ಚಿಂತನೆ ನಡೆಸಲಾಗಿದೆ.

ಪ್ರಮುಖವಾಗಿ ರಾಜ್ಯದಲ್ಲಿ ಸೌರಶಕ್ತಿ, ಪವನ ಶಕ್ತಿಯಂತಹ ನವೀಕೃತ ಇಂಧನ ಸಾಮರ್ಥ್ಯ ಹೇರಳವಾಗಿದೆ. ಅದನ್ನು ಬಳಸಿಕೊಂಡು ದುಬಾರಿ ವಿದ್ಯುತ್ ಉತ್ಪಾದನೆಯನ್ನು ತಗ್ಗಿಸುವ ಆಲೋಚನೆಗಳು ನಡೆದಿವೆ. ಇದೆಲ್ಲರದ ಹೊರತಾಗಿಯೂ ಗೃಹಜ್ಯೋತಿಯಿಂದ ಎದುರಾಗುವ ಆರ್ಥಿಕ ನಷ್ಟವನ್ನು ಸರ್ಕಾರ ಎಸ್ಕಾಂಗಳಿಗೆ ಮುಂಗಡವಾಗಿ ಪಾವತಿಸುವ ಭರವಸೆ ನೀಡಿದೆ.

ಜುಲೈ 17ರವರೆಗಿನ ಮಾಹಿತಿ ಪ್ರಕಾರ ನಾಲ್ಕು ಎಸ್ಕಾಂಗಳಿಂದ 1.13 ಕೋಟಿ ಗ್ರಾಹಕರು ಈ ಯೋಜನೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಇವರ ಜೊತೆಗೆ ಭಾಗ್ಯಜ್ಯೋತಿ, ಕುಟೀರಜ್ಯೋತಿ ಯೋಜನೆಯಡಿ 40 ಯೂನಿಟ್ ವಿದ್ಯುತ್ ಮತ್ತು ಅಮೃತ ಯೋಜನೆಯಡಿ 75 ಯೂನಿಟ್ ಉಚಿತ ವಿದ್ಯುತ್ ಪಡೆಯುತ್ತಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರನ್ನು ಒಳಗೊಂಡು 40 ಲಕ್ಷ ಫಲಾನುಭವಿಗಳು ಗೃಹಜ್ಯೋತಿ ವ್ಯಾಪ್ತಿಗೆ ಒಳಪಡಲಿದ್ದಾರೆ. ಅಮೃತ ಯೋಜನೆಯಡಿ ಗೃಹ ಬಳಕೆ ಬದಲಾಗಿ ವಾಣಿಜ್ಯ ಬಳಕೆಯ ವಿದ್ಯುತ್ ಸಂಪರ್ಕಕ್ಕೂ ರಿಯಾಯಿತಿ ಸೌಲಭ್ಯ ಪಡೆಯುತ್ತಿದ್ದವರು ಗೃಹಜ್ಯೋತಿ ಯೋಜನೆಯಲ್ಲಿ ಶೋಧಿಸಲ್ಪಡುತ್ತಾರೆ. ನೈಜ ಗೃಹಬಳಕೆ ಫಲಾನುಭವಿಗಳಿಗೆ ಸೌಲಭ್ಯ ದೊರೆಯಲಿದೆ. ಹೀಗಾಗಿ ಆದಾಯ ಸೋರಿಕೆಯೂ ನಿಯಂತ್ರಣಕ್ಕೆ ಬರುವ ವಿಶ್ವಾಸ ವ್ಯಕ್ತವಾಗಿದೆ.

ಜಾಗತಿಕ ವೈಪರಿತ್ಯಗಳಿಂದಾಗಿ ಹೆಚ್ಚುತ್ತಿರುವ ಹಣದುಬ್ಬರದಲ್ಲಿ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನಸಾಮಾನ್ಯರಿಗೆ ಅದರಲ್ಲೂ ಕಡಿಮೆ ಆದಾಯ ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ಗೃಹಜ್ಯೋತಿ ದೊಡ್ಡ ಪ್ರಮಾಣದ ಆರ್ಥಿಕ ಬೆಂಬಲವಾಗುತ್ತಿದೆ. ಅಗತ್ಯ ಮೂಲ ಸೌಕರ್ಯಗಳಲ್ಲಿ ಒಂದಾಗಿರುವ ವಿದ್ಯುತ್‌ಗೆ ಪ್ರತಿ ಕುಟುಂಬಗಳು ಹಣ ವ್ಯಯ ಮಾಡಲೇ ಬೇಕಿತ್ತು. ಈಗ ಅದು ಉಳಿತಾಯವಾಗಲಿದ್ದು ನಿಟ್ಟುಸಿರು ಬಿಡುವಂತಾಗಿದೆ.

ಸರ್ಕಾರ ಎಂದರೆ ತೆರಿಗೆ ಸಂಗ್ರಹ, ಮೂಲ ಸೌಲಭ್ಯಕ್ಕಷ್ಟೆ ಸೀಮಿತವಾಗದೆ ಜನ ಸಾಮಾನ್ಯರಿಗೆ ಒಂದಲ್ಲ ಒಂದು ರೀತಿಯಲ್ಲಿ ನೆರವಾಗಬೇಕು ಎಂಬ ಅಪೇಕ್ಷೆಗಳು ಬೆಲೆ ಏರಿಕೆಯಂತಹ ಸಮಯದಲ್ಲಿ ಜನಸಾಮಾನ್ಯರದ್ದಾಗಿದೆ. ಅದಕ್ಕೆ ಸರ್ಕಾರ ಸ್ಪಂದಿಸುತ್ತಿದೆ.

ಪಂಚ ಖಾತ್ರಿ ಯೋಜನೆಗಳು ರಾಜ್ಯದ ಆರುವರೆ ಕೋಟಿ ಜನಸಂಖ್ಯೆಯಲ್ಲಿ 4.48 ಕೋಟಿ ಜನರನ್ನು ತಲುಪುತ್ತಿವೆ. ಪ್ರತಿ ಕುಟುಂಬಕ್ಕೆ ಮಾಸಿಕ ಕನಿಷ್ಠ ಐದರಿಂದ ಆರು ಸಾವಿರ ರೂಪಾಯಿವರೆಗೂ ಆರ್ಥಿಕ ನೆರವು ಮತ್ತು ಉಳಿತಾಯವಾಗುತ್ತಿದೆ. ಈ ಹಣವನ್ನು ಪ್ರತಿ ಕುಟುಂಬವು ದುಡಿಯುವ ಬಂಡವಾಳವನ್ನಾಗಿ ಮಾಡಿಕೊಳ್ಳುವ ಬದ್ಧತೆ ಪ್ರದರ್ಶನ ಮಾಡಿದರೆ ಭವಿಷ್ಯದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಮಹತ್ವದ ಪರಿವರ್ತನೆಯಾಗಲಿದೆ. ದೇಶದ ಐದು ಟ್ರಿಲಿಯನ್ ಆರ್ಥಿಕತೆಗೆ ಕರ್ನಾಟಕ ಒಂದು ಟ್ರಿಲಿಯನ್ ಆರ್ಥಿಕತೆಯ ಕೊಡುಗೆ ನೀಡುವ ಸಂಕಲ್ಪ ಸಾಕಾರಗೊಳ್ಳಲಿದೆ.

ಉಚಿತ ವಿದ್ಯುತ್ ನೀಡುವ ಯೋಜನೆಗಳು ಕೆಲವು ರಾಜ್ಯಗಳಲ್ಲಿ ಜಾರಿಯಲ್ಲಿವೆ. ಕೃಷಿ ಪಂಪ್‌ಸೆಟ್‌ಗಳಿಗೆ ಬಹುತೇಕ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಉಚಿತ ವಿದ್ಯುತ್ ಸರಬರಾಜು ಮಾಡುತ್ತಿವೆ. ಮೊದಲ ಬಾರಿಗೆ ದೆಹಲಿ ಸರ್ಕಾರ ಉಚಿತ ವಿದ್ಯುತ್ ಯೋಜನೆಯನ್ನು ಜಾರಿಗೊಳಿಸಿತ್ತು. ಆದರೆ ಆ ಯೋಜನೆಗೆ ಕಾಲಮಿತಿಯಿದ್ದು ಪದೇ ಪದೇ ನವೀಕರಣಗೊಳ್ಳಬೇಕಿದೆ. ಜೊತೆಗೆ ಕೆಲ ಷರತ್ತುಗಳಿವೆ. ಒಟ್ಟು 58 ಲಕ್ಷ ಸಂಪರ್ಕಗಳಲ್ಲಿ 48 ಲಕ್ಷ ಗ್ರಾಹಕರು ಮಾತ್ರ ಫಲಾನುಭಗಳಿದ್ದಾರೆ. ಕರ್ನಾಟಕದಲ್ಲಿ ಯಾವುದೇ ಷರತ್ತುಗಳಿಲ್ಲದೆ ಶೇ.99ರಷ್ಟು ಗ್ರಾಹಕರು ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಪಂಜಾಬ್‌ನಲ್ಲಿ ಹಾಲಿ ಮತ್ತು ಮಾಜಿ ಸಚಿವರು, ಶಾಸಕರು, ಪಾಲಿಕೆ ಮೇಯರ್‌ಗಳು, ಪಾಲಿಕೆ ಸದಸ್ಯರು, ಡಿ ಗ್ರೂಪ್ ಹೊರತು ಪಡಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ಕುಟುಂಬಗಳು. ತೆರಿಗೆ ಪಾವತಿದಾರರು, ವೈದ್ಯರು, ಇಂಜಿನಿಯರ್‌ಗಳು, ವಕೀಲರನ್ನು ಹೊರತು ಪಡಿಸಿ ಮಾಸಿಕ 300 ಯೂನಿಟ್‌ವರೆಗೂ ಉಚಿತ ವಿದ್ಯುತ್ ಸೌಲಭ್ಯವನ್ನು 2022ರ ಜುಲೈನಿಂದ ಅಧಿಸೂಚಿಸಲಾಗಿದೆ.

ಪಶ್ಚಿಮ ಬಂಗಾಳದಲ್ಲಿ 2020 ಫೆಬ್ರವರಿ 10 ರಂದು ಮಂಡಿಸಲಾದ ಬಜೆಟ್‌ನಲ್ಲಿ ಆಸೀರ್ ಆಲೋ ಎಂಬ ಉಚಿತ ವಿದ್ಯುತ್ ಯೋಜನೆಯನ್ನು ಷರತ್ತು ಬದ್ಧವಾಗಿ ಘೋಷಿಸಲಾಗಿದೆ. ಅದರಲ್ಲಿ ಆಯ್ದ ವರ್ಗಗಳಿಗೆ ಮೂರು ತಿಂಗಳಿಗೆ 75 ಯೂನಿಟ್‌ವರೆಗೂ ಉಚಿತ ವಿದ್ಯತ್ ಸೌಲಭ್ಯ ನೀಡಲಾಗಿದೆ.

ಇದೇ ಏಪ್ರಿಲ್ 1ರಿಂದ ರಾಜಸ್ಥಾನವೂ ಉಚಿತ ವಿದ್ಯುತ್ ಯೋಜನೆಯನ್ನು ಘೋಷಣೆ ಮಾಡಿದೆ, ಮೊದಲು 50 ಯೂನಿಟ್‌ವರೆಗೂ ನೀಡಲಾಗಿದ್ದ ಸೌಲಭ್ಯವನ್ನು ಜೂನ್‌ನಲ್ಲಿ 100 ಯೂನಿಟ್‌ಗೆ ಹೆಚ್ಚಿಸಲಾಗಿದೆ. 1.04 ಕೋಟಿ ಕುಟುಂಬಗಳು ಈ ಸೌಲಭ್ಯ ಪಡೆಯುತ್ತಿವೆ. ಆದರೆ ಕರ್ನಾಟಕ ಮಾತ್ರ ಯಾವುದೇ ಷರತ್ತುಗಳಿಲ್ಲದೆ ಉಚಿತ ವಿದ್ಯುತ್ ಯೋಜನೆಯನ್ನು ಜಾರಿಗೆ ತರುತ್ತಿದೆ. ಯೋಜನೆಯಿಂದ ಜನರನ್ನು ವಂಚಿಸಬಾರದು ಎಂಬ ಕಾರಣಕ್ಕೆ ದಾಖಲಾತಿಗಳ ರೇಜಿಗೆಯನ್ನು ಬದಿಗೆ ಸರಿಸಲಾಗಿದೆ. ಅನುಮಾನ ಬಂದ ಪ್ರಕರಣಗಳಲ್ಲಿ ಬೆಸ್ಕಾಂ ಸಿಬ್ಬಂದಿಗಳು ಪರಿಶೀಲನೆ ನಡೆಸಿ ದಾಖಲಾತಿ ಪಡೆದುಕೊಳ್ಳಬಹುದು ಎಂದು ಹೇಳಲಾಗಿದೆಯಾದರೂ ಈವರೆಗೂ ಈ ಕುರಿತು ಅಧಿಕೃತ ಸೂಚನೆ ಹೊರಡಿಸಲಾಗಿಲ್ಲ.

ಆರಂಭಿಕ ಮಾಹಿತಿಯ ಪ್ರಕಾರ ಆಧಾರ್ ಜೋಡಣೆಯಾಗಿರುವುದರಿಂದ ಯಾವ ದಾಖಲಾತಿಗಳ ಅಗತ್ಯವೂ ಬರುವುದಿಲ್ಲ ಎಂದು ಬೆಸ್ಕಾಂ ಹಿರಿಯ ಅಧಿಕಾರಿಗಳು ಸ್ಪಷ್ಟ ಪಡಿಸಿದ್ದಾರೆ. ಶಂಕಾಸ್ಪದ ಪ್ರಕರಣಗಳಲ್ಲಿ ಮಾತ್ರ ಸ್ಥಳ ಪರಿಶೀಲನೆ ನಡೆಸಲಾಗುವುದು ಎಂಬ ಮಾಹಿತಿಯನ್ನು ನೀಡಲಾಗಿದೆ.

ಕತ್ತಲಿನಿಂದ ಬೆಳಕಿನೆಡೆಗೆ ನಡೆಸುವ ವಿದ್ಯುತ್ ಆರ್ಥಿಕತೆಗೆ ಚೈತನ್ಯದಾಯಕ ಬೆಂಬಲ ನೀಡುವ ಅಂಶವಾಗಿದೆ. ಈಗ ಉಚಿತವಾಗಿ ರಾಜ್ಯದ ಶೇ.99ರಷ್ಟು ಗ್ರಾಹಕರಿಗೆ ದೊರೆಯುವ ಮೂಲಕ ಅವರ ಆರ್ಥಿಕ ಬೆಳವಣಿಗೆಗೂ ಹೆಜ್ಜೆ ಹಾಕಲಿದೆ. ■


Downloaded From:www.kpscvaani.com

# ಗೃಹಲಕ್ಷ್ಮಿ

## ಮಹಿಳೆಯರ ಆರ್ಥಿಕ ಸಬಲೀಕರಣದತ್ತ ಸರ್ಕಾರದ ದಿಟ್ಟಹೆಜ್ಜೆ...



ಬಿ.ಜಿ.ಪೂರ್ಣಿಮ

ಸಮಾಜದ ಕೆಳಸ್ತರದಲ್ಲಿರುವ ಮಹಿಳೆಯರು ಆರ್ಥಿಕವಾಗಿ ಸಬಲೀಕರಣಗೊಳ್ಳದಿದ್ದರೆ ಮಹಿಳಾ ಸಬಲೀಕರಣ ಯಶಸ್ವಿಯಾಗಲು ಸಾಧ್ಯವಿಲ್ಲ. ಇಂತಹ ಕೆಳಸ್ತರದಲ್ಲಿರುವ ಮಹಿಳೆಯರಿಗೆ ಆರ್ಥಿಕ ಸಹಾಯವನ್ನು ಮಾಡುವ ಮೂಲಕ ಅವರನ್ನು ಸ್ವಾವಲಂಬಿಗಳನ್ನಾಗಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಈ ಸಲುವಾಗಿ ಸರ್ಕಾರವು ಗೃಹಲಕ್ಷ್ಮಿ ಯೋಜನೆಯ ಮೂಲಕ ಕುಟುಂಬದ ಯಜಮಾನಿಗೆ ಪ್ರತಿ ತಿಂಗಳೂ ರೂ 2000 ನೀಡಲು ಮುಂದಾಗಿದೆ.

ಆರ್ಥಿಕವಾಗಿ ಸದೃಢವಾದರೆ ಮಹಿಳೆಗೆ ತನ್ನಿಂದ ತಾನೇ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಹಾಗೆಯೇ ಆರ್ಥಿಕ ಸಬಲೀಕರಣವು ಮಹಿಳೆಯರಿಗೆ ಸಂಕಷ್ಟವನ್ನು ಎದುರಿಸಲು ಮತ್ತು ತನ್ನ ಯೋಗಕ್ಷೇಮವನ್ನು ಸುಧಾರಿಸಿಕೊಳ್ಳಲು ಸಹಾಯ ಮಾಡುತ್ತದೆ. ಮಹಿಳೆಯರು ಆರ್ಥಿಕವಾಗಿ ಸ್ವತಂತ್ರಳಾಗದಿದ್ದರೆ ಸಬಲಳಾಗಲು ಸಾಧ್ಯವಿಲ್ಲ. ನಾನಾ ಕಾರಣಗಳಿಂದ ಉದ್ಯೋಗಕ್ಕೆ ಹೋಗಲಾಗದ ಮಹಿಳೆಯರು ತಾವು ಬಯಸಿದ ವಸ್ತುಗಳನ್ನು ಪಡೆಯಲು ಇಂದಿಗೂ ತಮ್ಮ ತಂದೆ ಅಥವಾ ಗಂಡನ ಮೇಲೆ ಅವಲಂಬಿತರಾಗಿದ್ದಾರೆ. ಇಂತಹವರಿಗೆ ಪ್ರತಿ ತಿಂಗಳು ಸರ್ಕಾರ ನೀಡಲಿರುವ ಈ ಎರಡು ಸಾವಿರ ರೂಪಾಯಿಗಳು ನಿಜವಾಗಿಯೂ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿಸುತ್ತದೆ.

ಸರ್ಕಾರವು ಘೋಷಣೆ ಮಾಡಿದ್ದ ಐದು ಗ್ಯಾರಂಟಿಗಳಲ್ಲಿ ಈಗಾಗಲೇ ಶಕ್ತಿ ಯೋಜನೆ, ಅನ್ನಭಾಗ್ಯ ಯೋಜನೆಗಳು ಪ್ರಾರಂಭವಾಗಿವೆ. ಗೃಹಜ್ಯೋತಿ ಯೋಜನೆಗೆ ನೋಂದಣಿ ಪ್ರಾರಂಭವಾಗಿದೆ. ಕುಟುಂಬದ ಯಜಮಾನಿಗೆ ಎರಡು ಸಾವಿರ ನೀಡುವ ಯೋಜನೆಯಾದ ಗೃಹಲಕ್ಷ್ಮಿ ಯೋಜನೆಯ ನೋಂದಣಿಗೂ ಜುಲೈ 19 ರಂದು ಸರ್ಕಾರ ಚಾಲನೆ ನೀಡಿದೆ.

ಮಹಿಳಾ ಸಬಲೀಕರಣ ಯೋಜನೆಯಾದ ಈ ಯೋಜನೆಗೆ ಅಂತ್ಯೋದಯ, ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿಯಲ್ಲಿ ಕುಟುಂಬದ ಯಜಮಾನಿ ಎಂದು ನಮೂದಿಸಿದ ಮಹಿಳೆಯು ಫಲಾನುಭವಿ ಆಗುತ್ತಾರೆ. ಆದರೆ ಕುಟುಂಬದ ಯಜಮಾನಿ ಅಥವಾ ಪತಿ ಜಿಎಸ್‌ಟಿ ರಿಟನ್ಸ್ ಸಲ್ಲಿಸುವವರಾಗಿದ್ದರೆ, ಆದಾಯ ತೆರಿಗೆ ಪಾವತಿದಾರರಾಗಿದ್ದರೆ, ಆ ಕುಟುಂಬದ ಯಜಮಾನಿಗೆ ಗೃಹಲಕ್ಷ್ಮಿ ಯೋಜನೆ ಅನ್ವಯವಾಗುವುದಿಲ್ಲ. ಅಲ್ಲದೆ ಸದ್ಯದ ಮಾರ್ಗಸೂಚಿಯ ಪ್ರಕಾರ ಪಡಿತರ



Downloaded From:www.kpscvaani.com




ಚೀಟಿಗೆ ಅರ್ಜಿ ಸಲ್ಲಿಸಿ ಕಾಯುತ್ತಿರುವವರು ಈ ಯೋಜನೆಗೆ ಅರ್ಹರಾಗಿರುವುದಿಲ್ಲ.

ತಾಯಿ ಕುಟುಂಬದ ಮುಖ್ಯಸ್ಥೆಯಾಗಿದ್ದರೆ, ಮತ್ತು ಇತ್ತೀಚೆಗೆ ಅವರು ನಿಧನರಾಗಿದ್ದರೆ, ಪಡಿತರ ಚೀಟಿಯಲ್ಲಿ ಯಜಮಾನಿ ಯಾರೆಂಬುದು ಅಗತ್ಯ ತಿದ್ದುಪಡಿಯಾದ ನಂತರ ನೋಂದಾಯಿಸಬಹುದು.

ಇನ್ನು ಫಲಾನುಭವಿಗಳು ಸರ್ಕಾರಿ ವಲಯದಲ್ಲಿ ಕೆಲಸ ಮಾಡಿದ್ದರೆ, ಈಗ ಅವರು ನಿವೃತ್ತರಾಗಿದ್ದು, ಪಿಂಚಣಿ ಪಡೆಯುತಿದ್ದವರೂ ಕೂಡ ಈ ಯೋಜನೆಗೆ ನೋಂದಾಯಿಸಿಕೊಳ್ಳಬಹುದು. ಆದರೆ ಅವರು ಆದಾಯ ತೆರಿಗೆಯನ್ನು ಪಾವತಿಸುವವರಾಗಿರಬಾರದು. ಆದರೆ ಆಸ್ತಿ ತೆರಿಗೆಯನ್ನು ಪಾವತಿಸುತ್ತಿರುವವರು ಈ ಯೋಜನೆಗೆ ಅರ್ಹರಾಗಿರುತ್ತಾರೆ.

ಕುಟುಂಬದಲ್ಲಿ ಮಗ ಅಥವಾ ಮಗಳು ಆದಾಯ ತೆರಿಗೆ ಪಾವತಿದಾರರಾಗಿದ್ದರೂ ಕೂಡ ಕುಟುಂಬದ ಯಜಮಾನಿ ಗೃಹಲಕ್ಷ್ಮಿ ಯೋಜನೆಗೆ ಅರ್ಹರಾಗಿರುತ್ತಾರೆ. ಆದರೆ ಕುಟುಂಬದ ಯಜಮಾನಿಯು ಮರಣ ಹೊಂದಿದ್ದಲ್ಲಿ ಯೋಜನೆಯ ಸೌಲಭ್ಯವನ್ನು ಸ್ಥಗಿತಗೊಳಿಸಲಾಗುತ್ತದೆ.

ಪಡಿತರ ಚೀಟಿಯಲ್ಲಿ ಮನೆಯ ಜಯಮಾನಿ ಎಂದು ಘೋಷಿತರಾಗಿರುವ ಮಂಗಳಮುಖಿಯರು ಕೂಡ ಈ ಯೋಜನೆಗೆ ಅರ್ಹರಾಗಿರುತ್ತಾರೆ. ಪಡಿತರ ಚೀಟಿಯಲ್ಲಿ ಪತಿಯು ಕುಟುಂಬದ ಮುಖ್ಯಸ್ಥ ಎಂದಿರುವುದನ್ನು ಕುಟುಂಬದ ಯಜಮಾನಿ ಮಹಿಳೆ ಎಂದು ಬದಲಾಯಿಸಿ ನೋಂದಾಯಿಸಿಕೊಳ್ಳಬಹುದು. ಇಂತಹ ಪ್ರಕರಣಗಳನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಲ್ಲಿ ವಿಚಾರಿಸಬಹುದು.

ಪಡಿತರ ಚೀಟಿಯಲ್ಲಿ ಕುಟುಂಬದ ಯಾವುದೇ ಸದಸ್ಯರನ್ನು ಕುಟುಂಬದ ಯಜಮಾನಿ ಎಂದು ನಮೂದಾಗಿಲ್ಲದಿದ್ದರೆ, ಪಡಿತರ ಚೀಟಿಯಲ್ಲಿ ಕುಟುಂಬದ ಯಜಮಾನಿಯ ಮಾಹಿತಿಯನ್ನು ನವೀಕರಿಸಿದ ನಂತರ ನೋಂದಾಯಿಸಿಕೊಳ್ಳಲು ಅವಕಾಶವಿರುತ್ತದೆ. ಅದೇ ರೀತಿಯಲ್ಲಿ ವಾಸ ಸ್ಥಾನವನ್ನು ಬದಲಾಯಿಸಿರುವವರು ತಮ್ಮ ಪಡಿತರ ಚೀಟಿಯಲ್ಲಿ ವಿಳಾಸವನ್ನು ನವೀಕರಿಸಲು ಸಮೀಪದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಕಚೇರಿಗೆ ಭೇಟಿ ನೀಡಿ, ಬದಲಾಯಿಸಿಕೊಳ್ಳಬಹುದು.

ಗೃಹಲಕ್ಷ್ಮಿ ಯೋಜನೆಯ ಸೌಲಭ್ಯಕ್ಕಾಗಿ ನೋಂದಣಿ ಮಾಡಿಕೊಳ್ಳಲು ಬಾಪೂಜಿ ಸೇವಾ ಕೇಂದ್ರ, ಗ್ರಾಮ ಒನ್, ಕರ್ನಾಟಕ ಒನ್, ಬೆಂಗಳೂರು ಒನ್ ಕೇಂದ್ರಗಳಲ್ಲಿ ವ್ಯವಸ್ಥೆ ಮಾಡಲಾಗಿದೆ. ನೋಂದಣಿಗೆ ಚಾಲನೆ ನೀಡಿರುವುದರಿಂದ ಸಾಕಷ್ಟು ಫಲಾನುಭವಿಗಳು ಒಂದೇ ದಿನದಲ್ಲಿ

ಮಹಿಳೆಯರೂ ಕೂಡ ಹಿಂದುಳಿದವರೇ. ದಲಿತರು, ಅಲ್ಪಸಂಖ್ಯಾರು, ಆದಿವಾಸಿಗಳಷ್ಟೇ ಮಹಿಳೆಯರೂ ಹಿಂದುಳಿದಿರುವುದರಿಂದ ಅಸಮಾನತೆ ನಿರ್ಮಾಣವಾಗಿದೆ. ಮಹಿಳೆಯರು ಹಿಂದಿನಿಂದಲೂ ಶಿಕ್ಷಣದಿಂದ ವಂಚಿತರಾಗಿದ್ದರು. ಅಂತಹ ಸಮಾಜದಲ್ಲಿ ಸಾಮಾಜಿಕ, ಆರ್ಥಿಕ ಚಲನೆಯಿರುವುದಿಲ್ಲ. ಸಮಾಜದಲ್ಲಿ ಮಹಿಳೆಯರು ಅರ್ಧದಷ್ಟು ಇದ್ದು, ಅವರೂ ಮುಖ್ಯವಾಹಿನಿಗೆ ಬರಬೇಕು. ಸಮಾಜದಲ್ಲಿ ಮಹಿಳೆಯರು ಸಬಲರಾಗದಿದ್ದರೆ ದೇಶ ಸಬಲವಾಗಲು ಸಾಧ್ಯವಿಲ್ಲ.

ಎಷ್ಟೇ ಕಷ್ಟವಾದರೂ ಸಮಾಜದಲ್ಲಿ ಅವಕಾಶ ವಂಜಿತರಾದವರು, ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲರಾಗಿಲ್ಲದವರಿಗೆ ವಿಶೇಷ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ನಮ್ಮ ಸರ್ಕಾರ ಅವರನ್ನು ಮುಖ್ಯವಾಹಿನಿಗೆ ತರಲು ಬಯಸುತ್ತದೆ. ಈ ನಿಟ್ಟಿನಲ್ಲಿ ನಮ್ಮ ಐದು ಗ್ಯಾರಂಟಿ ಯೋಜನೆಗಳು ಪೂರಕವಾಗಲಿವೆ.

–ಸಿದ್ದರಾಮಯ್ಯ
ಮುಖ್ಯಮಂತ್ರಿಗಳು


Downloaded From:www.kpscvaani.com




## ನೋಂದಾವಣೆಗೆ ಬೇಕಾಗುವ ದಾಖಲೆಗಳು:

ಯಜಮಾನಿ ತನ್ನದೇ ಬ್ಯಾಂಕ್ ಖಾತೆಯನ್ನು ಹೊಂದಿರಲೇಬೇಕು. ಗಂಡ ಮತ್ತು ಹೆಂಡತಿ ಜಂಟಿ ಖಾತೆಯನ್ನು ಹೊಂದಿದ್ದರೆ ಅದನ್ನು ಪರಿಗಣಿಸಲಾಗುವುದಿಲ್ಲ. ರಾಷ್ಟ್ರೀಕೃತ/ಷೆಡ್ಯೂಲ್ಡ್ ಬ್ಯಾಂಕ್‌ನಲ್ಲಿ ಖಾತೆಯನ್ನು ಹೊಂದಿದ್ದರೆ ಪರಿಗಣಿಸಲಾಗುವುದು. ಕುಟುಂಬದ ಮುಖ್ಯಸ್ಥರ ಆಧಾರ್ ಕಾರ್ಡ್ ಪಡಿತರ ಚೀಟಿಯೊಂದಿಗೆ ಜೋಡಣೆಯಾಗಿರಲೇಬೇಕು.

ಈ ಯೋಜನೆಗೆ ನೋಂದಯಿಸಿಕೊಳ್ಳಲು ರೇಷನ್ ಕಾರ್ಡ್ ಪ್ರತಿ, ಯಜಮಾನಿ ಮತ್ತು ಆಕೆಯ ಪತಿಯ ಆಧಾರ್ ಕಾರ್ಡ್ ಪ್ರತಿ, ಆಧಾರ್ ನಂಬರ್ ಜೋಡಣೆಯಾಗಿರುವ ಬ್ಯಾಂಕ್ ಖಾತೆಯ ಪಾಸ್ ಬುಕ್‌ನ ಪ್ರತಿ ಮತ್ತು ಆಧಾರ್‌ನಲ್ಲಿ ಜೋಡಣೆಯಾಗಿರುವ ಮೊಬೈಲ್ ಸಂಖ್ಯೆಯನ್ನು ದಾಖಲೆಯಾಗಿ ಸಲ್ಲಿಸಬೇಕು. ಒಂದು ವೇಳೆ ಫಲಾನುಭವಿಗಳು ಪರ್ಯಾಯ ಬ್ಯಾಂಕ್ ಖಾತೆಗೆ ಈ ಸೌಲಭ್ಯ ಬರುವುದನ್ನು ಇಚ್ಛಿಸಿದಲ್ಲಿ, ಆ ಪಾಸ್ ಬುಕ್‌ನ ಪ್ರತಿಯನ್ನು ಸಲ್ಲಿಸಬಹುದು.

ನೋಂದಣಿಗೆ ಗಂಡನ ಆಧಾರ್ ಕಾರ್ಡ್ ಪ್ರತಿ ನೀಡುವುದು ಕಡ್ಡಾಯವಾಗಿರುತ್ತದೆ. ಆದರೆ ಕಾನೂನು ರೀತಿಯಲ್ಲಿ ವಿಚ್ಛೇದನ ಹೊಂದಿದವರು ಗಂಡನ ಆಧಾರ್ ಕಾರ್ಡ್ ಪ್ರತಿ ಸಲ್ಲಿಸುವ ಅಗತ್ಯವಿರುವುದಿಲ್ಲ.

ಜನತೆಗೆ ಕೊಟ್ಟ ಮಾತಿನಂತೆ ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡುತ್ತಿದೆ. ನಮ್ಮ ಯೋಜನೆಗಳನ್ನು ಮಮತಾ ಬ್ಯಾನರ್ಜಿ, ಎಂ.ಕೆ.ಸ್ಟಾಲಿನ್ ಅವರು ತಮ್ಮ ರಾಜ್ಯದಲ್ಲೂ ಜಾರಿ ಮಾಡಲು ಉತ್ಸುಕರಾಗಿದ್ದಾರೆ. ಹಾಗಾಗಿ ನಮ್ಮ ರಾಜ್ಯದ ಯೋಜನೆಗಳು ಇಡೀ ದೇಶಕ್ಕೆ ಮಾದರಿಯಾಗುತ್ತಿದೆ.

**–ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿಗಳು**

ಕೇಂದ್ರಗಳಿಗೆ ಭೇಟಿ ನೀಡುವುದರಿಂದ ಜನದಟ್ಟನೆ ಆಗುತ್ತದೆ. ಅಲ್ಲದೆ ವಯೋವೃದ್ಧ ಮಹಿಳೆಯರು ಘಂಟೆಗಟ್ಟಲೆ ಸರತಿ ಸಾಲಿನಲ್ಲಿ ಕಾಯುವಂತಾಗಬಾರದು ಎಂಬ ಕಾರಣಕ್ಕೆ ಸರ್ಕಾರವು ನೋಂದಣಿ ಪ್ರಕ್ರಿಯೆಯನ್ನು ಸುಗಮವಾಗಿಸುವ ಸಲುವಾಗಿ ಪ್ರತಿ ದಿನದಲ್ಲಿ 60 ಜನರಿಗೆ ಮಾತ್ರ ನೋಂದಣಿಗೆ ಅವಕಾಶವನ್ನು ಕಲ್ಪಿಸಲು ತೀರ್ಮಾನಿಸಿದೆ.

ನೋಂದಣಿಗಾಗಿ ಮನೆಯಿಂದಲೇ ತಮ್ಮ ಮೊಬೈಲ್ ಮೂಲಕ 8147–500–500 ಸಂಖ್ಯೆಗೆ GL ಎಂದು ಟೈಪ್ ಮಾಡಿ, ಸ್ಪೇಸ್ ನೀಡಿ ರೇಷನ್ ಕಾರ್ಡ್ ನಂಬರ್ ನಮೂಸಿದಿ ಎಸ್.ಎಂ.ಎಸ್ ಮಾಡಬೇಕು. ಎಸ್.ಎಂ.ಎಸ್ ಮಾಡಿದ ಕೆಲವೇ ನಿಮಿಷಗಳಲ್ಲಿ ಅವರ ಮೊಬೈಲ್‌ಗೆ ನೋಂದಣಿಗೆ ದಿನಾಂಕ, ಸಮಯ ಮತ್ತು ಸ್ಥಳದ ಮಾಹಿತಿಯನ್ನು ನೀಡಲಾಗುವುದು. ಹೀಗೆ ತಮಗೆ ನಿಗದಿಯಾದ ಸಮಯಕ್ಕೆ ಮನೆಯ ಯಜಮಾನಿ ನಿಗದಿತ ಕೇಂದ್ರಕ್ಕೆ ಹೋಗಿ ನೋಂದಣಿ ಮಾಡಿಸಿಕೊಳ್ಳಬೇಕು. ಕಾರಣಾಂತರದಿಂದ ಆ ಸಮಯಕ್ಕೆ ಹೋಗಲಾಗದಿದ್ದರೆ, ಅಂದೇ ಸಂಜೆ 5 ರಿಂದ 7 ಗಂಟೆಯೊಳಗೆ ಕೇಂದ್ರಕ್ಕೆ ಹೋಗಿ ನೋಂದಾವಣಿ ಮಾಡಿಸಬಹದು.

ವಿಕಲಚೇತನರು, ವಯೋವೃದ್ಧರನ್ನು ಗಮನದಲ್ಲಿಟ್ಟುಕೊಂಡು ಗೃಹಲಕ್ಷ್ಮಿ ಯೋಜನೆಯನ್ನು ಸಂಪೂರ್ಣ ಯಶಸ್ವಿಗಾಗಿ ಸ್ಥಳೀಯ



Downloaded From:www.kpscvaani.com

ಮಟ್ಟದಲ್ಲಿ ಅದೇ ಗ್ರಾಮದವರನ್ನು ಪ್ರಜಾಪ್ರತಿನಿಧಿಗಳಾಗಿ ಸರ್ಕಾರವು ನೇಮಿಸುತ್ತಿದೆ. ಇವರು ಮನೆಮನೆಗೆ ಹೋಗಿ ಈ ಯೋಜನೆಗೆ ಫಲಾನುಭವಿಗಳ ನೋಂದಣಿಯನ್ನು ಮಾಡಿಕೊಳ್ಳಲಿದ್ದಾರೆ. ನೋಂದಣಿಯು ಸಂಪೂರ್ಣವಾಗಿ ಉಚಿತವಾಗಿರುವುದರಿಂದ ಫಲಾನುಭವಿಗಳು ನೋಂದಣಿಗಾಗಿ ಕೇಂದ್ರದಲ್ಲಾಗಲೀ, ಪ್ರಜಾಪ್ರತಿನಿಧಿಗಾಗಲೀ ಹಣವನ್ನು ನೀಡುವಂತಿಲ್ಲ.

ನಿಗದಿತ ಕೇಂದ್ರಗಳಲ್ಲಿ ನೋಂದಾಯಿಸಿಕೊಂಡವರಿಗೆ ಎಸ್.ಎಂ.ಎಸ್. ಮೂಲಕ ಸ್ವೀಕೃತಿ ಸಂದೇಶ ಮತ್ತು ಮಂಜೂರಾತಿ ಪತ್ರವನ್ನು ಸ್ಥಳದಲ್ಲೇ ನೀಡಲಾಗುವುದು. ಆದರೆ ಪ್ರಜಾಪ್ರತಿನಿಧಿ ಮೂಲಕ ನೋಂದಾಯಿಸಿಕೊಂಡವರಿಗೆ ಕೆಲವು ದಿನಗಳಲ್ಲಿ ಸ್ವೀಕೃತಿಯನ್ನು ಕಳುಹಿಸಲಾಗುವುದು. ಒಂದು ವೇಳೆ ಫಲಾನುಭವಿಯು ಗ್ರಾಮ ಒನ್, ಬಾಪೂಜಿ ಕೇಂದ್ರ, ಕರ್ನಾಟಕ ಒನ್, ಬೆಂಗಳೂರು ಒನ್ ಕೇಂದ್ರಗಳಲ್ಲಿ ನೋಂದಾಯಿಸಿಕೊಂಡಿದ್ದಲ್ಲಿ, ಆನಂತರ ಪ್ರಜಾಪ್ರತಿನಿಧಿ ಅವರ ಮನೆಗೆ ಭೇಟಿ ನೀಡಿ ನೋಂದಾಯಿಸಲು ಪ್ರಯತ್ನಿಸಿದರೆ ಈಗಾಗಲೇ ನೋಂದಾಯಿಸಿರುವ ಮಾಹಿತಿ ದೊರೆಯಲಿದೆ.

ಕುಟುಂಬದ ಮುಖ್ಯಸ್ಥರ ಆಧಾರ್ ಕಾರ್ಡ್, ಪಡಿತರ ಚೀಟಿಯೊಂದಿಗೆ ಜೋಡಣೆಯಾಗಿರಲೇ ಬೇಕು. ಹಾಗೆಯೇ ಆಧಾರ್ ಸಂಖ್ಯೆಗೆ ಫಲಾನುಭವಿ ಅವರ ಮೊಬೈಲ್ ನಂಬರ್ ಜೋಡಣೆಯಾಗಿರಲೇ ಬೇಕು. ಮೊಬೈಲ್ ನಂಬರ್ ನಿಷ್ಕ್ರಿಯೆಗೊಂಡಿದ್ದಲ್ಲಿ ನೋಂದಣಿ ಕೇಂದ್ರದಲ್ಲೇ ಬಯೋಮೆಟ್ರಿಕ್ ಉಪಕರಣದಲ್ಲಿ ಬೆರಳಚ್ಚು ನೀಡಿ ಆಧಾರ ದೃಢೀಕರಣ ಮಾಡಿಸಿಕೊಳ್ಳಬಹುದು.

**ಹೆಸರು/ವಿಳಾಸ ಹೊಂದಾಣಿಕೆ ಬಗ್ಗೆ ಆತಂಕ ಬೇಡ**

ಆಧಾರ್ ಮತ್ತು ಪಡಿತರ ಚೀಟಿಯಲ್ಲಿ ಹೆಸರು/ವಿಳಾಸ ಹೊಂದಾಣಿಕೆಯಾಗದಿದ್ದರೆ ಎಂದು ಆತಂತಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ. ಈಗಾಗಲೇ ಆಧಾರ್ ಮತ್ತು ಪಡಿತರ ಚೀಟಿ ಜೋಡಣೆಯಾಗಿರುವುದರಿಂದ ಯಾವುದೇ ಸಮಸ್ಯೆ ಆಗುವುದಿಲ್ಲ.

**ನೋಂದಣಿಗೆ ಗಡುವು ಇರುವುದಿಲ್ಲ**

ಯೋಜನೆಯ ನೋಂದಣಿಗೆ ಕೊನೆಯ ದಿನಾಂಕವನ್ನು ನಿಗದಿ ಮಾಡಿರುವುದಿಲ್ಲ. ಹಾಗಾಗಿ ಜನರು ಸಾವಕಾಶದಿಂದ ಯೋಜನೆಯ ಸೌಲಭ್ಯಕ್ಕಾಗಿ ನೋಂದಣಿ ಮಾಡಿಸಬಹುದು. ನಿಗದಿತ ದಿನಾಂಕದಂದು ಕೇಂದ್ರಕ್ಕೆ ಹೋಗಿ ನೋಂದಾವಣಿ ಮಾಡಿಸಲು ಆಗದಿದ್ದಾಗಲೂ ಆತಂಕ ಪಡುವಂತಿಲ್ಲ. ನಿಗದಿತ ಕೇಂದ್ರಕ್ಕೆ ಕಚೇರಿ ಸಮಯದಲ್ಲಿ ಯಾವುದೇ ದಿನಗಳಲ್ಲಿ ತೆರಳಿ ನೋಂದಾಯಿಸಿಕೊಳ್ಳಬಹುದು.



ನುಡಿದಂತೆ ನಡೆಯುತ್ತಿರುವ ನಮ್ಮ ಸರ್ಕಾರವು ಐದು ಗ್ಯಾರಂಟಿಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯ ನೋಂದಾವಣಿ ಪ್ರಕ್ರಿಯೆಗೆ ಚಾಲನೆ ನೀಡಿದೆ. ಅಂದಾಜು 1.28 ಕೋಟಿ ಕುಟುಂಬಗಳಿಗೆ ಈ ಯೋಜನೆಯು ತಲುಪಲಿದ್ದು, ಮುಂದಿನ ತಿಂಗಳಿನಿಂದ ಅವರ ಖಾತೆಗೆ ನೇರವಾಗಿ ಹಣ ಜಮೆ ಆಗಲಿದೆ.

**–ಲಕ್ಷ್ಮಿ ಹೆಬ್ಬಾಳ್ಕರ್**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

ನೋಂದಣಿಗೆ ನಿಗದಿಪಡಿಸಿರುವ ವೇಳಾ ಪಟ್ಟಿಯ ಕುರಿತು ಹೆಚ್ಚಿನ ಮಾಹಿತಿ ಪಡೆಯಬೇಕಿದ್ದರೆ 1902 ಕ್ಕೆ ಕರೆ ಮಾಡಬಹುದು.

ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ಖಾತೆಗೆ ರೂ. 2000 ವನ್ನು ಆಗಸ್ಟ್ 16 ರಂದು ನೇರ ನಗದು ವರ್ಗಾವಣೆ(DBT) ಅಥವಾ ಆರ್.ಟಿ.ಜಿ.ಎಸ್ ಮೂಲಕ ಜಮೆ ಮಾಡಲಾಗುವುದು. ಫಲಾನುಭವಿಗಳು ತಪ್ಪು ಮಾಹಿತಿ ನೀಡಿ ಈ ಸೌಲಭ್ಯವನ್ನು ಪಡೆದಿದ್ದಲ್ಲಿ ಅಂತಹವರಿಂದ ಪಾವತಿಸಲಾಗಿರುವ ಹಣವನ್ನು ವಸೂಲು ಮಾಡುವ ಜೊತೆಗೆ ಕಾನೂನು ರೀತಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ಈ ಯೋಜನೆಗೆ ಫಲಾನುಭವಿಗಳು ನೋಂದಣಿ ಮಾಡಿಕೊಳ್ಳಲು ಯಾವುದೇ ಗಡುವನ್ನು ನಿಗದಿ ಮಾಡಿರುವುದಿಲ್ಲ. ಸರ್ಕಾರವು ಸುಗಮ ನೋಂದಣಿಗಾಗಿ ಖಚಿತ ವೇಳಾಪಟ್ಟಿಯ ವ್ಯವಸ್ಥೆಯನ್ನು ಮಾಡಿದೆ. ಹಾಗಾಗಿ ಮಹಿಳೆಯರು ತಮಗೆ ನಿಗದಿಪಡಿಸಿದ ವೇಳಾ ಪಟ್ಟಿಯನುಸಾರವಾಗಿ ನೋಂದಾವಣಿ ಮಾಡಿಕೊಳ್ಳುವ ಮೂಲಕ ಯೋಜನೆಯ ಸೌಲಭ್ಯವನ್ನು ಪಡೆದುಕೊಳ್ಳಬೇಕು.



Downloaded From:www.kpscvaani.com



# ಅತ್ಯುತ್ತಮ ಶಾಸಕ ಪುರಸ್ಕಾರ ಪಡೆದ ಇಬ್ಬರು ಜನಪ್ರತಿನಿಧಿಗಳು

ಶುಭ

ಜನಪ್ರತಿನಿಧಿಯಾಗಿ ಆಯ್ಕೆಯಾದ ಬಳಿಕ ಸಮಾಜದ ಸರ್ವತೋಮುಖ ಅಭಿವೃದ್ಧಿ, ನಿರಂತರ ಸಾಮಾಜಿಕ ಬದ್ಧತೆಯನ್ನು ಹೊಂದಿದವರು ವಿರಳ. ಜನರ ಸೇವೆಗಾಗಿ ಯಾವುದೇ ತ್ಯಾಗವನ್ನು ಮಾಡಲು ಸಿದ್ಧವಿರುವವರು ಕೇವಲ ಬೆರಳೆಣಿಕೆಯಷ್ಟು ಮಾತ್ರ. ಶಾಸಕರಾದ ಬಳಿಕ ಅವರಿಗೆ ಜನರೇ ಅವರ ಪಾಲಿಗೆ ಆಸ್ತಿಯಾಗಿ ಬಿಡುತ್ತಾರೆ. ಇದು ಜನಮುಖಿಯಾಗಿರುವ ಭಾರತದ ಸಂವಿಧಾನ ಕೊಟ್ಟ ವಿಶೇಷವಾದ ಅವಕಾಶ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಇದನ್ನು ಅರ್ಥಮಾಡಿಕೊಂಡವರು ಕೆಲವರು ಮಾತ್ರ. ಅಂತಹ ಕಾಳಜಿಯನ್ನು ಹೊಂದಿದ ಜನಪ್ರತಿನಿಧಿಗೆ ಸರ್ಕಾರ 'ಅತ್ಯುತ್ತಮ ಶಾಸಕ' ಎಂದು ಪ್ರಶಸ್ತಿ ನೀಡಿ ಗೌರವಿಸುತ್ತದೆ. ಸಾಮಾಜಿಕ ಕಳಕಳಿ, ಜನರ ಬಗೆಗೆ ಆಸ್ಥೆ, ಅಧ್ಯಯನ, ಮಾನವಿಕವಾದ ದೃಷ್ಟಿಕೋನ ಈ ಪ್ರಶಸ್ತಿಗೆ ಇರುವ ಅಳತೆಗೋಲು.

ಈ ಮಾನದಂಡದಲ್ಲಿಯೇ ಕಳೆದ ಎರಡು ವರ್ಷಗಳ ಸಾಲಿನ ಅತ್ಯುತ್ತಮ ಶಾಸಕ ಪುರಸ್ಕಾರಕ್ಕೆ ಪಾತ್ರರಾದವರು ಎಸ್.ಆರ್.ಪಾಟೀಲ್ (2021–22) ಮತ್ತು ಶ್ರೀಕಂಠೇಗೌಡ (2022–23) ಅವರನ್ನು ಆಯ್ಕೆ ಮಾಡಲಾಗಿದೆ.

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಬಾಡಂಗಡಿ ಎಂಬ ಗ್ರಾಮದವರಾದ ಶಿವನಗೌಡ ರುದ್ರಗೌಡ ಪಾಟೀಲ್ ಅವರು ಮೂಲತಃ ಕೃಷಿ ಕುಟುಂಬದಿಂದ ಬಂದವರು. ಬೀಳಗಿ, ಹುನಗುಂದ ಮತ್ತು ಧಾರವಾಡದಲ್ಲಿ ತಮ್ಮ ಶಿಕ್ಷಣವನ್ನು ಪಡೆದ ಪಾಟೀಲರಿಗೆ ಕ್ರೀಡೆ, ಕಲೆ ಮತ್ತು ಸಾಹಿತ್ಯದಲ್ಲಿ ಅಪಾರವಾದ ಆಸಕ್ತಿಯನ್ನು ಬೆಳೆಸಿಕೊಂಡವರು. ಕೆಲಕಾಲ ವಕೀಲರಾಗಿಯೂ ಸೇವೆ ಸಲ್ಲಿಸಿದು.

ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಸತತ ನಾಲ್ಕು ಬಾರಿ ಆಯ್ಕೆಯಾಗಿರುವ ಎಸ್.ಆರ್.ಪಾಟೀಲ್ ಅವರು ಆಡು ಮುಟ್ಟದ ಸೊಪ್ಪಿಲ್ಲದಂತೆ ಎಲ್ಲಾ ಕ್ಷೇತ್ರಗಳಲ್ಲಿ ಕೆಲಸ ಮಾಡಿದವರು. ವಿರೋಧ ಪಕ್ಷದ ನಾಯಕನ ಸ್ಥಾನವನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದವರು. ಸಮಾಜದ ಎಲ್ಲ ವರ್ಗದ ಜನರು, ಅವಕಾಶ ವಂಚಿತರ ದನಿಯಾಗುವಲ್ಲಿ ಅವರು ಯಾವತ್ತೂ ಮುಂಚೂಣಿಯಲ್ಲಿ ನಿಂತವರು. ಮಾಹಿತಿ ತಂತ್ರಜ್ಞಾನ, ಮೂಲಸೌಕರ್ಯ, ಜೈವಿಕ ತಂತ್ರಜ್ಞಾನ ಖಾತೆಯನ್ನು ಅತ್ಯುತ್ತಮವಾಗಿ ನಿರ್ವಹಿಸಿದವರು.

ಬೀಳಗಿಯಲ್ಲಿದ್ದ ಎಂಟು ಎಕರೆಗೂ ಅಧಿಕ ವಿಸ್ತೀರ್ಣದ ಜಮೀನನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಮತ್ತು ಸ್ವಗ್ರಾಮದಲ್ಲಿದ್ದ ನಾಲ್ಕು ಎಕರೆ ಭೂಮಿಯನ್ನು ಪ್ರಾಥಮಿಕ ಶಾಲೆಗಾಗಿ ದಾನ ಮಾಡಿರುವುದು ಪಾಟೀಲರ ಸಾಮಾಜಿಕ ಬದ್ಧತೆಯನ್ನು ತೋರಿಸುತ್ತದೆ. ಕರ್ನಾಟಕ ಸರ್ಕಾರದಿಂದ ಶ್ರೇಷ್ಠ ಸಹಕಾರಿ ಎಂಬ ಗೌರವಕ್ಕೂ ಪಾಟೀಲರು ಪಾತ್ರರಾಗಿದ್ದಾರೆ.

ದಕ್ಷಿಣ ಪದವೀಧರ ಕ್ಷೇತ್ರದಿಂದ ಎರಡು ಬಾರಿ ಆಯ್ಕೆಯಾಗಿ ವಿಧಾನ ಪರಿಷತ್ತನ್ನು ಪ್ರವೇಶಿಸಿರುವ ಕೆ.ಟಿ. ಶ್ರೀಕಂಠೇಗೌಡ ಅವರು ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಕೊಪ್ಪ ಗ್ರಾಮದವರು. ಇವರೂ ಕೂಡ ಕೃಷಿ ಹಿನ್ನೆಲೆಯ ಕುಟುಂಬದಿಂದ ಬಂದವರು. ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ರಾಜ್ಯಶಾಸ್ತ್ರ ಪದವಿಯನ್ನು ಪಡೆದ ಗೌಡರು ಕಾಲೇಜು ದೆಸೆಯಲ್ಲಿದ್ದಾಗಲೇ ನಾಯಕತ್ವದ ಗುಣವನ್ನು ರೂಢಿಸಿಕೊಂಡಿದ್ದರು.

ಕೊಪ್ಪ ಗ್ರಾಮದ ಸಂಯುಕ್ತ ಕಿರಿಯ ಕಾಲೇಜಿನಲ್ಲಿ ಕೆಲಕಾಲ ಪ್ರಾಂಶುಪಾಲರಾಗಿ ಕೆಲಸ ಮಾಡಿದವರು. ವಿಚಾರದ ಬಗ್ಗೆ ಇರುವ ಸ್ಪಷ್ಟ ನಿಲುವಿನ ಹಿನ್ನೆಲೆಯಲ್ಲಿ ಅವರು ಯಾವುದೇ ವಿಷಯವನ್ನು ಹಿಂಜರಿಕೆ ಇಲ್ಲದೇ ಮಂಡಿಸುವಲ್ಲಿ ಸಿದ್ಧಹಸ್ತರು. ಇಂತಹ ಗುಣಾತ್ಮಕ ವಿಚಾರಗಳ ಕಾರಣದಿಂದ ಗೌಡರು ರಾಜಕೀಯ ಕ್ಷೇತ್ರದಲ್ಲಿ ಬಹುಬೇಗ ಪ್ರವರ್ಧಮಾನಕ್ಕೆ ಬರಲು ಸಾಧ್ಯವಾಯಿತು. ಮಂಡ್ಯ ಪದವೀಧರ ಸಹಕಾರ ಸಂಘದ ಸಂಸ್ಥಾಪಕ ನಿರ್ದೇಶಕರಾಗಿ, ಅಧ್ಯಕ್ಷರಾಗಿ, ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ, ಯುವ ಜನತಾ ಪಕ್ಷದ ಸಂಘಟನಾ ಕಾರ್ಯದರ್ಶಿಯಾಗಿ, ಜನತಾ ಪಕ್ಷದ ಕಾರ್ಯದರ್ಶಿಯಾಗಿ ಕೆಲಸ ಮಾಡಿದವರು.

ಶ್ರೀಕಂಠೇಗೌಡರು ದಕ್ಷಿಣ ಪದವೀಧರ ಕ್ಷೇತ್ರದಿಂದ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಸದನದಲ್ಲಿ ಶಿಕ್ಷಕರು ಹಾಗೂ ಉಪನ್ಯಾಸಕರಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಪ್ರಸ್ತಾಪಿಸಿ ಅವುಗಳಿಗೆ ತಾರ್ಕಿಕ ಅಂತ್ಯ ನೀಡುವಲ್ಲಿ ಯಶಸ್ವಿಯಾಗಿದ್ದಾರೆ.



Downloaded From:www.kpscvaani.com



# ನಿಮ್ಮ ಮನೆ ಬಾಗಿಲಿಗೆ ಸಿದ್ದು ಹಲಸಿನ ಸಸಿಗಳು

ಲಕ್ಷ್ಮೀಕಾಂತರಾಜು ಎಂ ಜಿ

**ಪೇಟೆಂಟ್ ದೊರಕಿರುವ ತುಮಕೂರಿನ ಸಿದ್ದು ಹಲಸಿನ ಸಸಿಗಳನ್ನು ಈಗ ಕೊರಿಯರ್ ಮೂಲಕ ನಿಮ್ಮ ಮನೆಗೆ ತರಿಸಿಕೊಳ್ಳಬಹುದಾಗಿದೆ**

ರಾಜ್ಯದ ಪ್ರತಿಷ್ಠಿತ ಹಾಗೂ ದೇಶದಲ್ಲೆಡೆ ಸುದ್ದಿಯಾಗಿರುವ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಸೀಗೇನಹಳ್ಳಿಯ ಸಿದ್ದು ಹಲಸಿನ ತಳಿಗೆ ಕೇಂದ್ರ ತೋಟಗಾರಿಕೆ ಇಲಾಖೆ ವ್ಯಾಪ್ತಿಗೆ ಬರುವ ಸಸ್ಯ ಪ್ರಭೇಧಗಳು ಮತ್ತು ರೈತರ ಹಕ್ಕುಗಳು ಸಂರಕ್ಷಣಾ ಪ್ರಾಧಿಕಾರ (ಪಿಪಿವಿಎಫ್‌ಆರ್‌ವಿ) ಪೇಟೆಂಟ್ ನೀಡಿದೆ.

ಕಳೆದ ಮೇ 30 ರಂದು ಹೆಸರಘಟ್ಟದ ಐಐಎಚ್‌ಆರ್ ಸಂಸ್ಥೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರೈತ ಪರಮೇಶ್‌ಗೆ ಹಕ್ಕುಸ್ವಾಮ್ಯ ಪ್ರಮಾಣ ಪತ್ರ ಪ್ರದಾನ ಮಾಡಲಾಯಿತು. ಹಲಸಿನ ತಳಿಗಳ ಕುರಿತಾಗಿ ನೀಡಿರುವ ಮೊದಲ ಪೇಟೆಂಟ್ ಇದಾಗಿದೆ. ಇದರಿಂದ ಸಿದ್ದು ಹಲಸಿನ ತಳಿ ಎಂದು ನಕಲಿ ಸಸಿ ಮಾರಾಟ ಮಾಡುತ್ತಿದ್ದವರಿಗೆ ಇನ್ನು ಮುಂದೆ ಸಿದ್ದು ತಳಿಯ ಹೆಸರನ್ನು ಬಳಸದಂತೆ ಹಾಗೂ ನಕಲಿ ಸಸಿಗಳನ್ನು ಮಾರಾಟ ಮಾಡಲು ನಿರ್ಬಂಧಿಸಿದಂತಾಗಿದೆ. ಈ ತಳಿಯನ್ನು ಬೆಳೆಯಲಿಚ್ಛಿಸುವ ರೈತರು ಸಿದ್ದು ಹಲಸಿನ ಮಾಲೀಕರಾದ ಪರಮೇಶ್ ಅವರ ಬಳಿಯೇ ಸಸಿಗಳನ್ನು ಖರೀದಿಸಬೇಕು.

ಈ ಹಕ್ಕು ಸ್ವಾಮ್ಯದ ಪ್ರಕಾರ (ಪೆಟೆಂಟ್) ಮುಂದಿನ ಇಪ್ಪತ್ತು ವರ್ಷದ ಅವಧಿಗೆ ಈ ತಳಿಯ ಹೆಸರನ್ನು ಯಾರೂ ನಕಲು ಮಾಡುವುದಾಗಲಿ ಹಾಗೂ ಈ ಹೆಸರಲ್ಲಿ ಮಾರಾಟ ಮಾಡುವಂತಿಲ್ಲ ಎಂದು ತೋಟಗಾರಿಕಾ ಇಲಾಖೆ ವ್ಯಾಪ್ತಿಗೆ ಬರುವ ಐಎಎಚ್‌ಆರ್ ಸಂಸ್ಥೆಯ ಅಧಿಕಾರಿಯು ತಿಳಿಸಿದ್ದಾರೆ. ಸಸಿ ಬೇಕೆಂಬುವವರು ಪರಮೇಶ್ ಅವರ ತೋಟಕ್ಕೆ ಹೋಗುವ ಅವಶ್ಯಕತೆ ಕೂಡ ಇಲ್ಲ. ಅವರಿಗೆ ದೂರವಾಣಿ ಮಾಡಿದರೆ ಸಾಕು. ಪರಮೇಶ್ ಅವರು ನಿಮ್ಮ ಮನೆ ಬಾಗಿಲಿಗೆ ತಮಗೆ ಬೇಕಾದಷ್ಟು ಸಸಿಗಳನ್ನು ಕೊರಿಯರ್ ಮೂಲಕ ತಲುಪಿಸುವ ವ್ಯವಸ್ಥೆ ಮಾಡುತ್ತಾರೆ.





ಸಿದ್ದು ಹಲಸು ತಳಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿದೆ. ರುಚಿ ಹಾಗೂ ಪೋಷಾಕಾಂಶಗಳು ಹೆಚ್ಚಿರುವುದು ಈ ತಳಿಯ ವಿಶೇಷವಾಗಿದೆ. ಗುಬ್ಬಿ ತಾಲ್ಲೂಕಿನ ಚೇಳೂರು ಬಳಿಯ ರೈತ ಪರಮೇಶ್ ಅವರ ನರ್ಸರಿಯಿಂದ ದಕ್ಷಿಣ ಭಾರತದ ವಿವಿಧ ರಾಜ್ಯಗಳ ರೈತರುಗಳು ಬಂದು ಸಸಿ ಖರೀದಿ ಮಾಡುತ್ತಿರುವುದು ಈ ತಳಿಗಿರುವ ವಿಶೇಷತೆಯನ್ನು ದಾಖಲಿಸುತ್ತಿದೆ.

**ಏನಿದು ಸಿದ್ದು ಹಲಸು?**

ತುಮಕೂರು ನಗರದ ಹೊರ ವಲಯದಲ್ಲಿರುವ ಐಎಎಚ್‌ಆರ್ ಸಂಸ್ಥೆಯು 2017 ರಲ್ಲಿ ಹಲವು ಹಲಸಿನ ತಳಿಗಳ ಪೈಕಿ ಗುಬ್ಬಿ ತಾಲ್ಲೂಕಿನ ಚೇಳೂರು ಬಳಿಯ ಈ ತಳಿಯನ್ನು ಅತ್ಯುತ್ತಮ ತಳಿ ಎಂದು ಗುರುತಿಸಿದೆ. ದಕ್ಷಿಣ ಭಾರತದಲ್ಲಿ ಉತ್ತಮ ಹಲಸಿನ ತಳಿಗಳನ್ನು ಹುಡುಕುವ ಸಮೀಕ್ಷೆಯಲ್ಲಿ ಸಿದ್ದು ಹಲಸು ಪತ್ತೆಯಾಗಿದೆ. ನಲವತ್ತು ವರ್ಷ ಪ್ರಾಯದ ಈ ಹಲಸಿನ ತಳಿಗೆ ಈ ಮರವನ್ನು ಬೆಳೆಸಿದ ರೈತ ಪರಮೇಶ್ ಅವರ ತಂದೆ ಸಿದ್ದಪ್ಪನವರ ಹೆಸರಾಗಿ 'ಸಿದ್ದು ಹಲಸು' ಎಂದು ನಾಮಕರಣ ಮಾಡಲಾಗಿದೆ. ಗಾಢ ತಾಮ್ರ ಬಣ್ಣದ ತೊಳೆಯನ್ನು ಹೊಂದಿರುವ ಈ ಸಿದ್ದು ಹಲಸು ಹೆಚ್ಚು ಸಿಹಿಯಾಗಿದ್ದು, ಅಧಿಕ ರುಚಿ ಮತ್ತು ಪೋಷಾಕಾಂಶಗಳನ್ನು ಒಳಗೊಂಡಿದೆ.

**ಸಿದ್ದು ಹಲಸಿನ ತಳಿಗೆ ಹೆಚ್ಚಿದ ಬೇಡಿಕೆ**

ಈ ತಳಿಯ ಸಸಿಗಳಿಗಾಗಿ ಭಾರೀ ಪ್ರಮಾಣದ ಬೇಡಿಕೆ ಬಂದಿದ್ದು, ರೈತ ಪರಮೇಶ್ ಸಿದ್ದು ಹಲಸಿನ ತಾಯಿ ಮರದ ಚಿಗುರುಗಳಿಂದ ಕಸಿ ಮಾಡಿಸಿ ಲಕ್ಷಾಂತರ ಸಸಿಗಳನ್ನು ಈಗಾಗಲೇ ಮಾರಾಟ ಮಾಡಿದ್ದು, ರಾಜ್ಯದ ವಿವಿಧ ಜಿಲ್ಲೆಗಳು ಹಾಗೂ ದೇಶದ ವಿವಿಧ ಭಾಗಗಳಿಂದ ಸಸಿಗೆ ಬೇಡಿಕೆ ಬರುತ್ತಲೇ ಇದೆ. ದೂರದ ಊರುಗಳ ರೈತರಿಗೂ ಇವರು ಕೊರಿಯರ್ ಮೂಲಕ ಸಸಿಗಳನ್ನು ಕಳಿಸುವ ವ್ಯವಸ್ಥೆ ಮಾಡುವ ಮೂಲಕ ರೈತರಿಗೆ ಓಡಾಟದ ತೊಂದರೆಯನ್ನು ತಪ್ಪಿಸಿದ್ದಾರೆ. ನೀವು ಕೂಡ ಸಿದ್ದು ಹಲಸಿನ ಸಸಿಯನ್ನು ತರಿಸಿಕೊಳ್ಳಲು ಆಸಕ್ತರಾಗಿದ್ದರೆ ಪರಮೇಶ್ ಅವರ ಮೊಬೈಲ್ ನಂಬರ್ 9902794969 ಕ್ಕೆ ಕರೆ ಮಾಡಿ ಸಸಿಗಳನ್ನು ತರಿಸಿಕೊಳ್ಳಬಹುದು.



Downloaded From:www.kpscvaani.com

## ವಾರ್ತಾ ಇಲಾಖೆಯಿಂದ

# ಅಭಿನಂದನಾ ಸಮಾರಂಭ







ಸಾರ್ವಜನಿಕರು ಮತ್ತು ಸರ್ಕಾರದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುವ ವಾರ್ತಾ ಇಲಾಖೆಯು ಅತ್ಯಂತ ಪ್ರಭಾವಿ ಮತ್ತು ಜವಾಬ್ದಾರಿಯುತ ಇಲಾಖೆಯಾಗಿರುತ್ತದೆ. ಆದ್ದರಿಂದ ಸಾಮಾನ್ಯವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಖಾತೆಯನ್ನು ಮುಖ್ಯಮಂತ್ರಿ ಅವರು ತಮ್ಮ ಬಳಿಯೇ ಉಳಿಸಿಕೊಳ್ಳುತ್ತಾರೆ.

ಹೊಸ ಸರ್ಕಾರ ಬಂದಾಗ ಇಲಾಖೆಗಳಿಗೆ ಅಧಿಕಾರಿಗಳು ಬದಲಾಗುವುದು ಸಹಜ. ಅದರಂತೆ ವಾರ್ತಾ ಇಲಾಖೆಗೆ ಹೊಸ ಸರ್ಕಾರವು ನೂತನ ಅಧಿಕಾರಿಗಳನ್ನು ನೇಮಕ ಮಾಡಿತು. ಈ ನೂತನ ಅಧಿಕಾರಿಗಳು ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ವಾರ್ತಾ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ವೇದಿಕೆ ವತಿಯಿಂದ ಅವರನ್ನು ಸನ್ಮಾನಿಸಲು ಉದ್ದೇಶಿಲಾಯಿತು. ಅದರಂತೆ ಜೂನ್ 26 ರಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್, ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿಗಳಾದ ಎನ್. ಜಯರಾಂ, ಮತ್ತು ಆಯುಕ್ತರಾದ ಹೇಮಂತ್ ಎಂ. ನಿಂಬಾಳ್ಕರ್ ಅವರುಗಳನ್ನು ಅಭಿನಂದಿಸಿ ಸನ್ಮಾನಿಸಲಾಯಿತು.

ಕೋಲಾರದವರಾದ ಕೆ.ವಿ.ಪ್ರಭಾಕರ್ ಅವರು ತಮ್ಮ ಪ್ರಾಥಮಿಕ ಮತ್ತು ಪದವಿ ಶಿಕ್ಷಣವನ್ನು ಪೂರ್ತಿಯಾಗಿ ಮುಗಿಸಿದ್ದು ಕೋಲಾರ ಮತ್ತು ಕೆಜಿಎಫ್‌ನಲ್ಲಿ. ವಿದ್ಯಾಭ್ಯಾಸ ಮುಗಿದ ನಂತರ ಇವರು ಕೋಲಾರದ ಧ್ವನಿಯಾಗಿದ್ದ ಕೋಲಾರ ಪತ್ರಿಕೆಯಲ್ಲಿ ಹಂಚಿಕೆದಾರರಾಗಿ ಕೆಲಸಕ್ಕೆ



Downloaded From:www.kpscvaani.com

ಸೇರಿದವರು. ಬಳಿಕ ತಮ್ಮ ವೃತ್ತಿಪರತೆ, ಮಹತ್ವಾಕಾಂಕ್ಷೆ, ಕಾರ್ಯಕ್ಷಮತೆ, ಶ್ರಮ ಹಾಗೂ ಶ್ರದ್ಧೆಯಿಂದ ಕೋಲಾರ ಪತ್ರಿಕೆ, ಸುದ್ದಿ ಸಂಚಯ, ಕೋಲಾರ ವಾಣಿ ವರದಿಗಾರರಾಗಿ, ಉಪಸಂಪಾದಕರಾಗಿ ಕೆಲಸ ಮಾಡಿದರು.

ಆನಂತರ 1999 ರಲ್ಲಿ ರಾಜಧಾನಿಯ ಪತ್ರಿಕಾರಂಗಕ್ಕೆ ಪ್ರವೇಶಿಸಿದ ಪ್ರಭಾಕರ್ ಅವರು ವಿಜಯಕರ್ನಾಟಕ, ಕನ್ನಡಪ್ರಭ ಪತ್ರಿಕೆಗಳ ಮೂಲಕ ವೃತ್ತಿ ಬದುಕಿನಲ್ಲಿ ಮತ್ತೊಂದು ಹಂತಕ್ಕೆ ಏರಿದರು. ವರದಿಗಾರ, ವಿಶೇಷ ವರದಿಗಾರ ಹಾಗೂ ಮುಖ್ಯ ವರದಿಗಾರರೂ ಆಗಿ ರಾಜಕೀಯ, ಅಪರಾಧ, ಸಿವಿಕ್ ಸೇರಿದಂತೆ ಹಲವಾರು ವಿಭಾಗಗಳಲ್ಲಿ ವೃತ್ತಿಯಲ್ಲಿ ಪಳಗಿದವರು. 2013 ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾಧ್ಯಮ ಸಲಹೆಗಾರರಾಗಿದ್ದ ಹಿರಿಯ ಪತ್ರಕರ್ತರಾದ ದಿನೇಶ್ ಅಮೀನ್ ಮಟ್ಟು ಅವರ ಜೊತೆಗೆ ಅತ್ಯಂತ ಕಿರಿಯ ವಯಸ್ಸಿಗೆ ಮಾಧ್ಯಮ ಸಮನ್ವಯಾಧಿಕಾರಿಯಾಗಿ ಹೆಚ್ಚು ಜವಾಬ್ದಾರಿಯಿಂದ ಮತ್ತು ಘನತೆಯಿಂದ ಕಾರ್ಯನಿರ್ವಹಿಸಿದರು.

ಅವರ ಕರ್ತವ್ಯ ನಿಷ್ಠೆಯೇ ಅವರನ್ನು ಈಗ ಬಹು ದೊಡ್ಡ ಸ್ಥಾನಕ್ಕೆ ಏರಿಸಿದೆ. ಸಿದ್ದರಾಮಯ್ಯ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿ ಆಗುತ್ತಿದ್ದಂತೆ ಅವರನ್ನು ತಮ್ಮ ಮಾಧ್ಯಮ ಸಲಹೆಗಾರರನ್ನಾಗಿ ನೇಮಿಸಿಕೊಂಡಿದ್ದಾರೆ. ಅವರಿಗೆ ಸಂಪುಟ ದರ್ಜೆಯ ಸ್ಥಾನ ಮಾನವನ್ನು ನೀಡಲಾಗಿದೆ. ಇಂತಹ ದೊಡ್ಡ ಸ್ಥಾನವನ್ನು ಅಲಂಕರಿಸಿದ್ದರೂ ಕೂಡ ಅವರು ನಾನು ಕೇವಲ ಪತ್ರಕರ್ತ ಎನ್ನುವುದಕ್ಕಿಂತ ದೊಡ್ಡ ಸ್ಥಾನಮಾನ ತಮಗೆ ಯಾವುದೂ ಇಲ್ಲ ಎನ್ನುವ ಮನೋಧರ್ಮಕ್ಕೆ ಪ್ರಭಾಕರ್ ಅವರು ಈಗಲೂ ತಮ್ಮ ಆಲೋಚನೆಯನ್ನು ಸೀಮಿತಗೊಳಿಸಿಕೊಂಡು ಹಾಗೆಯೇ ಡೌನ್ ಟು ಅರ್ಥ್ ಆಗಿದ್ದಾರೆ.

ಇನ್ನು ವಾರ್ತಾ ಇಲಾಖೆಗೆ ಕಾರ್ಯದರ್ಶಿಗಳಾಗಿ ನೇಮಕಗೊಂಡಿರುವ ಎನ್. ಜಯರಾಮ್ ಅವರು ಮುಖ್ಯಮಂತ್ರಿಯವರ ಕಾರ್ಯದರ್ಶಿಗಳಾಗಿದ್ದಾರೆ. ಅಲ್ಲದೆ ಬೆಂಗಳೂರು ನೀರು ಸರಬರಾಜು ಮತ್ತು ನೈರ್ಮಲ್ಯ ಮಂಡಳಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇವರು ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮುಗಿಸಿ, ಪಿ.ಯು.ಸಿ ಯನ್ನು ಮೈಸೂರಿನ ಜೆ.ಎಸ್.ಎಸ್ ಕಾಲೇಜಿನಲ್ಲಿ ಪೂರ್ಣಗೊಳಿಸಿ, ಪದವಿ ಶಿಕ್ಷಣವನ್ನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಹಾಗೂ ಸ್ನಾತಕೋತ್ತರ ಪದವಿಯನ್ನು ಮೈಸೂರು ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡಿದ್ದಾರೆ.

ಶಿಕ್ಷಣ ಪೂರೈಸಿದ ಎರಡು ವರ್ಷದಲ್ಲೇ ಕನ್ನಡ ವಿಷಯದಲ್ಲಿ ಕರ್ನಾಟಕ ನಾಗರಿಕ ಸೇವಾ ಪರೀಕ್ಷೆಯನ್ನು ಬರೆದರು. ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಕೆ.ಎ.ಎಸ್ ಅಧಿಕಾರಿಯಾದರು. ನಂತರ ಐಎಎಸ್ ಹುದ್ದೆಗೆ ಮುಂಬಡ್ತಿ ಹೊಂದಿದ ಇವರು 2004 ನೇ ಬ್ಯಾಚಿನ ಐಎಎಸ್ ಅಧಿಕಾರಿಯಾಗುತ್ತಾರೆ. ತೋಟಗಾರಿಕೆ ಇಲಾಖೆಯ ನಿರ್ದೇಶಕರು, ಚಿತ್ರದುರ್ಗ ಜಿಲ್ಲಾ ಪಂಚಾಯತಿಯ ಸಿಇಒ, ಚಾಮರಾಜನಗರ ಮತ್ತು ಬೆಳಗಾವಿ ಜಿಲ್ಲಾಧಿಕಾರಿ ಹಾಗೂ ಕಂದಾಯ ಇಲಾಖೆಯ ಕಾರ್ಯದರ್ಶಿಗಳಾಗಿ ಇನ್ನೂ ಹಲವು ಇಲಾಖೆಗಳಲ್ಲಿ ಸೇವೆ ಸಲ್ಲಿಸಿ, ಎಲ್ಲಾ ಕಡೆಯೂ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಇವರು ಮೂಲತಃ ಬೆಂಗಳೂರು ಗ್ರಾಮಾಂತರ ಜಿಲ್ಲೆಯವರಾದರೂ ಸಹ ಮೈಸೂರಿನ ಜನ ಇವರನ್ನು ಮೈಸೂರಿನವರೇ ಎನ್ನುವಂತೆ ಗುರುತಿಸುತ್ತಾರೆ. ಇದಕ್ಕೆ ಕಾರಣ ಇವರು ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಎನ್ನುವುದು ಒಂದು ಕಡೆಯಾದರೆ, ಅವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ ಮಾಡಿದ ಉತ್ತಮ ಕೆಲಸಗಳು.

ಹದಿನೆಂಟು ವಿಧಾನಸಭಾ ಕ್ಷೇತ್ರಗಳಿರುವ ಅತ್ಯಂತ ದೊಡ್ಡ ಜಿಲ್ಲೆಯಾದ ಬೆಳಗಾವಿಯಲ್ಲಿ 4 ವರ್ಷಗಳಿಗೂ ಹೆಚ್ಚು ಸುದೀರ್ಘ ಸೇವೆಯನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಮಹಾರಾಷ್ಟ್ರ ಏಕೀಕರಣ ಸಮಿತಿಯು ತಕರಾರು ಮಾಡುವುದು ಸಾಮಾನ್ಯ. ಎಂತಹದ್ದೇ ಕಷ್ಟದ ಪರಿಸ್ಥಿತಿಯಲ್ಲಿಯೂ ಇವರು ಕನ್ನಡತನವನ್ನು ಬಿಟ್ಟುಕೊಡಲಿಲ್ಲ. ಕನ್ನಡಿಗರ ಧ್ವನಿಯಾಗಿ, ಕರ್ನಾಟಕದ ರಕ್ಷಣೆಗಾಗಿ ಶ್ರಮಿಸುವ ಜೊತೆಗೆ ಸದಾ ಕನ್ನಡ ಪರವಾಗಿದ್ದರು.

ಬಿಡಬ್ಲ್ಯೂಎಸ್‌ಎಸ್‌ಬಿ ಅಧ್ಯಕ್ಷರಾಗಿ ಹಮ್ಮಿಕೊಂಡ ವಿನೂತನ ಜಲ ನಿರ್ವಹಣಾ ಯೋಜನೆಗಳು ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸುವ ರೀತಿಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮೆಟಿರಿಯಲ್ ಮ್ಯಾನೇಜ್‌ಮೆಂಟ್ ಸಂಸ್ಥೆಯು 2022ರಲ್ಲಿ 'ಬೆಸ್ಟ್ ಸಿಇಒ ಆಫ್ ದ ಇಯರ್' ಪ್ರಶಸ್ತಿ ನೀಡಿ ರಾಷ್ಟ್ರಮಟ್ಟದಲ್ಲಿ ಇವರ ಸೇವೆಯನ್ನು ಗುರುತಿಸಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾಗಿ ನೇಮಕಗೊಂಡಿರುವ ಹೇಮಂತ್ ಎಂ. ನಿಂಬಾಳ್ಕರ್ ಅವರು 1998 ರ ಬ್ಯಾಚಿನ ಐಪಿಎಸ್ ಅಧಿಕಾರಿ. ಮೂಲತಃ ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯವರಾದರೂ ಕೂಡ ಇವರು ನಮ್ಮ ಕನ್ನಡನಾಡಿನ ದಕ್ಷ ಪೊಲೀಸ್ ಅಧಿಕಾರಿಯಾಗಿದ್ದಾರೆ.

ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯದ ಜತೆ ಗಡಿ ಹಂಚಿಕೊಂಡಿರುವ ಬೆಳಗಾವಿ ಜಿಲ್ಲೆಯಲ್ಲಿ ಎಸ್‌ಪಿ ಆಗಿ ಕಾರ್ಯನಿರ್ವಹಿಸಿದ ಸಂದರ್ಭದಲ್ಲಿ ಇವರು ಕನ್ನಡಿಗರು ಮತ್ತು ಮರಾಠಿಗರ ನಡುವೆ ಸಾಮರಸ್ಯ ಮೂಡಿಸುವ ಮೂಲಕ ಕಾನೂನು ಮತ್ತು ಸುವ್ಯವಸ್ಥೆಯನ್ನು ಅತ್ಯಂತ ಯಶಸ್ವಿಯಾಗಿ ಕಾಪಾಡಿದರು. ಭಾಷೆಯ ಹೆಸರಿನಲ್ಲಿ ಆಗಾಗ ಘಟಿಸುತ್ತಿದ್ದ ಸಣ್ಣ ಪುಟ್ಟ ಅಹಿತಕರ ಘಟನೆಗಳನ್ನು ಆರಂಭದಲ್ಲೇ ಚಿವುಟಿ ಹಾಕಿ ಶಾಂತಿಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು.

ಬೆಂಗಳೂರಿನ ಪೂರ್ವ ವಿಭಾಗದ ಹೆಚ್ಚುವರಿ ಆಯುಕ್ತರಾಗಿದ್ದಾಗ, ಜೂಜು ಅಡ್ಡೆ, ರಿಯಲ್ ಎಸ್ಟೇಟ್ ಮಾಫಿಯಾಗಳಿಗೆ ದುಃಸ್ವಪ್ನವಾಗಿ ಕಾಡಿದ್ದರು. ಸಿಸಿಬಿಯಲ್ಲಿ ಜಂಟಿ ಆಯುಕ್ತರಾಗಿದ್ದ ಸಂದರ್ಭದಲ್ಲಿ ವಿಶ್ವದ ಅತ್ಯುಗ್ರ ಸಂಘಟನೆಯಾದ ಐಸಿಸ್‌ನ ಟ್ವಿಟರ್ ಹ್ಯಾಂಡಲ್ ಮಾಡಿ ಮೆಹದಿ ಬಿಸ್ವಾಸ್ ನನ್ನು ಬಂಧಿಸಿದ್ದು ರಾಷ್ಟ್ರಮಟ್ಟದಲ್ಲಿ ಬಹುದೊಡ್ಡ ಸುದ್ದಿಯಾಗಿತ್ತು.

2013 ರಲ್ಲಿ ಉತ್ತರಾಖಂಡ್‌ನಲ್ಲಿ ಸಂಭವಿಸಿದ ನೆರೆ ಮತ್ತು ಭೂ ಕುಸಿತದ ಸಂದರ್ಭದಲ್ಲಿ ಅಂದಿನ ಕಾರ್ಮಿಕ ಸಚಿವರಾಗಿದ್ದ ಸಂತೋಷ್ ಲಾಡ್ ಅವರೊಂದಿಗೆ ತೆರಳಿ ಕನ್ನಡಿಗರನ್ನು ರಕ್ಷಿಸುವಲ್ಲಿ ಶ್ರಮಿಸಿದ್ದಾರೆ. ಒಟ್ಟಿನಲ್ಲಿ ಕಾನೂನು ಸುವ್ಯವಸ್ಥೆ, ರಕ್ಷಣೆ ಮತ್ತು ಜನಸಾಮಾನ್ಯರ ಜೊತೆ ಮುಕ್ತವಾಗಿ ಬೆರೆಯುವ ಮೂಲಕ ಅವರು ಸೌಹಾರ್ದ ಪ್ರಿಯ ಅಧಿಕಾರಿ ಎನಿಸಿದ್ದಾರೆ.


Downloaded From:www.kpscvaani.com





ಪೊಲೀಸ್ ವೃತ್ತಿಗೆ ಸೇರುವ ಮುನ್ನ ಪ್ರಮುಖ ಮರಾಠಿ ದಿನಪತ್ರಿಕೆಯಾದ 'ಸಕಾಳ'ದಲ್ಲಿ ವರದಿಗಾರರಾಗಿಯೂ ಕೆಲಸ ಮಾಡಿರುವುದಲ್ಲದೆ ಸಾಹಿತ್ಯ ಮತ್ತು ಬರಹಗಳಲ್ಲಿ ಆಸಕ್ತಿ ಹೊಂದಿರುವ ಕಾರಣ ವಾರ್ತಾ ಇಲಾಖೆಯ ಜವಾಬ್ದಾರಿಯನ್ನು ಅರಿತವರಾಗಿದ್ದಾರೆ.

ಅಭಿನಂದನೆಗಳನ್ನು ಸ್ವೀಕರಿಸಿ ಮಾತನಾಡಿದ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅವರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯನ್ನು ಈಗಿನ ಕಾಲಮಾನಕ್ಕೆ ತಕ್ಕಂತೆ ಅತ್ಯಂತ ಕ್ರಿಯಾಶೀಲವಾಗಿ ರೂಪಿಸುವಲ್ಲಿ ಮತ್ತು ಎಲ್ಲ ರೀತಿಯಿಂದಲೂ ಸದೃಢಗೊಳಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದರು.

ಸರ್ಕಾರದ ಯೋಜನೆಗಳು, ನೀತಿ, ನಿಯಮ, ನಿರ್ಧಾರಗಳನ್ನು ಸಾರ್ವಜನಿಕರಿಗೆ ತಲುಪಿಸುವ ಕೆಲಸವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಮಾಡುತಿದ್ದು, ಇಲಾಖೆಯನ್ನು ಮತ್ತಷ್ಟು ಸದೃಢಗೊಳಿಸುವ ನಿಟ್ಟಿನಲ್ಲಿ ಖಾಲಿ ಹುದ್ದೆಗಳ ಭರ್ತಿ ಮತ್ತು ನೆನೆಗುದಿಗೆ ಬಿದ್ದಿರುವ ವಿವಿಧ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಬಡ್ತಿ ನೀಡುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಲಾಗುವುದು ಎಂದರು.

ಪತ್ರಕರ್ತರು ಮತ್ತು ವಾರ್ತಾ ಇಲಾಖೆಯ ಸಂಬಂಧ ಹೇಗಿರುತ್ತದೆ ಎಂಬ ಕುತೂಹಲದೊಂದಿಗೆ 25 ವರ್ಷಗಳ ಹಿಂದೆ ಕೋಲಾರ ಪತ್ರಿಕೆಯ ವರದಿಗಾರನಾಗಿ ಈ ಇಲಾಖೆಯ ಕಚೇರಿಗೆ ಭೇಟಿ ನೀಡಿದುದನ್ನು ನೆನಪಿಸಿಕೊಂಡ ಅವರು, ಇಂದು ಇದೇ ಇಲಾಖೆ ವತಿಯಿಂದ ಅಭಿನಂದನೆಗಳನ್ನು ಸ್ವೀಕರಿಸಿದಕ್ಕೆ ಅತ್ಯಂತ ಸಂತಸ ಉಂಟುಮಾಡಿದೆ, ಇದನ್ನು ಎಂದಿಗೂ ಮರೆಯುವಂತಿಲ್ಲ ಎಂದರು.

ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿಗಳಾದ ಎನ್. ಜಯರಾಂ ಅವರು ಮಾತನಾಡಿ, ಸರ್ಕಾರದ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ಇಲಾಖೆ ಹಾಗೂ ಇಲಾಖೆಯ ಅಧಿಕಾರಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಇದರ ಜೊತೆಗೆ ಲೋಪದೋಷಗಳು, ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವಲ್ಲಿಯೂ ಈ ಇಲಾಖೆ ಅಧಿಕಾರಿಗಳ ಪಾತ್ರ ಅಪಾರವಾಗಿದ್ದು, ಅತ್ಯಂತ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ಈ ಇಲಾಖೆ ಚುರುಕಾಗಿ ಕೆಲಸ ಮಾಡಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಇಲಾಖೆಯ ಅವಶ್ಯಕತೆ ಈ ಹಿಂದೆಂದಿಗಿಂತಲೂ ಹೆಚ್ಚು ಈಗ ಇದೆ. ಹಾಗಾಗಿ ಕೊಟ್ಟಿರುವ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಬೇಕು. ಈ ಮೂಲಕ ಸರ್ಕಾರಕ್ಕೆ ಒಳ್ಳೆಯ ಹೆಸರು ತರಬೇಕು ಎಂದು ಹೇಳಿದ ಕಾರ್ಯದರ್ಶಿ ಜಯರಾಂ ಅವರು ಇಲಾಖೆಯಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಮತ್ತು ಇತಿಮಿತಿಗಳ ನಡುವೆಯೂ ಇಲಾಖೆಗೆ ಸಮರ್ಪಕ ಅನುದಾನವನ್ನು ಮುಖ್ಯಮಂತ್ರಿಗಳು ಒದಗಿಸಿಕೊಡಲಿದ್ದಾರೆ ಎಂದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ ಎಂ. ನಿಂಬಾಳ್ಕರ್ ಅವರು ಮಾತನಾಡಿ, ಸರ್ಕಾರದ ಅಪೇಕ್ಷೆಗೆ ತಕ್ಕಂತೆ ಕಾರ್ಯನಿರ್ವಹಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಸರ್ಕಾರದ ಜನಪರ ಕಾರ್ಯಕ್ರಮಗಳ ಪ್ರಚಾರ ಮನಗಂಡು ಇಲಾಖೆಯನ್ನು ಸ್ಥಾಪಿಸಲಾಗಿದೆ. ಸದ್ಯದ ತಂತ್ರಜ್ಞಾನಕ್ಕೆ ತಕ್ಕಂತೆ ಇಲಾಖೆಯ ಕಾರ್ಯವ್ಯಾಪ್ತಿ ಬದಲಾಗಿದ್ದು, ಅದನ್ನು ಮೈಗೂಡಿಸಿಕೊಂಡು ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯನಿರ್ವಹಿಸಬೇಕಿದೆ ಎಂದರು.

ಸಮಾಜದ ಪ್ರತಿಯೊಂದು ರಂಗದಲ್ಲಿ ಮಾತ್ರವಲ್ಲದೇ ಖಾಸಗಿ ಬದುಕಿನಲ್ಲಿಯೂ ಮಾಧ್ಯಮ ಪ್ರವೇಶಿಸಿದೆ. ಇಂತಹ ಸಂದರ್ಭದಲ್ಲಿ ನಾವು ನಮ್ಮ ಹೊಣೆಗಾರಿಕೆಯನ್ನು ಅರಿತುಕೊಂಡು ಕೆಲಸ ಮಾಡಬೇಕು ಮತ್ತು ಹೊಸಹೊಸ ವಿಚಾರಗಳನ್ನು ಮತ್ತು ಚಿಂತನೆಗಳನ್ನು ಇಲಾಖೆಯ ದೈನಂದಿನ ಕೆಲಸಗಳಲ್ಲಿ ಅಳವಡಿಸಿಕೊಂಡು ಇಲಾಖೆಯ ಕೆಲಸದಲ್ಲಿ ನಾವಿನ್ಯತೆ ತರಬೇಕಿದೆ ಎಂದರು.

ಜಂಟಿ ನಿರ್ದೇಶಕರಾದ ಮಂಜುನಾಥ ಡೊಳ್ಳಿನ್ ಅವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಇಲಾಖೆಯ ಜಂಟಿ ನಿರ್ದೇಶಕರುಗಳಾದ ಪಲ್ಲವಿ ಹೊನ್ನಾಪುರ, ಸಿದ್ದೇಶ್ವರಪ್ಪ ಜಿ.ಬಿ, ಸಿ.ಆರ್.ನವೀನ್, ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿಗಳಾದ ಶಂಕರಪ್ಪ, ಅಧಿಕಾರಿಗಳಾದ ಹಿಮಂತರಾಜು, ಆರ್.ರಾಜು ಸೇರಿದಂತೆ ಇಲಾಖೆಯ ಉಪನಿರ್ದೇಶಕರುಗಳು, ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ್ದ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು. ■


Downloaded From:www.kpscvaani.com



# ಗಿನ್ನಿಸ್ ದಾಖಲೆ ಸೃಷ್ಟಿಸಿದ ಕರ್ನಾಟಕದ ಲಂಬಾಣಿ ಕಸೂತಿ ಕಲೆ




**ಲಂಬಾಣಿ ವಸ್ತ್ರ ವಿನ್ಯಾಸದ ಮೂಲಕ ರಾಜ್ಯದಲ್ಲಿ ತನ್ನದೇ ಛಾಪು ಮೂಡಿಸಿರುವ ಕರ್ನಾಟಕದ ಸಂಡೂರು ಕುಶಲಕಲಾ ಕೇಂದ್ರವು ಇದೀಗ ಜಿ-20 ಶೃಂಗ ಸಭೆಯಲ್ಲಿ ಎಲ್ಲರ ಗಮನ ಸೆಳೆದಿದೆ.**

ಡಾ. ವರ ಪ್ರಸಾದ್ ರಾವ್ ಪಿ ವಿ

**ಜಾ**ಗತಿಕ ಮಾರುಕಟ್ಟೆಯ ಬಹು ಬೇಡಿಕೆಯ ಭಾರತೀಯ ಪರಂಪರೆಯ ಕಸೂತಿ ಕಲೆಗಳ ಪೈಕಿ ಲಂಬಾಣಿ ಜನಾಂಗದ ಕಲೆಗಳು ಇಂದು ವಿಶೇಷ ಬೇಡಿಕೆಯನ್ನು ಸೃಷ್ಟಿಸಿವೆ. ಲಂಬಾಣಿ ಮಹಿಳೆಯರು ಧರಿಸುವ ಸಾಂಪ್ರದಾಯಕ ಉಡುಗೆ, ಆಭರಣಗಳು, ಇಂದಿನ ಫ್ಯಾಷನ್ ಜಗತ್ತಿನಲ್ಲಿ ಯುವ ಸಮೂಹವನ್ನು ಸೆಳೆದಿವೆ. ಇದೀಗಾ ವಿಶ್ವ ಮಟ್ಟದಲ್ಲೂ ಹೆಸರು ಮಾಡಿದೆ. ಸಂಡೂರಿನ ಲಂಬಾಣಿ ಮಹಿಳೆಯರ 1000 ಕಸೂತಿ ಕಲೆಯ ಪ್ರದರ್ಶನವು ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ಗೆ ಪಾತ್ರವಾಗಿದೆ. ಹಂಪಿಯ ಜಿ-20 ಶೃಂಗಸಭೆಯ ಕಾರ್ಯಕಾರಿ ಸಭೆಯಲ್ಲಿ ಪ್ರಮಾಣಪತ್ರ ವಿತರಿಸಲಾಯಿತು. ಈ ಲಂಬಾಣಿ ಕಸೂತಿ ಕಲೆಯ ವಿಶೇಷತೆಯನ್ನು ತಿಳಿಯೋಣ ಬನ್ನಿ.

ಬಂಜಾರ... ಲಂಬಾಣಿ... ನಾಯ್ಕ... ಗೋರ್... ಮಾಟ... ಹೀಗೆ ವಿವಿಧ ನಾಮಧೇಯಗಳಿಂದ ಗುರುತಿಸಿಕೊಳ್ಳುವ ಇವರುಗಳು ಗುಜರಾತ್, ರಾಜಾಸ್ಥಾನ, ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಪ್ರಮುಖವಾಗಿ ವಾಸಿಸುವ ಒಂದು ಜನಾಂಗದವರು. ಮೂಲತಃ ರಾಜಸ್ಥಾನ ಮತ್ತು ಗುಜರಾತ್ ಮೂಲದ ಇವರು ಲಂಬಾಣಿ ಭಾಷೆಯನ್ನು ಮಾತನಾಡುತ್ತಾರೆ. ಬಂಜಾರಾ ಮಹಿಳೆಯರ ಕಸೂತಿಯ ದಿರಿಸು ವೈಶಿಷ್ಟವಾಗಿರುತ್ತದೆ. ಇವರು ಧರಿಸುವ ಸಾಂಪ್ರದಾಯಿಕತೆ ಉಡುಗೆಯ ಮೇಲೆ "ಲೆಪೊ' ಎಂಬ ವಿಶಿಷ್ಟ ವಿಧಾನದ ಕಸೂತಿ ಕಲೆಯನ್ನು ಪಡಿಮೂಡಿಸುತ್ತಾರೆ. ಗಾಢ ರಂಗಿನ ವರ್ಣಮಯ ಈ ಲೆಪೊ ಕಸೂತಿಯ ಜೊತೆಗೆ ಮಿರರ್ ವರ್ಕ್ (ಪುಟ್ಟ ಕನ್ನಡಿಗಳನ್ನು) ಬಳಸುತ್ತಾರೆ. ಈ


Downloaded From:www.kpscvaani.com



### ಟ್ವೀಟ್ ಮಾಡಿ ಪ್ರಧಾನಿ ಮೋದಿ

ಪ್ರಧಾನಿ ನರೇಂದ್ರ ಮೋದಿಯವರು ಈ ಬಗ್ಗೆ ಹರ್ಷ ವ್ಯಕ್ತಪಡಿಸಿ ಕನ್ನಡದಲ್ಲೇ ಪ್ರತಿಕ್ರಿಯೆ ನೀಡಿದರು. "ಶ್ಲಾಘನೀಯವಾದ ಪ್ರಯತ್ನ. ಇದು ಲಂಬಾಣಿ ಕಲೆ ಮತ್ತು ಕರಕುಶಲತೆಯನ್ನು ಜನಪ್ರಿಯಗೊಳಿಸುತ್ತದೆ ಮತ್ತು ಸಾಂಸ್ಕೃತಿಕ ಉಪಕ್ರಮಗಳಲ್ಲಿ ನಾರಿ ಶಕ್ತಿಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತದೆ. ಲಂಬಾಣಿ ಕುಶಲಕರ್ಮಿಗಳ ಕಸೂತಿಯು ಗಿನ್ನೆಸ್ ವಿಶ್ವ ದಾಖಲೆಯನ್ನು ಸ್ಥಾಪಿಸಿರುವ ವಿಜಯವು ಅವರ ಸಬಲೀಕರಣದ ಪ್ರಯಾಣದಲ್ಲಿ ಮಹತ್ವದ ಮೈಲಿಗಲ್ಲನ್ನು ಸೂಚಿಸುತ್ತದೆ. ಈ–20 ಪ್ರತಿನಿಧಿಗಳ ನಡುವೆ ಪ್ರದರ್ಶಿಸಲಾದ ಅವರ ಕೌಶಲ್ಯಗಳು ಇತಿಹಾಸದಲ್ಲಿ ಅವರ ಸ್ಥಾನವನ್ನು ಭದ್ರಪಡಿಸಿದೆ. ಅಲ್ಲದೆ ಆರ್ಥಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ಬಾಗಿಲನ್ನು ತೆರೆದಿವೆ" ಎಂದು ಪ್ರಧಾನಿ ಮೋದಿ ಅವರು ಬಣ್ಣಿಸಿದ್ದಾರೆ.



ಬಂಜಾರ ಸಮುದಾಯವು ತನ್ನದೇ ಆದಾ ವೇಷ ಭೂಷಣದಿಂದ ಭಾರತೀಯ ಶ್ರೀಮಂತ ಕಲಾ ಸಂಸ್ಕೃತಿಗೆ ಅಪಾರವಾದ ಕೊಡುಗೆ ನೀಡಿದೆ. ಬಂಜಾರ ಸಮುದಾಯ ಕೂಡ ತಮ್ಮದೇ ಆದ ಭಾಷೆ, ಸಂಸ್ಕೃತಿ ಮತ್ತು ರಂಗು ರಂಗಿನ ವೇಷಭೂಷಣಗಳಿಂದ ರಾಷ್ಟ್ರಾದ್ಯಂತ ಗುರುತಿಸಲ್ಪಡುತ್ತಿರುವ ಬಹುದೊಡ್ಡ ಬುಡಕಟ್ಟು ಸಮುದಾಯವಾಗಿದೆ. ರಾಜ್ಯದ ಹಲವು ಜಿಲ್ಲೆಗಳ ತಾಂಡಗಳಲ್ಲಿ ಇವರು ವಾಸವಾಗಿದ್ದಾರೆ.

ನೂರಾರು ತಾಂಡಾಗಳಲ್ಲಿ ದಿನ ಬೆಳಗಾದರೆ ಕೆಲ ವಯೋವೃದ್ಧ ಮಹಿಳೆಯರು ಕಸೂತಿ ಕಾಯಕದಲ್ಲಿ ತೊಡಗಿರುವ ದೃಶ್ಯ ಸಾಮಾನ್ಯವಾಗಿರುತ್ತವೆ. ಕೆಲ ಮಹಿಳೆಯರು ಹೊಲ, ಮನೆ ಕೆಲಸದ ಬಿಡುವಿನ ವೇಳೆ ಮೇಕೆ ಮೇಯಿಸಲು ಹೋಗುವ ಕಾಡು–ಮೇಡುಗಳಲ್ಲಿ ತಮ್ಮ ಬೇಸರ ಮರೆಯಲು ಹೆಣಿಗೆ ಕಾಯಕದಲ್ಲಿ ನಿರತರಾಗುವುದನ್ನು ಕಾಣಬಹುದು. ಬಳ್ಳಾರಿಯ ಸಂಡೂರಿನಲ್ಲಿ ವಾಸಿಸುವ ಲಂಬಾಣಿ ಮಹಿಳೆಯರು ವಿವಿಧ ಬಣ್ಣದ ಹಲವು ಸಣ್ಣ ತುಣುಕುಗಳನ್ನು ದಾರದಿಂದ ಹೊಲಿದು ಜೋಡಿಸಿ, ಅದರ ಮೇಲೆ ಕಸೂತಿ ಮಾಡಿ ತಯಾರಿಸುವುದಕ್ಕೆ "ಸಂಡೂರು' ಕಸೂತಿ ಎಂದೇ ಹೆಸರು. ಅಲ್ಲಿ ಹಲವು ವರ್ಷಗಳವರೆಗೆ ಅಲ್ಲಲ್ಲಿ ಹಂಚಿಹೋಗಿದ್ದ ಈ ಕಲೆ, ಇಂದು ಸಂಡೂರು ಕಸೂತಿ ಕೇಂದ್ರದ ಹೆಸರಿನಲ್ಲಿ 400 ಲಂಬಾಣಿ ಮಹಿಳೆಯರ ಸಾಂಪ್ರದಾಯಿಕ ಉಡುಗೆ ಹಾಗೂ ಕಸೂತಿಗೆ ಪ್ರೋತ್ಸಾಹ ನೀಡುತ್ತಿದೆ. ಬಳ್ಳಾರಿಯ 15 ಹಳ್ಳಿಗಳಲ್ಲಿ ಸಂಡೂರು ಕಸೂತಿ ತಯಾರಿಸುವ ಜನರಿದ್ದಾರೆ.

**ಲಂಬಾಣಿ ಕಸೂತಿಗೆ ಜಿ.ಐ. ಟ್ಯಾಗ್**

ಈ ಭಾಗದ ಮಹಿಳೆಯರಿಗೆ ದುಡಿಮೆಯನ್ನು ಒದಗಿಸುವ ಉದ್ದೇಶದಿಂದ 1988 ರಲ್ಲಿ ಎಂ.ವೈ.

ದಿರಿಸಿನೊಂದಿಗೆ ವಿಶಿಷ್ಟ ರೀತಿಯ ನತ್ತು, ಕಿವಿಯ ಓಲೆ, ತಲೆಯ ಮೇಲೆ ಧರಿಸುವ ವಸ್ತ್ರವನ್ನು ಧರಿಸುತ್ತಾರೆ. ಕೈತುಂಬ ಬಿಳಿ ಬಣ್ಣದ ಬಳೆಗಳನ್ನು ಧಾರಣೆ ಮಾಡುತ್ತಾರೆ. ಇವರು ಕಸೂತಿ ಮಾಡುವ ಜೊತೆಗೆ ಬಣ್ಣ ಹಾಕುವುದು (ಪೇಂಟಿಂಗ್), ಹಚ್ಚೆ ಹಾಕುವುದು (ಟ್ಯಾಟೂ) ಹಾಗೂ ವಿಶೇಷ ರಂಗೋಲಿಗಳನ್ನು ರಚಿಸುವಲ್ಲಿಯೂ ಬಹಳ ಪ್ರವೀಣರು.

ಮಹಿಳೆಯರಿಗೆ ಉದ್ಯೋಗ ಸೃಷ್ಟಿಸಿರುವ ಸಂಡೂರಿನ ಲಂಬಾಣಿ ಕುಶಲಕಲಾ ಕೇಂದ್ರ ಕೇವಲ 5 ಲಂಬಾಣಿ ಮಹಿಳೆಯರಿಂದ 1988 ರಲ್ಲಿ ಆರಂಭವಾಯಿತು. ಆದರೆ ಸದ್ಯ ಈಗ 600 ಕುಶಲ ಕಸೂತಿ ಕಲೆ ಕಲಿತ ಮಹಿಳೆಯರಿಂದ ಈ ಕೇಂದ್ರವು ಮುನ್ನಡೆಯುತ್ತಿದೆ.

**ಸರ್ಕಾರದಿಂದ ಎಲ್ಲಾ ರೀತಿಯ ಸಹಾಯ**

ಲಂಬಾಣಿ ಕಸೂತಿ ಗಿನ್ನಿಸ್ ದಾಖಲೆ ಸೇರಿದ್ದಕ್ಕೆ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕದ ಲಂಬಾಣಿ ಜನಾಂಗದ ಶ್ಲಾಘನೀಯ ಪ್ರಯತ್ನವು ದೇಶಕ್ಕೆ ಹೆಮ್ಮೆ ತರಿಸುವ ವಿಚಾರವಾಗಿದೆ. ಇದು ಕರ್ನಾಟಕದ ಲಂಬಾಣಿ ಜನರ ಕಲೆ ಮತ್ತು ಕರಕುಶಲತೆಯನ್ನು ಜನಪ್ರಿಯಗೊಳಿಸುತ್ತದೆ. ನಮ್ಮ ಕರ್ನಾಟಕದ ಹೆಮ್ಮೆಯ ಸಾಂಸ್ಕೃತಿಕ ಕಲೆ ನಾರಿ ಶಕ್ತಿಯ ಉದ್ಯಮವಾಗಲಿದೆ. ಇದಕ್ಕೆ ಸರಕಾರದಿಂದ ಎಲ್ಲಾ ರೀತಿಯ ಸಹಾಯ ನೀಡಲಾಗುವುದು.

– ಸಿದ್ದರಾಮಯ್ಯ, ಮುಖ್ಯಮಂತ್ರಿಗಳು



Downloaded From:www.kpscvaani.com

ಘೋರ್ಪಡೆಯವರಿಂದ ಸಂಡೂರಿನಲ್ಲಿ 'ಸಂಡೂರು ಕುಶಲಕಲಾ ಕೇಂದ್ರ' ಆರಂಭಗೊಂಡಿತು. ಈ ಭಾಗದಲ್ಲಿರುವ ಬಹುಸಂಖ್ಯಾತ ಲಂಬಾಣಿಗರ ಬೇಡಿಕೆಯನ್ನು ಪೂರೈಸುವ ಜತೆಗೆ ನಶಿಸುತ್ತಿರುವ ಲಂಬಾಣಿ ಕಸೂತಿ ಕಲೆಗೆ ಜೀವ ತುಂಬುವ ಕೆಲಸದಲ್ಲಿ ತೊಡಗಿಸಿಕೊಂಡಿದೆ.

ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ 450ಕ್ಕೂ ಹೆಚ್ಚು ಮಹಿಳೆಯರು ಈ ಸಂಸ್ಥೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಸಂಸ್ಥೆಯ ಬೇಡಿಕೆ ಮತ್ತು ಮಾರ್ಗದರ್ಶನದಲ್ಲಿ ವಿಶೇಷ ವಿನ್ಯಾಸದಲ್ಲಿ ಲಂಬಾಣಿಗಳು ವಸ್ತ್ರ ತಯಾರಿಕೆ ಮಾಡುತ್ತಾರೆ.

ಇಂದಿನ ಆಧುನಿಕ ಮಹಿಳೆಯರ ಆಯ್ಕೆಗೆ ತಕ್ಕಂತೆ ಸಂಡೂರು ಕಸೂತಿಯನ್ನು ಸಲ್ವಾರ್ ಹಾಗೂ ಬಗೆ ಬಗೆಯ ಕುಪ್ಪಸಗಳ ವಿನ್ಯಾಸಕ್ಕೂ ಬಳಸುತ್ತಾರೆ. ಸಂಡೂರಿನಲ್ಲಿ ತಯಾರಾಗುವ ವಿವಿಧ ಸಂಡೂರು ಕಸೂತಿಯ ಲಂಬಾಣಿ ಸಾಂಪ್ರದಾಯಿಕ ಹಾಗೂ ಆಧುನಿಕ ಉಡುಗೆಗಳು ಅಮೆರಿಕ, ಲಂಡನ್ ಹಾಗೂ ಜಪಾನ್‌ಗಳಿಗೆ ರಫ್ತಾಗುತ್ತಿದೆ.

ಪಾರಂಪರಿಕವಾಗಿ ಮನೆಗಳು ಹಾಗೂ ತಾಂಡಗಳಿಗೆ ಸೀಮಿತವಾಗಿದ್ದ ಲಂಬಾಣಿ ಕಸೂತಿ ಕಲೆಗೆ ಸಾಂಸ್ಥಿಕ ರೂಪ ನೀಡಿ ಜಿ.ಐ. (ಗ್ಲೋಬಲ್ ಇಂಡಿಕೇಷನ್) ಟ್ಯಾಗ್ ಪಡೆಯುವಲ್ಲಿ ಸಂಡೂರಿನ ಕಲಾ ಕೇಂದ್ರ ಯಶಸ್ವಿಯಾಗಿದೆ. ವಿವಿಧ ರೀತಿಯ 29 ಕಲಾತ್ಮಕ ಕಸೂತಿಗಳನ್ನು ಇಲ್ಲಿ ಮಾಡಲಾಗುತ್ತಿದೆ. ಈ ಕೇಂದ್ರಕ್ಕೆ ರಾಷ್ಟ್ರಮಟ್ಟದ ಪ್ರಶಸ್ತಿ, ಯುನೆಸ್ಕೋ ಮನ್ನಣೆ ಹಾಗೂ ಕಮಲಾದೇವಿ ಛಟ್ಟೋಪಾಧ್ಯಾಯ ಪ್ರಶಸ್ತಿ ಲಭಿಸಿದೆ. ಇದೀಗ ಹಂಪಿಯಲ್ಲಿ ಜರುಗಿದ ಜಿ–20 ಶೃಂಗ ಸಭೆಯಲ್ಲಿ ಗಿನ್ನಿಸ್ ದಾಖಲೆಯು ಮುಡಿಗೇರಿದೆ.

**ಗಿನ್ನಿಸ್ ಬುಕ್ ದಾಖಲೆಗೆ ಸೇರಿದ ಲಂಬಾಣಿ ಕಸೂತಿ ಕಲೆ**

ಹಂಪಿ ವಿಜಯನಗರ ಸುವರ್ಣಯುಗ ಕಂಡ ಸಾಮ್ರಾಜ್ಯವಾಗಿ ಇತಿಹಾಸದಲ್ಲಿ ದಾಖಲಾಗಿದೆ. 15–16ನೇ ಶತಮಾನದ ಬಹುದೊಡ್ಡ ಪುರಾತನ ಶಿಲ್ಪಕಲೆ, ವಾಸ್ತುಶಿಲ್ಪದಲ್ಲಿ ಜ್ಞಾನ ತಂತ್ರಜ್ಞಾನ ಇತ್ತು. ಸಾಮ್ರಾಜ್ಯ ಶ್ರೀಮಂತವಾಗಿರಲು ಆಳುವವರಲ್ಲಿ ಮತ್ತು ಪ್ರಜೆಗಳಲ್ಲಿ ಅಷ್ಟೇ ಪ್ರಾಮಾಣಿಕತೆ ಇತ್ತು. ದೇಶ–ವಿದೇಶಗಳ ಇತಿಹಾಸಕಾರರು ಸಹ ಇದರ ಕುರಿತು ಉಲ್ಲೇಖಿಸಿದ್ದಾರೆ. ಹಂಪಿಯ ಸ್ಮಾರಕಗಳು ಇಂದಿಗೂ ಆ ವೈಭವನ್ನು ಸಾರುತ್ತಿವೆ. ಇಂತಹ ಸ್ಮಾರಕ ಕೇಂದ್ರದಲ್ಲಿ ಮತ್ತೊಂದು ಸಾಕ್ಷಿ ಎನ್ನುವಂತೆ ಇಲ್ಲಿಯ ಲಂಬಾಣಿ ಕಸೂತಿ ಸಾಕ್ಷಿಯಾಗಿದೆ.

ಜಿ–20 ಸಾಂಸ್ಕೃತಿಕ ಕಾರ್ಯಕಾರಿ ಗುಂಪಿನ ಉದ್ದೇಶದಂತೆ ಸಾಂಸ್ಕೃತಿಕ ಮತ್ತು ಸೃಜನಾತ್ಮಕ ಕೈಗಾರಿಕೆಗಳ ಆರ್ಥಿಕತೆಯ ಪ್ರಚಾರ ಮಾಡುವ ನಿಟ್ಟಿನಲ್ಲಿ ಲಂಬಾಣಿ ಕಸೂತಿ ವಸ್ತುಪ್ರದರ್ಶನವನ್ನು ಜುಲೈ 10 ರಂದು ವಿಶ್ವವಿಖ್ಯಾತ ಹಂಪಿಯ ಎದುರು ಬಸವಣ್ಣ ಮಂಟಪದ ಬಳಿ ಏರ್ಪಡಿಸಲಾಗಿತ್ತು.

ಮಳಿಗೆಗೆ ಆಗಮಿಸಿದ ಸದಸ್ಯ ಹಾಗೂ ಅತಿಥಿ ರಾಷ್ಟ್ರಗಳ ಅತ್ಯುನ್ನತ ಪ್ರತಿನಿಧಿಗಳಿಗೆ ಲಂಬಾಣಿ ನೃತ್ಯದ ಮೂಲಕ ಅದ್ದೂರಿ ಸ್ವಾಗತ ಕೋರಲಾಯಿತು. ವಸ್ತು ಪ್ರದರ್ಶನ ಸ್ಥಳಕ್ಕೆ ಪ್ರತಿನಿಧಿಗಳು ಆಗಮಿಸುತ್ತಿದ್ದಂತೆ ಸಾಂಪ್ರದಾಯಿಕ ಉಡುಗೆ ತೊಟ್ಟಿದ್ದ ಲಂಬಾಣಿ ಮಹಿಳೆಯರು ತಲೆ ಮೇಲೆ ಮಣ್ಣಿನ ಹೂಕುಂಡ ಹೊತ್ತು ತಮಟೆ ಸದ್ದಿಗೆ ಹೆಜ್ಜೆ ಹಾಕುತ್ತಾ ಸ್ವಾಗತ ಕೋರಿದರು. ಗಣ್ಯ ಅತಿಥಿಗಳಿಗೆ ಲಂಬಾಣಿ ಮಹಿಳೆಯರ ಸಾಂಪದ್ರಾಯಿಕ ಉಡುಗೆ–ತೊಡುಗೆ, ನೃತ್ಯ ಗಮನ ಸೆಳೆದವು.

ಈ ಹಿಂದೆ 1000 ಕಸೂತಿ ಕಲೆಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದು ಗಿನ್ನಿಸ್ ದಾಖಲೆಗೆ ಪಾತ್ರವಾಗಿತ್ತು. ಆದರೆ ಇದೀಗ ಹಳೆಯ ದಾಖಲೆಯನ್ನು ಮೀರಿಸಿ ಸಂಡೂರಿನ ಲಂಬಾಣಿ ಕಲಾ ಕೇಂದ್ರದ 450ಕ್ಕೂ ಹೆಚ್ಚು ಮಹಿಳೆಯರು ತಯಾರಿಸಿದ 1755 ವಿವಿಧ ಕಸೂತಿಗಳ ಪ್ರದರ್ಶನವು ಹೊಸ ದಾಖಲೆಯನ್ನು ಮಾಡಿತು.

ಅಂದು ವಿಶ್ವವಿಖ್ಯಾತ ಹಂಪಿಯ ಎದುರು ಬಸವಣ್ಣ ಮಂಟಪದ ಬಳಿ ಲಂಡನ್ ಗಿನ್ನಿಸ್ ಬುಕ್ ಆಫ್ ರೆಕಾರ್ಡ್ಸ್‌ನ ಅಧಿಕೃತ ತೀರ್ಪುಗಾರರಾದ ರಿಷಿನಾಥ್ ಲಂಬಾಣಿ ಕಸೂತಿ ಕಲೆಗೆ ಸಂದ ಗಿನ್ನಿಸ್ ರೆಕಾರ್ಡ್ ಪ್ರಮಾಣ ಪತ್ರವನ್ನು ಕೇಂದ್ರ ಸಂಸದೀಯ ವ್ಯವಹಾರ, ಗಣಿ ಮತ್ತು ಕಲ್ಲಿದ್ದಲು ಸಚಿವರಾದ ಪ್ರಲ್ಹಾದ್ ಜೋಶಿ ಹಾಗೂ ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯದ ಕಾರ್ಯದರ್ಶಿಗಳಾದ ಗೋವಿಂದ ಮೋಹನ್ ಅವರಿಗೆ ಹಸ್ತಾಂತರಿಸಿದರು.


ಈ ಸಂದರ್ಭದಲ್ಲಿ ಹಂಪಿಯಲ್ಲಿ ನಡೆದ –20 ಸಾಂಸ್ಕೃತಿಕ ಕಾರ್ಯಕಾರಿ ಗುಂಪಿನ ಸಭೆಯಲ್ಲಿ ಭಾಗವಹಿಸಲು ಆಗಮಿಸಿದ ವಿವಿಧ ದೇಶಗಳ ಪ್ರತಿನಿಧಿಗಳು ಲಂಬಾಣಿ ಕಸೂತಿ ಬಟ್ಟೆಗಳನ್ನು ಹಿಡಿದು ಲಂಬಾಣಿ ಮಹಿಳೆಯರ ಜೊತೆ ಫೋಟೋ ಕ್ಲಿಕ್ಕಿಸಿಕೊಂಡರು. ಲಂಬಾಣಿ ನೃತ್ಯದ ಮೂಲಕ ಜಿ–20 ಪ್ರತಿನಿಧಿಗಳಿಗೆ ಸಾಂಪ್ರದಾಯಿಕ ಸ್ವಾಗತ ಕೋರಲಾಯಿತು.

ಈ ಸಂದರ್ಭದಲ್ಲಿ ಕೇಂದ್ರ ಸಂಸದೀಯ ವ್ಯವಹಾರ, ಗಣಿ ಮತ್ತು ಕಲ್ಲಿದ್ದಲು ಸಚಿವರಾದ ಪ್ರಲ್ಹಾದ್ ಜೋಶಿ ಮಾತನಾಡಿ ಈ ಸಮಾಜದ ಕಸೂತಿ ಕಲೆಯನ್ನು ಪ್ರಧಾನಿಗಳು ಗುರುತಿಸಿ, ಜಿ–20 ಶೃಂಗಸಭೆಯಲ್ಲಿ ಕಸೂತಿ ಕಲೆ ಪ್ರದರ್ಶಿಸಲು ದೊಡ್ಡ ಅವಕಾಶ ಮಾಡಿಕೊಟ್ಟಿದ್ದಾರೆ. ಭಾರತದ ಪ್ರತಿ ಸಮುದಾಯ ಹಾಗೂ ಸಂಸ್ಕೃತಿಯ ರಕ್ಷಣೆ ಹಾಗೂ ಪೋಷಣೆಗೆ ಕೇಂದ್ರ ಸರ್ಕಾರ ಬದ್ಧವಾಗಿದೆ. ಲಂಬಾಣಿ ಕಸೂತಿ ಕಲೆಗೆ ಉದ್ದಿಮೆ ರೂಪ ನೀಡಿ ಅಂತಾರಾಷ್ಟ್ರೀಯ ಮಾರುಕಟ್ಟೆ ಒದಗಿಸಲು ಪ್ರಯತ್ನಿಸಲಾಗುವುದು ಎಂದರು.

ರಾಜ್ಯದ ಅಲೆಮಾರಿ ಲಂಬಾಣಿ ಸಮುದಾಯದ ಸುಮಾರು 450 ಮಹಿಳಾ ಲಂಬಾಣಿ ಕುಶಲಕರ್ಮಿಗಳು 1,755 ಕ್ಕೂ ಹೆಚ್ಚು ವಿಸ್ಮಯಕಾರಿ ಕಸೂತಿಗಳನ್ನು ರಚಿಸುವ ಮೂಲಕ ಹೊಸ ಗಿನ್ನಿಸ್ ದಾಖಲೆ ಮಾಡಿರುವುದು ನಮಗೆ ಅತ್ಯಂತ ಹೆಮ್ಮೆಯ ವಿಷಯ. ಈ ಸಾಧನೆಗೆ ಭಾಗಿಯಾದ ಕರ್ನಾಟಕದ ಎಲ್ಲಾ ಲಂಬಾಣಿ ಕುಶಲಕರ್ಮಿಗಳಿಗೆ ಹೃತ್ಪೂರ್ವಕ ಅಭಿನಂದನೆಗಳು ಎಂದು ಶ್ಲಾಘಿಸಿ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ್ ಖರ್ಗೆ ಅವರು ಕೂಡ ಟ್ವೀಟ್ ಮಾಡಿದ್ದಾರೆ.

ವಿವಿಧ ಸಮುದಾಯ ಹಾಗೂ ಸಂಸ್ಕೃತಿಗಳ ತವರಾಗಿರುವ ಕರ್ನಾಟಕ ಈ ಮೂಲಕ ಒಂದು ವಿಶಿಷ್ಟ ಗಿನ್ನಿಸ್ ದಾಖಲೆಯನ್ನು ನಿರ್ಮಿಸಿದಂತಾಗಿದೆ. ಲಂಬಾಣಿ ಸಮುದಾಯದ ಶ್ರೀಮಂತ ಸಂಸ್ಕೃತಿಯನ್ನು ಉಳಿಸಿ–ಬೆಳೆಸಲು ಕಳೆದ ಹಲವು ವರ್ಷಗಳಿಂದ ಶ್ರಮಿಸುತ್ತಿರುವ ಸಂಡೂರು ಕುಶಲಕಲಾ ಕೇಂದ್ರದ ಮಹಿಳೆಯರೇ ಈ ವಿಶಿಷ್ಟ ದಾಖಲೆಯನ್ನು ನಿರ್ಮಿಸಿರುವುದು ಗಮನಾರ್ಹ.


Downloaded From:www.kpscvaani.com



# ಡೆಂಗ್ಯೂ ಹತೋಟಿಗೆ ಇದು ಸಕಾಲ

ಶೇಷಾದ್ರಿ ಡಿ.ಎನ್

ವಿಶ್ವದಲ್ಲಿ ಸಾರ್ವಜನಿಕರಿಗೆ ಅತ್ಯಂತ ಸವಾಲು ಮತ್ತು ಸಮಸ್ಯಾತ್ಮಕವಾದ ಖಾಯಿಲೆಗಳಲ್ಲಿ ಡೆಂಗ್ಯೂ ಜ್ವರವು ಮೂಂಚೂಣಿಯಲ್ಲಿದೆ. ಇತ್ತೀಚೀನ ದಶಕಗಳಲ್ಲಿ ಡೆಂಗ್ಯೂ ಜ್ವರ ಸೋಂಕಿತ ಪ್ರಕರಣಗಳು ಜಾಗತಿಕ ಮಟ್ಟದಲ್ಲಿ ನಾಟಕೀಯವಾಗಿ ಬೆಳವಣಿಗೆಯಾಗುತ್ತಿವೆ. ಅಂದರೇ ಪ್ರಪಂಚದ ಅರ್ಧದಷ್ಟು ಜನರು ಪ್ರತಿ ವರ್ಷ ಸೋಂಕಿತರಾಗುತ್ತಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ವರದಿಗಳು ತಿಳಿಸುತ್ತಿವೆ. ಅದ್ದರಿಂದ ಈ ಖಾಯಿಲೆಯನ್ನು ಭಾರತ ದೇಶದಲ್ಲಿ ಎಫೀಡಮೀಕ್ ಡಿಸೀಜ್ ಆಕ್ಟ್ ಅಡಿಯ ನೋಟಿಫೀಯಬಲ್ ಡಿಸೀಜ್‌ಗಳಲ್ಲಿ ಸೇರಿಸಲಾಗಿದೆ. ಡೆಂಗ್ಯೂ ಜ್ವರ ಪ್ರಕರಣಗಳು ಕಂಡು ಬಂದಾಗ ತಪ್ಪದೇ ಕಾನೂನಾತ್ಮಕವಾಗಿ ಅಯಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಮುಖೇನ ರಾಜ್ಯ ಮಟ್ಟಕ್ಕೆ ನಂತರ ರಾಷ್ಟ್ರಮಟ್ಟಕ್ಕೆ ವರದಿಯಾಗುತ್ತದೆ. ಡೆಂಗ್ಯೂ ಜ್ವರಕ್ಕೆ ಕಾರಣವಾಗಿರುವುದು ರೋಗಕಾರಕ ಫ್ಲೇವಿ ವೈರಸ್. ಒಂದು ವೇಳೆ ಡೆಂಗ್ಯೂ ಜ್ವರವನ್ನು ನಿರ್ಲಕ್ಷಿಸಿದರೆ ಮಾರಣಾಂತಿಕವಾಗಬಹುದು.

**ಡೆಂಗ್ಯೂ ಜ್ವರದ ಪರಿಚಯ:**

ಡೆಂಗ್ಯೂ ಜ್ವರವು ಹೆಣ್ಣು ಜಾತಿಯ ಸೊಳ್ಳೆಗಳಾದ ಈಡೀಸ್ ಈಜಿಪ್ಟೈ ಮತ್ತು ಈಡೀಸ್ ಆಲ್ಬಾಪೀಕ್ಟಸ್ ಗಳಿಂದ ಒಬ್ಬರಿಂದ ಇನ್ನೊಬ್ಬರಿಗೆ ಹರಡುವ ಸಾಂಕ್ರಾಮಿಕ ಖಾಯಿಲೆಯಾಗಿದೆ. ಡೆಂಗ್ಯೂ ಜ್ವರವನ್ನು ನಿಯಂತ್ರಣ ಮಾಡಬಹುದಾದ ಸಾಂಕ್ರಾಮಿಕ ಖಾಯಿಲೆಗಳಲ್ಲಿ ಪ್ರಮುಖವಾದದ್ದು. ಮನುಷ್ಯನಿಗೆ ಡೆಂಗ್ಯೂ ಜ್ವರವು ಮೊದಲನೇ ಬಾರಿ ಕಾಣಿಸಿಕೊಂಡಾಗ ಪ್ರಥಮ ಡೆಂಗ್ಯೂ ಜ್ವರ ಸೋಂಕಿತ ವ್ಯಕ್ತಿ ಎಂದು ಕರೆಯುತ್ತೇವೆ. ಹಾಗೂ ಮೊದಲನೇ ಸೊಂಕು ಉಂಟುಮಾಡಿದ ಡೆಂಗ್ಯೂ ವೈರಸ್ ತಳಿಯು ಹೊರತುಪಡಿಸಿ ಉಳಿಕೆಯ ಮೂರು ತಳಿಗಳಲ್ಲಿ ಯಾವುದಾದರೂ ತಳಿಯಿಂದ ಅಥವಾ ಮೊದಲನೇ ಸಾರಿ ಸೋಂಕು ಉಂಟು ಮಾಡಿದ್ದ ತಳಿಯಿಂದ ಅದೇ ವ್ಯಕ್ತಿಗೆ ಪುನಃ ಡೆಂಗ್ಯೂ ಜ್ವರ ಬಂದರೆ ದ್ವಿತೀಯ ಡೆಂಗ್ಯೂ ಜ್ವರ ಸೋಂಕಿತ ವ್ಯಕ್ತಿ ಎಂದು ಕರೆಯುತ್ತೇವೆ. ದ್ವಿತೀಯ ಡೆಂಗ್ಯೂ ಜ್ವರ ಸೋಂಕಿತ ವ್ಯಕ್ತಿ ಹೆಚ್ಚು ಅಪಾಯದಲ್ಲಿ ಇರುತ್ತಾನೆ.

**ಮಳೆಗಾಲದಲ್ಲಿ ಸೊಳ್ಳೆಗಳ ಸಂತತಿಯನ್ನು ನಿರ್ಮೂಲನೆ ಮಾಡುವ ಮೂಲಕ ಡೆಂಗ್ಯೂವನ್ನು ಹತೋಟಿಯಲ್ಲಿಡಬಹುದು.**

ಕಿರುಬಿಲ್ಲೆಗಳ (ಪ್ಲೇಟ್ಲೆಟ್) ಸಂಖ್ಯೆ ಕಡಿಮೆಯಾಗಿ ಮನುಷ್ಯನಲ್ಲಿ ರಕ್ತಸ್ರಾವ ಉಂಟಾಗಿ ಸಾವು ಸಂಭವಿಸಬಹುದು. ಮೂರು ಹಂತಗಳಲ್ಲಿ ಡೆಂಗ್ಯೂ ಜ್ವರವನ್ನು ಗುರುತಿಸಬಹುದು. ಡೆಂಗ್ಯೂ ಜ್ವರ ಹಂತ, ಡೆಂಗ್ಯೂ ಜ್ವರ ರಕ್ತಸ್ರಾವ ಹಂತ, ಡೆಂಗ್ಯೂ ಜ್ವರ ಪ್ರಜ್ಞಾಹೀನ ಹಂತ, ಆಂಗ್ಲ ಬಾಷೆಯಲ್ಲಿ ಹೇಳುವುದಾದರೇ Dengue Fever (DF), Dengue Hemorrhagic Fever (DHF), Dengue Shock Suydrome (DSS).

**ಡೆಂಗ್ಯೂ ಜ್ವರದ ರೋಗ ಲಕ್ಷಣಗಳು:**

ಡೆಂಗ್ಯೂ ಜ್ವರದ ಹಂತ : ತೀವ್ರವಾದ ಜ್ವರ, ತಲೆಯ ಹಣೆ ಭಾಗವು ವಿಪರೀತ ನೋವು, ಮೂಳೆ ಮುರಿತ ನೋವು,



Downloaded From:www.kpscvaani.com

ಕೀಲು ನೋವು, ಕಣ್ಣಿನ ಗುಡ್ಡೆ (ಅಕ್ಷೀಪಟಲ) ವಿಪರೀತ ನೋವು, ಹಾಗೆಯೇ ಕೆಲವರಲ್ಲಿ ಅಮ್ಲವ್ಯಾಧಿ ಉಂಟಾಗುತ್ತದೆ.

**ಡೆಂಗ್ಯೂ ಜ್ವರದ ರಕ್ತ ಸ್ರಾವ ಹಂತ:** ರಕ್ತದಲ್ಲಿನ ಕಿರುಬಿಲ್ಲೆಗಳು (ಪ್ಲೇಟ್ಲೆಟ್ ಡಿಸ್ಟ್ರಕ್ಷನ್) ನಾಶವಾಗುತ್ತವೆ. ರಕ್ತದ ಕಿರುಬಿಲ್ಲೆಗಳು ಉತ್ಪತ್ತಿ (ಪ್ಲೇಟ್ಲಟ್ ಪ್ರೊಡಕ್ಷನ್) ಕಡಿಮೆಯಾಗುತ್ತವೆ. ರಕ್ತ ಕಣಗಳ ಸ್ರಾವವು ಚರ್ಮದಲ್ಲಿ ಕಾಣಿಸಿಕೊಳ್ಳುತ್ತದೆ. ಕ್ರಮೇಣ ರೋಗಿಯಲ್ಲಿ ರಕ್ತದ ಒತ್ತಡ ಕಡಿಮೆಯಾಗುತ್ತದೆ. ಪ್ರಥಮವಾಗಿ ಸೋಂಕಿತ ಡೆಂಗ್ಯೂ ಜ್ವರ ವ್ಯಕ್ತಿಗಿಂತ ಎರಡನೇ ಸಾರಿ ಸೋಂಕಿತ ಡೆಂಗ್ಯೂ ಜ್ವರದ ವ್ಯಕ್ತಿಯಲ್ಲಿ ರೋಗ ಲಕ್ಷಣಗಳು ತೀವ್ರವಾಗಿರುತ್ತವೆ.

ಡೆಂಗ್ಯೂ ಜ್ವರದ ಪ್ರಜ್ಞಾಹೀನ ಹಂತ: ಈ ಹಂತದಲ್ಲಿ ರಕ್ತಸ್ಥಂಭನ ಮತ್ತು ರಕ್ತನಾಳದಲ್ಲಿ ಸೋರಿಕೆ ಉಂಟಾಗಿ ರಕ್ತ ಪರಿಚಲನೆಗೆ ಅಡಚಣೆ ಉಂಟಾಗುತ್ತದೆ. ಇದರಿಂದ ರೋಗಿಯು ಪ್ರಜ್ಞಾಹೀನಾ ಸ್ಥಿತಿಗೆ ತಲುಪಿ ಸಾವು ಸಂಭವಿಸಬಹುದು.

ಕರ್ನಾಟಕ ರಾಜ್ಯದಲ್ಲಿ ಜನವರಿ 2023 ರಿಂದ ಜೂನ್ ಅಂತ್ಯದವರೆಗೆ 2300 ಡೆಂಗ್ಯೂ ವೈರಸ್ ಜ್ವರ ಪ್ರಕರಣಗಳು ದೃಢಪಟ್ಟ ವರದಿಯಾಗಿರುತ್ತವೆ. (ಕರ್ನಾಟಕ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾ ಇಲಾಖೆಯ ವರದಿಯಂತೆ). ಸೋಂಕಿತ ಡೆಂಗ್ಯೂ ಜ್ವರ ಪ್ರಕರಣಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ನಗರ ಪ್ರದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಪ್ರಕರಣಗಳು 732 ವರದಿಯಾಗಿವೆ. ಆದರೆ ಕರ್ನಾಟಕ ರಾಜ್ಯದಲ್ಲಿ ಈ ವರ್ಷ ಡೆಂಗ್ಯೂ ಜ್ವರದಿಂದ ಇಲ್ಲಿಯ ತನಕ ಯಾವುದೇ ಸಾವು ಸಂಭವಿಸಿರುವ ಕುರಿತು ವರದಿಯಾಗಿಲ್ಲ. ಇತ್ತೀಚಿನ ದಿನಗಳಲ್ಲಿ ಡೆಂಗ್ಯೂ ಜ್ವರ ಪ್ರಕರಣ ನಗರ ಪ್ರದೇಶದಲ್ಲಿ ಹೆಚ್ಚು ಹೆಚ್ಚು ವರದಿಯಾಗುತ್ತಿದ್ದು, ನಗರ ಪ್ರದೇಶದಲ್ಲಿನ ಡೆಂಗ್ಯೂ ಜ್ವರದ ಪ್ರಕರಣಗಳಿಗೆ ಈಡೀಸ್ ಅಲ್ಬಾಫೀಕ್ಟಸ್ ಕಾರಣವಾಗಿವೆ. ಈಡೀಸ್ ಅಲ್ಬಾಫೀಕ್ಟಸ್ ಸೊಳ್ಳೆಯನ್ನು "ಏಶೀಯನ್ ಟೈಗರ್ ಮಸ್ಕಿಟೊ" ಎಂದು ಕರೆಯಲಾಗುತ್ತದೆ. ನಗರ ಪ್ರದೇಶಗಳಲ್ಲಿ ಸ್ವಚ್ಚತೆಯು ಮರೀಚಿಕೆಯಾಗಿದ್ದು, ಸೊಳ್ಳೆಗಳ ಸಂತಾನೋತ್ಪತ್ತಿಗೆ ಪೂರಕವಾದ ವಾತಾವರಣ ನಗರ ಪ್ರದೇಶಗಳಲ್ಲಿ ಬೆಳವಣಿಗೆಯಾಗುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯ ನಿರ್ದೇಶನದಂತೆ ಪೂರ್ವ ಮುಂಗಾರು ಪ್ರತಿ ವರ್ಷ ಜುಲೈ ಮಾಹೆಯನ್ನು ಡೆಂಗ್ಯೂ ಜ್ವರ ವಿರೋಧಿ ಮಾಸಾಚರಣೆಯಾಗಿ ಆರೋಗ್ಯ ಇಲಾಖೆಯ ವತಿಯಿಂದ ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮಗಳನ್ನು ಮತ್ತು ಈಡೀಸ್ ಕುಲದ ಸೊಳ್ಳೆಗಳ ನಿಯಂತ್ರಣ ಕ್ರಮಗಳನ್ನು ವೇಗವಾಗಿ ಇಡೀ ವರ್ಷವೆಲ್ಲಾ ಕೈಗೊಳ್ಳುವ ಸಲುವಾಗಿ ಹಮ್ಮಿಕೊಳ್ಳಲಾಗುತ್ತಿದೆ.

ಪ್ರೌಢಾವಸ್ಥೆಯ ಹೆಣ್ಣು ಸೊಳ್ಳೆಗಳು ಡೆಂಗ್ಯೂ ಜ್ವರ ಸೋಂಕಿತ ಮನುಷ್ಯನನ್ನು ರಕ್ತಕ್ಕಾಗಿ ಕಚ್ಚಿದಾಗ ಸಾಂಕ್ರಾಮಿಕ ಖಾಯಿಲೆ ಸಂಬಂಧಿಸಿದ ರೋಗಕಾರಕಗಳು (ಪ್ಯಾಥೋಜೀನ್/ಪರಾವಲಂಬಿಗಳು) ಸೊಳ್ಳೆಯ ದೇಹವನ್ನು ಪ್ರವೇಶ ಪಡೆದುಕೊಂಡು ಸೊಳ್ಳೆಯ ದೇಹದಲ್ಲಿ ವೃದ್ಧಿಯಾಗಿ ಸೊಳ್ಳೆಯ ಲಾಲಾರಸದಲ್ಲಿ ಬಂದು ಸೇರಿಕೊಳ್ಳುತ್ತವೆ. ಅಂತಹ ಸೊಳ್ಳೆಗಳನ್ನು ಸೋಂಕಿತ ಪ್ರೌಢಾವಸ್ಥೆ ಸೊಳ್ಳೆ ಎಂದು ಕರೆಯಲಾಗುತ್ತದೆ. ಡೆಂಗ್ಯೂ ಜ್ವರದ ಸೋಂಕು ಹರಡಲು ರೋಗಕಾರಕ, ರೋಗವಾಹಕ ಮತ್ತು ರೋಗವಾಹಕ ಉತ್ಪತ್ತಿ ತಾಣಗಳು. ಇವು ತ್ರಿಕೋನವಾಗಿ ಒಂದಕ್ಕೊಂದು ಪೂರಕವಾಗಿ ಕಾರಣವಾಗುತ್ತದೆ. ರೋಗವಾಹಕ ಉತ್ಪತ್ತಿ ತಾಣಗಳನ್ನು ಗುರುತಿಸಿ ನಿರ್ಮೂಲನೆ ಮಾಡಿದರೆ ಮಾತ್ರವೇ ಡೆಂಗ್ಯೂ ಜ್ವರವನ್ನು ಸಂಪೂರ್ಣವಾಗಿ ನಿಯಂತ್ರಣದಲ್ಲಿ ಇಡಬಹುದು. ಗ್ರಾಮೀಣ ಪ್ರದೇಶದ ಡೆಂಗ್ಯೂ ಜ್ವರದ ಪ್ರಕರಣಕ್ಕೆ ಈಡೀಸ್ ಈಜಿಪ್ಟೈ ಸೊಳ್ಳೆಗಳು ಕಾರಣವಾಗಿವೆ. ಈಡೀಸ್ ಅಲ್ಬಾಫೀಕ್ಟಸ್ ಸೊಳ್ಳೆಗಳು ಮೂಲತಃ ಕಾಡು ಪ್ರದೇಶದ ಸೊಳ್ಳೆಗಳು ಆಗಿದ್ದು, ಇತ್ತೀಚೆಗೆ ನಗರ ಪ್ರದೇಶ ವಾಸಕ್ಕೆ ಹೊಂದಿಕೊಂಡಿವೆ, ಹಾಗೂ ನಗರ ಪ್ರದೇಶದಲ್ಲಿನ ಸಾರ್ವಜನಿಕರಿಗೆ ಬರುವ ಡೆಂಗ್ಯೂ ಜ್ವರದ ಪ್ರಕರಣಕ್ಕೆ ಕಾರಣವಾಗಿವೆ.

(ಎ) ಸಾರ್ವಜನಿಕರು ವಾಸಿಸುವ (ಸ್ಥಳಗಳು) ಪ್ರದೇಶದಲ್ಲಿ ಈಡೀಸ್ ಕುಲದ (Genus) ಜಾತಿಯ ಸೊಳ್ಳೆಗಳ ಸಂತಾನೋತ್ಪತ್ತಿಯ ತಾಣಗಳನ್ನು ಗುರುತಿಸಿ ನಿರ್ಮೂಲನೆ ಮಾಡುವುದರಿಂದ ಡೆಂಗ್ಯೂ ಜ್ವರವನ್ನು ನಿಯಂತ್ರಣ ಮಾಡಬಹುದು.

(ಬಿ) ಜ್ವರ ಬಂದಾಗ ತಕ್ಷಣ ರಕ್ತ ಪರೀಕ್ಷೆಯನ್ನು ಮಾಡಿಸಿ ಡೆಂಗ್ಯೂ ಜ್ವರವೆಂದು ದೃಢಪಟ್ಟರೆ ವೈದ್ಯರ ಸಲಹೆ ಸೂಚನೆಯಂತೆ ಆಹಾರಗಳು (ಪ್ರತ್ಯಾಹಾರ) ಔಷಧೋಪಚಾರವನ್ನು ಅನುಸರಿಸುವುದರಿಂದ ಡೆಂಗ್ಯೂ ಜ್ವರವನ್ನು ನಿಯಂತ್ರಣ ಮಾಡಬಹುದು.

**ರೋಗಕಾರಕ ಡೆಂಗ್ಯೂ ವೈರಸ್ ಕುರಿತು ಮಾಹಿತಿ:**

ಆರ್ಬೋವೈರಸ್ (arboviruses) ಗಳಲ್ಲಿ ಫ್ಲೇವಿ ವೈರಸ್ ಮುಖ್ಯವಾಗಿದೆ. ಡೆಂಗ್ಯೂ ಜ್ವರದ ರೋಗಕಾರಕವಾದ ಫ್ಲೇವಿ ವೈರಸ್ ವೈರಾಣು ನಾಲ್ಕು ತಳಿಗಳನ್ನೂ ಹೊಂದಿರುತ್ತವೆ. ಅವುಗಳೆಂದರೆ DENV1, DENV2, DENV3, DENV4. ಭಾರತದಲ್ಲಿ ಫ್ಲೇವಿ ವೈರಸ್‌ನ DENV3, DENV4 ತಳಿಗಳು ಮುಖ್ಯವಾಗಿ ಕಂಡು ಬರುತ್ತವೆ.

**ಡೆಂಗ್ಯೂ ಜ್ವರಕ್ಕೆ ಲಸಿಕೆ:**

ಡೆಂಗ್ಯೂ ಜ್ವರಕ್ಕೆ ಮೊಟ್ಟ ಮೊದಲಿಗೆ 2015 ರಲ್ಲಿ ಮೆಕ್ಸಿಕೊ ದೇಶದ ಸನೊಫಿ ಪಾಶ್ಚರ್ ಎಂಬುವರು CYD-TDV ಎಂಬ ಲಸಿಕೆಯನ್ನು ಕಂಡುಹಿಡಿದರು. ಈ ಲಸಿಕೆಯ ಲೈಸೆನ್ಸ್ ಅನ್ನು ಸದ್ಯ 20 ದೇಶಗಳು ಪಡೆದುಕೊಂಡಿವೆ. ಲಸಿಕೆಯನ್ನು 9 ರಿಂದ 45 ವರ್ಷ ವಯಸ್ಸಿನವರಿಗೆ ಮೂರು ಹಂತದಲ್ಲಿ ನೀಡಲಾಗುತ್ತದೆ. ನಮ್ಮ ದೇಶವು ಈ ಲಸಿಕೆಯನ್ನು ಬಳಸಲು ಲೈಸೆನ್ಸ್ ಅನ್ನು ಹೊಂದಿರುವುದಿಲ್ಲ.

**ಎಲ್ಲಾ ಜಾತಿಯ ಸೊಳ್ಳೆಗಳ ಸಾಮಾನ್ಯ ಮಾಹಿತಿ:**

ಡೆಂಗ್ಯೂ ಜ್ವರವನ್ನು ನಿಯಂತ್ರಣ ಮಾಡಲು ಮುಖ್ಯವಾಗಿ ಸೊಳ್ಳೆಗಳ ಜೀವನ ಚಕ್ರ, ಬೆಳವಣಿಗೆ ಆಹಾರ ಪದ್ಧತಿ, ಸಂತಾನೋತ್ಪತ್ತಿ ಮುಂತಾದ ಕುರಿತು ಮಾಹಿತಿ ಇರುವುದು ಅಗತ್ಯ. ವಿಶ್ವದಾದ್ಯಂತ 3565 ಜಾತಿಯ (Species) ಸೊಳ್ಳೆಗಳನ್ನು ಇಲ್ಲಿಯವರೆಗೆ ಕಂಡುಹಿಡಿಯಲಾಗಿದ್ದು, ಎಲ್ಲಾ ಜಾತಿಯ ಸೊಳ್ಳೆಗಳು ಸರಿ ಸುಮಾರು 42–56 ದಿನಗಳು ಜೀವಿತವಾಧಿಯನ್ನು ಹೊಂದಿರುತ್ತವೆ. ಎಲ್ಲಾ ಜಾತಿಯ ಸೊಳ್ಳೆಗಳು ಜೀವಿತವಾಧಿಯಲ್ಲಿ ನಾಲ್ಕು ಹಂತಗಳನ್ನು (ಮೊಟ್ಟೆ, ಲಾರ್ವ, ಪ್ಯೂಪ, ಪ್ರೌಢಾವಸ್ಥೆ ಸೊಳ್ಳೆ) ಪೂರೈಸುತ್ತವೆ. ಪ್ರೌಢಾವಸ್ಥೆಯ ಗಂಡು ಮತ್ತು ಹೆಣ್ಣು ಸೊಳ್ಳೆಗಳು ಮಿಲನ ಹೊಂದಿದ ಸಮಯದಲ್ಲಿ ಹೆಣ್ಣು ಸೊಳ್ಳೆಗಳು ಮೊಟ್ಟೆಗಳ ಉತ್ಪಾದನೆಗಾಗಿ ಪ್ರೋಟೀನ್ ಅವಶ್ಯಕತೆಗಾಗಿ ಮನುಷ್ಯರು



Downloaded From:www.kpscvaani.com

ಅಥವಾ ಪ್ರಾಣಿಗಳಿಂದ ರಕ್ತ ಹೀರುತ್ತವೆ. ಪ್ರೋಟೀನ್, ಮೊಟ್ಟೆಗಳ ಉತ್ಪಾದನೆಗೆ, ಬೆಳವಣಿಗೆಗೆ ಅವಶ್ಯವಾಗಿರುತ್ತದೆ. ಗಂಡು ಪ್ರೌಢಾವಸ್ಥ ಸೊಳ್ಳೆಯು ಹಸಿರು ಎಲೆಯ ರಸವನ್ನು, ಹೂವಿನ ಮಕರಂದವನ್ನು ಹೀರಿಕೊಂಡು ಹೆಣ್ಣು ಸೊಳ್ಳೆಯೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿಸಿಕೊಂಡು ಜೀವಿತಾವಧಿಯನ್ನು ಪೂರ್ಣಗೊಳಿಸುತ್ತವೆ. ಗಂಡು ಸೊಳ್ಳೆಗಳಿಗೆ ಮನುಷ್ಯ ಅಥವಾ ಪ್ರಾಣಿಗಳ ದೇಹದಿಂದ ರಕ್ತ ಹೀರುವಷ್ಟು ಅವುಗಳ ಬಾಯಿಯ ಅಂಗಗಳು ರಚನೆಗೊಂಡಿರುವುದಿಲ್ಲ.

ಹೆಣ್ಣು ಸೊಳ್ಳೆಯು ಹಸಿರು ಎಲೆಯ ರಸ ಮತ್ತು ಹೂವಿನ ಮಕರಂದವನ್ನು ಹೀರಿದರೂ ಕೂಡ ಸಂತಾನೋತ್ಪತ್ತಿಯ ಸಮಯದಲ್ಲಿ ಮನುಷ್ಯ ಅಥಾವ ಪ್ರಾಣಿಗಳ ರಕ್ತವನ್ನು ಹೀರುತ್ತವೆ. ಮೊಟ್ಟೆಗಳನ್ನು ನೀರು ಸಂಗ್ರಹವಾಗಿರುವ ತಾಣದಲ್ಲಿನ ನೀರಿನ ಮೇಲ್ಮೈ ಸ್ಥಳದಲ್ಲಿ ಇಡುತ್ತವೆ. ಹಾಗಾಗಿ ಮನೆ ಒಳಾಂಗಣದಲ್ಲಿರುವ ಸಂಪ್‌ನಲ್ಲಿ, ನೀರಿನ ಡ್ರಂಗಳು, ಸೀಮೆಂಟು ತೊಟ್ಟಿಗಳು, ಬಕೆಟ್‌ಗಳು, ಮಡಿಕೆಗಳು ಏರ್ ಕೂಲರ್‌ಗಳು ಫ್ರಿಜ್ ಕೆಳಗೆ ಸಂಗ್ರಹವಾಗುವ ನೀರು, ಅಲಂಕಾರಿಕ ಸಸ್ಯಗಳ ಕುಂಡಗಳು ಇವೇ ಮುಂತಾದ ಜಾಗಗಳಲ್ಲಿ ಸಂಗ್ರಹವಾಗಿರುವ ನೀರಿನಲ್ಲಿ ಮೊಟ್ಟೆಗಳನ್ನು ಇಡುತ್ತವೆ.

ಹೊರಾಂಗಣದಲ್ಲಾದರೆ ಮರದ ಪೊಟರೆಗಳಲ್ಲಿ, ಬಿದಿರು ಗಿಡಗಳಲ್ಲಿ ಸಂಗ್ರಹವಾಗಿರುವ ಮಳೆನೀರು, ಸಿಮೆಂಟು ತೊಟ್ಟಿಗಳು, ಮುಚ್ಚಳಿಕೆ ಇಲ್ಲದ ಒವರ್ ಹೆಡ್ ಟ್ಯಾಂಕ್‌ನಲ್ಲಿರುವ ನೀರು, ಅಂಗಳದಲ್ಲಿ ಬಿಸಾಡಿರುವ ಟಿನ್, ಕ್ಯಾನ್, ಟೈರುಗಳು, ಪ್ಲಾಸ್ಟಿಕ್ ಲೋಟಗಳು, ಒರಳು ಕಲ್ಲು, ಒಡೆದು ಹೋಗಿರುವ ಪ್ಲಾಸ್ಟಿಕ್ ಡಬ್ಬಗಳಲ್ಲಿ ಸಂಗ್ರಹವಾಗಿರುವ ನೀರುಗಳಲ್ಲಿ ಮೊಟ್ಟೆಗಳನ್ನು ಇಡುತ್ತವೆ.

**ಈಡೀಸ್ ಸೊಳ್ಳೆಗಳ ನಿರ್ಮೂಲನೆಯಲ್ಲಿ ಅನುಸರಿಸಬೇಕಾದ ಕ್ರಮಗಳು:**

ಹೆಣ್ಣು ಸೊಳ್ಳೆಯು ತನ್ನ ಜೀವಿತಾವಧಿಯಲ್ಲಿ ಸರಿ ಸುಮಾರು 400 ರಿಂದ 600 ಮೊಟ್ಟೆಗಳನ್ನು ಸ್ವಚ್ಛವಾದ ನೀರಿನ ತಾಣದ ಮೇಲ್ಮೈ ಸ್ಥಳದಲ್ಲಿ ಮೊಟ್ಟೆಗಳನ್ನು ಇಡುತ್ತವೆ. ಸೊಳ್ಳೆಯ ಜೀವನ ಚಕ್ರದ ಮೂರು ಹಂತಗಳಾದ ಮೊಟ್ಟೆ, ಲಾರ್ವ, ಪ್ಯೂಪಗಳು ನೀರುಗಳಲ್ಲಿ ಮಾತ್ರ ಜೀವಂತವಾಗಿದ್ದು, ಬೆಳವಣಿಗೆಯನ್ನು ಪೂರ್ಣಗೊಳಿಸಲು ಸರಿ



ಸುಮಾರು 7 ರಿಂದ 10 ದಿನಗಳು ಬೇಕಾಗುತ್ತದೆ. ಆದ್ದರಿಂದ ಪ್ರತಿ ವಾರಕ್ಕೊಮ್ಮೆ ಒಳಂಗಣ ಮತ್ತು ಹೊರಾಂಗಣಗಳಲ್ಲಿ ಸಂಗ್ರಹವಾಗಿರುವ ನೀರುಗಳನ್ನು ಖಾಲಿ ಮಾಡಿ, ಒಣಗಿಸಿ, ಪುನಃ ಅವಶ್ಯಕತೆ ಇರುವ ನೀರನ್ನು ಶೇಖರಿಸಬೇಕು.

ಹೀಗೆ ನಾಗರಿಕರು ವಾಸಿಸುವ ಪ್ರದೇಶದಲ್ಲಿನ ಪರಿಸರದಲ್ಲಿ ಸೊಳ್ಳೆಗಳ ಸಂತಾನೊತ್ಪತ್ತಿ ತಾಣಗಳನ್ನು ನಿರ್ಮೂಲನೆ ಮಾಡುವುದರಿಂದ ಈಡೀಸ್ ಸೊಳ್ಳೆಗಳು ಇಲ್ಲದಂತೆ ಮಾಡಬಹುದು. ಹೀಗೆ ಈಡೀಸ್ ಸೊಳ್ಳೆಗಳ ಸಂತಾನೋತ್ಪತ್ತಿಯನ್ನು ತಡೆಗಟ್ಟುವುದರಿಂದ ಡೆಂಗ್ಯೂ ಜ್ವರವನ್ನು ನಿಯಂತ್ರದಲ್ಲಿ ಇಡಬಹುದು.

ಈಡೀಸ್ ಸೊಳ್ಳೆಗಳು ಹಗಲು ಸಮಯದಲ್ಲಿ ಮುಂಜಾನೆ ಮತ್ತು ಮುಸ್ಸಂಜೆ ಸಮಯದಲ್ಲಿ ಮನುಷ್ಯನ ದೇಹದಲ್ಲಿ ಉತ್ಪತ್ತಿಯಾಗುವ ಬೆವರಿನಿಂದ ಬರುವ ರಾಸಾಯನಿಕಗಳ ವಾಸನೆಯಿಂದ ಮನುಷ್ಯರನ್ನು ಮತ್ತು ಪ್ರಾಣಿಗಳನ್ನು ಗುರುತಿಸಿಕೊಂಡು ರಕ್ತವನ್ನು ಹೀರುತ್ತವೆ. ಸೊಳ್ಳೆಗಳ ಕಡಿತದಿಂದ ತಪ್ಪಿಸಿಕೊಳ್ಳಲು ರಾಸಾಯನಿಕ ವಸ್ತುಗಳಾದ ಸೊಳ್ಳೆಗಳ ನಿರೋಧಕಗಳನ್ನು ಬಳಕೆ ಮಾಡಿಕೊಳ್ಳಬೇಕು.

ಹಾಗೆಯೇ ಯಾವುದೇ ಜ್ವರ ಬರಲಿ ಉದಾಸೀನ ಮಾಡದೆ ರಕ್ತ ಪರೀಕ್ಷೆ ಮಾಡಿಸಬೇಕು. ಪರೀಕ್ಷೆಯಲ್ಲಿ ಡೆಂಗ್ಯೂ ಎಂದು ಗೊತ್ತಾದ ಕೂಡಲೇ ವೈದ್ಯರ ಸಲಹೆಯಂತೆ ಔಷಧಿಗಳನ್ನು ತೆಗೆದುಕೊಳ್ಳಬೇಕು. ಇದರಿಂದ ಡೆಂಗ್ಯೂ ಜ್ವರವು ಸಮುದಾಯದಲ್ಲಿ ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದನ್ನು ತಪ್ಪಿಸಬಹುದು.

ಇನ್ನು ಸೊಳ್ಳೆಗಳ ಸಂತಾನೋತ್ಪತ್ತಿಯನ್ನು ತಡೆಗಟ್ಟಲು ಗಪ್ಪಿ ಮತ್ತು ಗ್ಯಾಂಬೂಸೀಯಾ ಜಾತಿಯ ಮೀನುಗಳನ್ನು ನೀರು ಸಂಗ್ರಹಗಳಲ್ಲಿ ಬಿಡಲಾಗುತ್ತದೆ. ಈ ಮೀನುಗಳು ಸೊಳ್ಳೆ ಇಡುವ ಮೊಟ್ಟೆಗಳನ್ನು, ಲಾರ್ವಗಳನ್ನು, ಪ್ಯೂಪಗಳನ್ನು, ಆಹಾರವನ್ನಾಗಿ ತಿನ್ನುವುದರಿಂದ ಸೊಳ್ಳೆಗಳ ಸಂತಾನೋತ್ಪತ್ತಿಯು ಕಡಿಮೆಯಾಗುತ್ತದೆ.

ಸೊಳ್ಳೆಗಳು ಆಹಾರ ಪಡೆದ ನಂತರ ಮನೆಯಿಂದ ಹೊರಗೆ ತೇವಾಂಶ ಇರುವ ಕಡೆಯಲ್ಲಿ, ದನದ ಕೊಟ್ಟಿಗೆಯಲ್ಲಿ, ಮರದ ಪೊಟರುಗಳಲ್ಲಿ ವಿಶ್ರಾಂತಿ ಪಡೆಯುವ ಕಾರಣ ಒಳಾಂಗಣದ ಜೊತೆಗೆ ಹೊರಾಂಗಣದಲ್ಲೂ ಕೀಟನಾಶಕವನ್ನು ಸಿಂಪಡಣೆ ಮಾಡಬೇಕು.

ಡೆಂಗ್ಯೂ ಜ್ವರ ನಿಯಂತ್ರಣದಲ್ಲಿ ಆರೋಗ್ಯ ಇಲಾಖೆಯ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದು, ಸಾರ್ವಜನಿಕ ಆರೋಗ್ಯ ಕಾಪಾಡುವಲ್ಲಿ ಸದಾ ಸಿದ್ಧವಾಗಿದೆ. ಕರ್ನಾಟಕ ರಾಜ್ಯದಲ್ಲಿ ಡೆಂಗ್ಯೂ ಜ್ವರ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ 'ಶೀಘ್ರ ಪತ್ತೆ ತ್ವರಿತ ಚಿಕಿತ್ಸೆ' ಎಂಬ ಘೋಷವಾಕ್ಯದೊಂದಿಗೆ ಅಧಿಕಾರಿ/ನೌಕರರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ರೋಗಿಯ ಕಣ್ಗಾವಲು, ಸಕ್ರಿಯ ಕಣ್ಗಾವಲು, ಸ್ಥಿತ ಕಣ್ಗಾವಲು, ಆರೋಗ್ಯ ಶಿಕ್ಷಣ ಕಾರ್ಯಕ್ರಮ, ಆಪ್ತ ಸಮಲೋಚನೆ ಮುಂತಾದ ಕಾರ್ಯಾಚರಣೆಯ ಮೂಲಕ ರೋಗಿಯು ಚೇತರಿಸಿಕೊಳ್ಳುವ ತನಕ ರೋಗಿಯ ಸಂಪರ್ಕದಲ್ಲಿರುತ್ತಾರೆ.

ಸಮುದಾಯದಲ್ಲಿ ಡೆಂಗ್ಯೂ ಹರಡದಂತೆ ತಡೆಗಟ್ಟಲು ಆರೋಗ್ಯ ನೀರಿಕ್ಷಣಾಧಿಕಾರಿಗಳು ಮತ್ತು ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿಗಳು ಲಾರ್ವ ನಾಶಕಗಳನ್ನು ರೋಗಿ ಮನೆಯ ಸುತ್ತಾ ಮುತ್ತಾ ಸಿಂಪಡಣೆಗೆ ಕ್ರಮಕೈಗೊಳ್ಳುತ್ತಾರೆ.

ಸೊಳ್ಳೆಗಳಿಂದ (ರೋಗವಾಹಕ) ಹರಡಬಹುದಾದ ಸಾಂಕ್ರಾಮಿಕ ಖಾಯಿಲೆಗಳ ನಿಯಂತ್ರಣ ಮಾಡಲು ಸಂಶೋಧನೆಗಳು ನಡೆಯುತ್ತಲೇ ಇದೆ. ವಿಜ್ಞಾನಿಗಳು ಹೊಸ ಹೊಸ ಪ್ರಯೋಗಗಳನ್ನು ಮಾಡಿ ಸಾಂಕ್ರಾಮಿಕ ಖಾಯಿಲೆಗಳ ನಿಯಂತ್ರಣಕ್ಕೆ ಶ್ರಮಿಸುತ್ತಿದ್ದಾರೆ. ಆದರೂ ಡೆಂಗ್ಯೂ ರೋಗ ನಿಯಂತ್ರಣಕ್ಕೆ ಸಾರ್ವಜನಿಕರ ಸಹಕಾರವು ಅತೀ ಮುಖ್ಯವಾದುದ್ದು. ಸರ್ಕಾರಗಳು ತಿಳಿಸುವ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳ್ಳುವ ಮುಖೇನ "ಡೆಂಗ್ಯೂ ಜ್ವರ" ವನ್ನು ನಿಯಂತ್ರಣದಲ್ಲಿಡಲು ಸಹಕರಿಸಬೇಕು. ■



Downloaded From:www.kpscvaani.com



# ಐತಿಹಾಸಿಕ ಹಂಪಿಯಲ್ಲಿ ಜರುಗಿದ ಜಿ–20 ಶೃಂಗ ಸಭೆ

**ಭಾರತದ ಅಧ್ಯಕ್ಷತೆಯಲ್ಲಿ ಜರುಗಿದ ಜಿ-20 ಶೃಂಗ ಸಭೆಯಲ್ಲಿ ಐತಿಹಾಸಿಕ ಹಂಪಿಯ ಕಲಾವೈಭವಕ್ಕೆ ಮನಸೋತ ಜಿ-20 ರಾಷ್ಟ್ರಗಳ ಪ್ರತಿನಿಧಿಗಳು.**

ತುಕಾರಾಂರಾವ್ ಬಿ.ವಿ.

ಭಾರತದ ಅಧ್ಯಕ್ಷತೆಯಲ್ಲಿ ಇದೇ ಜುಲೈ 9 ರಿಂದ 16 ರವರೆಗೆ ಐತಿಹಾಸಿಕ ಜಗತ್ಪ್ರಸಿದ್ಧ ಹಂಪಿಯಲ್ಲಿ ಜರುಗಿದ ಜಿ–20 ಒಕ್ಕೂಟದ ಶೃಂಗಸಭೆ ವಿಶ್ವದ ಸುಸ್ಥಿರ ಅಭಿವೃದ್ಧಿಯಲ್ಲಿ ಭಾರತದ ಪಾತ್ರ ಮಹತ್ವದ್ದಾಗಿದೆ ಎಂಬುದನ್ನು ಜಗತ್ತಿಗೆ ಸಾರುವಲ್ಲಿ ಯಶಸ್ವಿಯಾಯಿತು.

ಇತಿಹಾಸದ ಪುಟಗಳಲ್ಲಿ ಸುವರ್ಣಯುಗ ಎಂದೇ ಬಣ್ಣಿಸಲಾಗಿರುವ ವಿಜಯನಗರ ಸಾಮ್ರಾಜ್ಯದ ಕೇಂದ್ರ ಬಿಂದು, ಯುನೆಸ್ಕೋ ಪಟ್ಟಿಯಲ್ಲಿರುವ ಹಂಪಿಯ ಶಿಲ್ಪಕಲಾ ವೈಭವವನ್ನು ಇಡೀ ಜಗತ್ತಿಗೆ ಪರಿಚಯಿಸುವ ಉದ್ದೇಶದಿಂದ ಹಂಪಿಯಲ್ಲಿ ಜಿ–20 ಶೃಂಗಸಭೆಯನ್ನು ಈ ಬಾರಿ ಭಾರತದ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ರಾಜ–ಮಹಾರಾಜರ ಕಾಲದಲ್ಲಿ ಹಂಪಿಗೆ ದೇಶ ವಿದೇಶಗಳಿಂದ ಹಲವು ರಾಯಭಾರಿಗಳು ಪ್ರವಾಸಕ್ಕಾಗಿ ಬಂದು, ಇಲ್ಲಿನ ಸಿರಿಸಂಪತ್ತು, ಸಂಸ್ಕೃತಿ, ಪರಂಪರೆ, ಕಲಾವೈಭವವನ್ನು ಕಣ್ಣಿನಲ್ಲಿ ಕಟ್ಟಿಕೊಂಡು, ತಮ್ಮ ದೇಶಗಳಿಗೆ ಮರಳಿ, ಜಗತ್ತಿಗೆ ಪರಿಚಯಿಸುತ್ತಿದ್ದಾರೆಂದು ಇತಿಹಾಸದ ಪುಟಗಳು ಹೇಳುತ್ತವೆ. ಇದೀಗ ಹಂಪಿಯಲ್ಲಿ ಜಿ–20 ಶೃಂಗವನ್ನು ಆಯೋಜಿಸುವ ಮೂಲಕ ಇತಿಹಾಸವನ್ನು ಮರುಕಳಿಸುವಂತಾಗಿದೆ.

ಜಿ–20 ರಾಷ್ಟ್ರಗಳ ಸಾಂಸ್ಕೃತಿಕ ಕಾರ್ಯ ತಂಡದ ಸಭೆಯಲ್ಲಿ, ಭಾರತದ ಸಂಸ್ಕೃತಿ ಸೇರಿದಂತೆ ಸದಸ್ಯ ರಾಷ್ಟ್ರಗಳ ಐತಿಹಾಸಿಕ ಪರಂಪರೆಗಳನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸುವ ಕುರಿತು ಹಲವು ನಿರ್ಣಯಗಳನ್ನು ಶೃಂಗ ಸಭೆ ಕೈಗೊಂಡಿತು. ಹಾಗೆಯೇ ಜಿ–20 ರಾಷ್ಟ್ರಗಳ ಶೆರ್ಪಾ ಸಭೆ ಕೂಡ ಇದೇ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿಯಲ್ಲಿ ಜರುಗಿದ್ದು ನಿಜಕ್ಕೂ ಮಹತ್ವಪೂರ್ಣ ನಿರ್ಣಯಗಳಿಗೆ ಹಂಪಿ ಸಾಕ್ಷಿಯಾಯಿತು.




ಮೂರು ದಿನಗಳ ಕಾಲ ನಡೆದ ಜಿ20 ಮೂರನೇ ಶೆರ್ಪಾ ಸಭೆಯಲ್ಲಿ ಸದಸ್ಯ ರಾಷ್ಟ್ರಗಳ ಆರ್ಥಿಕ ಸುಧಾರಣೆ ನಿಟ್ಟಿನಲ್ಲಿ ಹಲವು ಮಹತ್ವಪೂರ್ಣ ಚರ್ಚೆಗಳು ನಡೆದು, ಜಾಗತಿಕ ಆರ್ಥಿಕ ಸುಭದ್ರತೆಗೆ ಹಾಗೂ ಸುಸ್ಥಿರ ಅಭಿವೃದ್ಧಿಗೆ ಹೊಸ ಭಾಷ್ಯ ಬರೆಯಿತು. ರಾಜಸ್ಥಾನದ ಉದಯಪುರ ಮತ್ತು ಕೇರಳದ ಕುಮಾರ್ಕಂನಲ್ಲಿ ನಡೆದಿರುವ ಸಭೆಗಳಿಗಿಂತಲೂ ಹಂಪಿಯಲ್ಲಿ ನಡೆದ ಮೂರನೆ ಶೆರ್ಪಾ ಸಭೆ ಅತ್ಯಂತ ಯಶಸ್ವಿಪೂರ್ಣವೆನಿಸಿದ್ದು, ವಿಶ್ವದ ಆರ್ಥಿಕ ಬೆಳವಣಿಗೆಗೆ ಹಾಗೂ ಸುಸ್ಥಿರ ಅಭಿವೃದ್ಧಿಗೆ ಕರಡು ನೀತಿಯನ್ನು ಸಿದ್ಧಪಡಿಸಿವೆ. ಜಿ20 ಶೃಂಗದ ಸದಸ್ಯ ರಾಷ್ಟ್ರಗಳು, ವಿಶೇಷ ಆಹ್ವಾನಿತ ದೇಶಗಳು ಹಾಗೂ ಅಂತಾರಾಷ್ಟ್ರೀಯ ಸಂಸ್ಥೆಗಳ ಸುಮಾರು 125 ಕ್ಕೂ ಹೆಚ್ಚು ಉನ್ನತ ಮಟ್ಟದ ಪ್ರತಿನಿಧಿಗಳು ಭಾಗವಹಿಸಿ ಹಲವು ಹಂತಗಳ ಚರ್ಚೆ ನಡೆಸಿ, ಮುಕ್ತ ಜಾಗತಿಕ ವಹಿವಾಟು, ಸುಸ್ಥಿರ ಅಭಿವೃದ್ಧಿ, ಆಧುನಿಕ ನಗರಗಳ ನಿರ್ಮಾಣ, ಜಾಗತಿಕ ಆರ್ಥಿಕ ಸಹಕಾರಕ್ಕೆ ಕರಡು ಸಿದ್ಧಪಡಿಸಿವೆ.

**ಜಿ–20 ಒಕ್ಕೂಟಕ್ಕೆ ಆಫ್ರಿಕನ್ ರಾಷ್ಟ್ರಗಳ ಸೇರ್ಪಡೆ:**

ಶೆರ್ಪಾ ಸಭೆಯ ಅಧ್ಯಕ್ಷತೆ ವಹಿಸಿದ್ದ ಭಾರತದ ಶೆರ್ಪಾ ಮುಖ್ಯಸ್ಥರಾದ ಶ್ರೀ ಅಮಿತಾಬ್ ಕಾಂತ್ ಅವರು ಜಿ–20 ಶೃಂಗ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು, ಮಂಡಿಸಿದ ಪ್ರಸ್ತಾವನೆಗಳು



Downloaded From:www.kpscvaani.com



**ಮಹತ್ವದ ನಿರ್ಣಯಗಳು:**

ಜಿ–20 ಶೃಂಗಸಭೆಯಲ್ಲಿ ಭಾರತವು ಮುಂದಿರಿಸಿದ ಹಲವಾರು ಪ್ರಸ್ತಾವನೆಗಳು ಜಾಗತಿಕವಾಗಿ ಕಾರ್ಯಸೂಚಿಗಳನ್ನು ರೂಪಿಸುವಲ್ಲಿ ಹಾಗೂ ಪ್ರಸ್ತುತ ಜಾಗತಿಕ ಸಂಕಷ್ಟಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಮಹತ್ವದ್ದಾಗಿವೆ. ಮುಂದುವರಿಯುತ್ತಿರುವ ರಾಷ್ಟ್ರಗಳನ್ನು ಗಮನದಲ್ಲಿ ಇರಿಸಿಕೊಂಡು ಆರ್ಥಿಕತೆಯ ಅಂತರ ಕಡಿಮೆ ಮಾಡುವುದು, ಅಂತಾರಾಷ್ಟ್ರೀಯ ಸಾಲ ಮರುಪಾವತಿ, ವಿವಿಧ ರಾಷ್ಟ್ರಗಳ ನಡುವಿನ ಹಣಕಾಸು ಸಂಸ್ಥೆಗಳ ಸ್ಥಾಪನೆ, ಸುಸ್ಥಿರ ಅಭಿವೃದ್ಧಿಗೆ ಆದ್ಯತೆ ನೀಡುವುದು, ಮಾನವ ಕಲ್ಯಾಣ, ಅಂತಾರಾಷ್ಟ್ರೀಯ ವ್ಯವಹಾರ, ಡಿಜಟಲೀಕರಣ, ಅಂತಾರಾಷ್ಟ್ರೀಯ ಶಾಂತಿ, ಭಯೋತ್ಪಾದನೆ ನಿಗ್ರಹ, ಮಾದಕ ವಸ್ತುಗಳ ಸಾಗಾಣಿಕೆ ಹಾಗೂ ಮಾರಾಟ ತಡೆ ಕುರಿತು ಮಹತ್ವದ ಚರ್ಚೆಗಳನ್ನು ನಡೆಸಿ ಒಮ್ಮತದ ನಿರ್ಣಯ ಕೈಗೊಳ್ಳಲಾಗಿದೆ.

ಹಸಿವು ಹಾಗೂ ಅಪೌಷ್ಟಿಕತೆ ಹೋಗಲಾಡಿಸಲು, ಆರೋಗ್ಯ ರಕ್ಷಣೆ, ಮುಕ್ತ ಜಾಗತಿಕ ವಹಿವಾಟು, ಸುಸ್ಥಿರ ಅಭಿವೃದ್ಧಿ, ಮುಂದಿನ ಜನಾಂಗದ ದೃಷ್ಟಿಯಿಂದ ಆಧುನಿಕ ನಗರಗಳ ನಿರ್ಮಾಣ, ಜಾಗತಿಕ ಆರ್ಥಿಕ ಸಹಕಾರ, ಜಾಗತಿಕ ವಹಿವಾಟು ಹಾಗೂ ಕೊಡು–ಕೊಳ್ಳುವಿಕೆ ಕುರಿತು ಅಂತಾರಾಷ್ಟ್ರೀಯ ಕಾನೂನು ಕುರಿತು ಯೋಜನೆ ರೂಪಿಸಲಾಗಿದೆ. ಹಣಕಾಸು ವಿಷಯಗಳಿಗೆ ಸಂಬಂಧಿಸಿದಂತೆ ಕ್ರಿಪ್ಟೋ ಕರೆನ್ಸಿ, ಟ್ಯಾಕ್ಸ್ ಸೇರಿದಂತೆ ಹಲವಾರು ವಿಷಯಗಳನ್ನು ಸರಳೀಕರಣಗೊಳಿಸಲು ಚರ್ಚಿಸಲಾಗಿದೆ. ಸುಸ್ಥಿರ ಅಭಿವೃದ್ಧಿಗಾಗಿ ಹಸಿರು ಒಪ್ಪಂದ, ಹವಾಮಾನ ಆರ್ಥಿಕತೆ, ನೀಲಿಸಾಗರ ಆರ್ಥಿಕತೆ, ಪರಿಸರ ಮೇಲೆ ಪ್ಲಾಸ್ಟಿಕ್‌ನಿಂದಾಗುವ ಮಾಲಿನ್ಯ ನಿಯಂತ್ರಣ, ಹವಾಮಾನ ವೈಪರೀತ್ಯ, ನೈಸರ್ಗಿಕ ವಿಕೋಪಗಳನ್ನು ಎದುರಿಸಲು ಯೋಜನೆಗಳನ್ನು ರೂಪಿಸಲು ನಿರ್ಧರಿಸಲಾಗಿದೆ. ಲಿಂಗ ಸಮಾನತೆ, ಭಯೋತ್ಪಾದನೆಯ ವಿರುದ್ಧ ಹೋರಾಟ, ಅಂತಾರಾಷ್ಟ್ರೀಯ ಶಾಂತಿ ಸ್ಥಾಪನೆಗೆ ಶೆರ್ಪಾ ಮಹತ್ವ ನೀಡಿದೆ.

ಹಾಗೂ ಮಹತ್ವಪೂರ್ಣ ನಿರ್ಣಯಗಳ ಬಗ್ಗೆ ವಿವರಗಳನ್ನು ನೀಡಿದರು. ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಆಶಯದಂತೆ ಮಹತ್ವದ ಹೆಜ್ಜೆಯಾಗಿ ಭಾರತದ ಅಧ್ಯಕ್ಷತೆಯಲ್ಲಿ ಜಿ–20 ಒಕ್ಕೂಟಕ್ಕೆ ಆಫ್ರಿಕನ್ ಯೂನಿಯನ್ ಸದಸ್ಯತ್ವವನ್ನು ಪ್ರಸ್ತಾಪಿಸಲಾಗಿದೆ. ಈಗಾಗಲೇ ಯೂರೋಪ್ ಯೂನಿಯನ್ ರಾಷ್ಟ್ರಗಳು ಜಿ–20 ಸದಸ್ಯ ರಾಷ್ಟ್ರಗಳಾಗಿವೆ. ಆಫ್ರಿಕನ್ ರಾಷ್ಟ್ರಗಳ ಸೇರ್ಪಡೆಯಿಂದ ಜಿ–20ಗೆ ಪ್ರಪಂಚದಲ್ಲಿ ಹೆಚ್ಚಿನ ರಾಷ್ಟ್ರಗಳು ಸೇರ್ಪಡೆಯಾದಂತಾಗಿ, ಇದು ಪ್ರಪಂಚದ ದೊಡ್ಡ ಆರ್ಥಿಕ ವೇದಿಕೆಯಾಗಲಿದೆ. ಬರುವ ಸೆಪ್ಟೆಂಬರ್ 9 ಹಾಗೂ 10 ರಂದು ದೆಹಲಿಯಲ್ಲಿ ನಡೆಯಲಿರುವ ಜಿ–20 ರಾಷ್ಟ್ರಗಳ ಉನ್ನತ ಮಟ್ಟದ ನಾಯಕರ ಸಭೆಯಲ್ಲಿ ಈ ಬಗ್ಗೆ ಅಂತಿಮ ನಿರ್ಣಯ ಕೈಗೊಳ್ಳುವ ಸಾಧ್ಯತೆಗಳಿವೆ.

ಹಂಪಿಯ ವಿಜಯ ವಿಠಲ ಮಂದಿರ ಬಳಿ ಜರುಗಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರಾದ ಹೆಚ್.ಕೆ.ಪಾಟೀಲ್ ಅವರು, ಸಾಂಸ್ಕೃತಿಕ ರಾಜಧಾನಿ ಹಂಪಿಯು ನಮಗೆಲ್ಲರಿಗೂ ಹೆಮ್ಮೆ ಹಾಗೂ ಅಭಿಮಾನ. ಈ ಅದ್ಭುತ ಪ್ರದೇಶವನ್ನು ನೋಡದಿದ್ದರೆ ಜೀವನದಲ್ಲಿ ಮಹತ್ವದ ಘಟ್ಟವನ್ನು ಕಳೆದುಕೊಂಡಂತೆ. ಹಂಪಿಯಲ್ಲಿ ಶೆರ್ಪಾ ಸಭೆ ನಡೆಯುತ್ತಿರುವುದು ಜಗತ್ತಿಗೆ ಹಂಪಿಯನ್ನು ಪರಿಚಯಿಸಿದಂತಾಗಿದೆ. ಶೆರ್ಪಾ ಪ್ರತಿನಿಧಿಗಳ ಅನಿಸಿಕೆ ಮತ್ತು ಅಭಿಪ್ರಾಯಗಳು ಮುಂದಿನ ದಿನಗಳಲ್ಲಿ ಹಂಪಿಯ ಅಭಿವೃದ್ಧಿಗೆ ಇನ್ನಷ್ಟು ಕಾರಣವಾಗಲಿದೆ ಎಂದರು.

ಭಾರತದ ಅಧ್ಯಕ್ಷತೆಯಲ್ಲಿ ಜರುಗಿದ ಈ ಸಭೆಯಲ್ಲಿ ಸದಸ್ಯ ರಾಷ್ಟ್ರಗಳಾದ ಅರ್ಜೆಂಟೈನಾ, ಆಸ್ಟ್ರೇಲಿಯಾ, ಬ್ರೆಜಿಲ್, ಕೆನಡಾ, ಚೀನಾ, ಫ್ರಾನ್ಸ್, ಜರ್ಮನಿ, ಇಂಡೋನೇಷ್ಯಾ, ಇಟಲಿ, ಜಪಾನ್, ಕೊರಿಯಾ, ಮೆಕ್ಸಿಕೋ, ಸೌದಿ ಅರೇಬಿಯಾ, ರಷ್ಯಾ, ದಕ್ಷಿಣ ಆಫ್ರಿಕಾ, ಟರ್ಕಿ, ಇಂಗ್ಲೆಂಡ್, ಅಮೆರಿಕ, ಯೂರೋಪ್ ಒಕ್ಕೂಟ ಪಾಲ್ಗೊಂಡಿದ್ದವು. ಅತಿಥಿ ರಾಷ್ಟ್ರಗಳಾಗಿ ಬಾಂಗ್ಲಾ, ಈಜಿಪ್ಟ್, ಮಾರಿಷಸ್, ನೆದರ್ಲೆಂಡ್, ನೈಜೀರಿಯಾ, ಓಮನ್, ಸಿಂಗಾಪುರ, ಸ್ಪೇನ್ ಹಾಗೂ ಯುಎಇ ದೇಶಗಳು ಭಾಗವಹಿಸಿದ್ದವು.

ಭಾರತೀಯ ಪುರತತ್ವ ಹಾಗೂ ಪ್ರಾಚ್ಯವಸ್ತು ಸಂಗ್ರಹಾಲಯ ಹಾಗೂ ರಾಜ್ಯ ಪ್ರವಾಸೋದ್ಯಮ ಇಲಾಖೆ ಜೊತೆಗೆ ವಿಜಯನಗರ ಜಿಲ್ಲಾಡಳಿತ ಜಿ–20 ಶೃಂಗಸಭೆಗೆ ಹಂಪಿ ಸ್ಮಾರಕಗಳನ್ನು ಸಜ್ಜುಗೊಳಿಸಿದ ರೀತಿ ಶ್ಲಾಘನೆಗೆ ಪಾತ್ರವಾಯಿತು. ಇದರ ಫಲವಾಗಿ ಹಂಪಿ ಸ್ಮಾರಕಗಳು ಜಿ–20 ರಾಷ್ಟ್ರಗಳ ಪ್ರತಿನಿಧಿಗಳ ಮನಸೂರೆಗೊಳ್ಳುವಲ್ಲಿ ಯಶಸ್ವಿಯಾಯಿತು. ವಿವಿಧ ರಾಷ್ಟ್ರಗಳಿಂದ ಆಗಮಿಸಿದ ಶೆರ್ಪಾಗಳು ಹಂಪಿಯ ಮಹಾನವಮಿ ದಿಬ್ಬ, ಪುಷ್ಕರಣಿ, ರಾಣಿ ಸ್ನಾನ ಮಹಲು, ಹಜಾರರಾಮ ದೇವಾಲಯ, ಕಮಲ ಮಹಲ್, ಗಜಶಾಲೆ ಮುಂತಾದ ಕಣ್ತುಂಬಿಕೊಂಡ ಪ್ರತಿನಿಧಿಗಳಿಗೆ, ಸಂಜೆ ಕಣ್ಣು ಕೊರೈಸುವ ದೀಪಾಲಂಕಾರದ ಮಧ್ಯೆ ವಿಜಯವಿಠ್ಠಲ ಮಂದಿರ, ಕಲ್ಲಿನ ರಥ, ಸಂಗೀತ ಕಂಬಗಳು ಹಂಪಿಯ ಗತ ವೈಭವವನ್ನು ಮರುಕಳಿಸಿದವು. ಒಟ್ಟಿನಲ್ಲಿ ಹಂಪಿಯ ವಾಸ್ತು ಶಿಲ್ಪಕ್ಕೆ ವಿದೇಶಿ ಪ್ರತಿನಿಧಿಗಳು ಮನಸೋತರು. ■



Downloaded From:www.kpscvaani.com



# ಸ್ವರಾಜ್ಯ ಆಂದೋಲನ ಮತ್ತು ರಾಷ್ಟ್ರೀಯ ಭಾವನೆ

**ಪರಕೀಯರ ಆಡಳಿತದ ಹಿಂತೆಗೆತಕ್ಕೆ ಮತ್ತು ಸಾಮಾನ್ಯರು ರಾಷ್ಟ್ರೀಯ ಪ್ರಜ್ಞೆ ಪಡೆಯಲು ಸ್ವರಾಜ್ಯ ತತ್ವವು ಸಹಾಯಕವಾಯಿತು.**

ಡಾ. ಆರ್.ಶಂಕರಪ್ಪ

**ಭಾ**ರತದಲ್ಲಿ ಸ್ವರಾಜ್ಯ ಕಲ್ಪನೆಯನ್ನು ಮೊದಲ ಬಾರಿಗೆ ಪ್ರತಿಪಾದಿಸಿದವರು ಬಾಲಗಂಗಾಧರನಾಥ ತಿಲಕರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಮೂಡಿ ತಿಲಕರು ತೀವ್ರಗಾಮಿ ಪಂಥದ ನಾಯಕರಾಗಿ "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಅದನ್ನು ಪಡೆದೇ ತೀರುತ್ತೇನೆ" ಎಂಬ ಧ್ಯೇಯ ಮಂತ್ರವನ್ನು ಜನರಿಗೆ ಬೋಧಿಸಿದರು. ನಂತರ ಗಾಂಧೀಜಿಯವರು ಸ್ವರಾಜ್ಯ ಅಥವಾ ಸ್ವಯಂ ಆಡಳಿತವನ್ನು ಅಹಿಂಸಾ ಮಾರ್ಗದಲ್ಲಿ ಗಳಿಸಿ ಹೊಸ ಪಥವನ್ನು ನಿರ್ಮಿಸಿದರು. ಈ ಸ್ವರಾಜ್ಯ ತತ್ವವು ಪರಕೀಯರ ಆಡಳಿತದ ಹಿಂತೆಗೆತಕ್ಕೆ, ದೇಶದ ಸ್ವಾತಂತ್ರ್ಯಕ್ಕೆ ಸೀಮಿತವಾಗಿರದೆ ಸಾಮಾನ್ಯರು ರಾಷ್ಟ್ರೀಯ ಪ್ರಜ್ಞೆ ಪಡೆಯಲು ಕೂಡ ಸಹಾಯಕವಾಯಿತು.

ಸ್ವರಾಜ್ಯ ಎಂದರೆ ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ಸ್ವತಂತ್ರವಾಗಿ ಬದುಕು ನಡೆಸುವ ಜನರಿರುವ ಪ್ರದೇಶ. ಇಲ್ಲಿ ಸ್ವರಾಜತ್ವ, ಸ್ವಯಂ ಆಡಳಿತ, ಸ್ವರಕ್ಷಣೆ ಎಲ್ಲವೂ ಇರುತ್ತವೆ. ರಾಜಕೀಯ ಶಾಸ್ತ್ರದ ಒಂದು ಪರಿಕಲ್ಪನೆಯಾದ ಸ್ವತಂತ್ರ ರಾಷ್ಟ್ರದ ಸ್ಥಾನಮಾನವನ್ನು ಸ್ವರಾಜ್ಯ ತಿಳಿಸುತ್ತದೆ. ಇದು ಯಾವುದೇ ರೀತಿಯ ಅಧೀನಕ್ಕೆ ಒಳಪಡದೆ ಸ್ವಾವಲಂಬಿ ಸ್ವತಂತ್ರ ವ್ಯವಸ್ಥೆಯಾಗಿರುತ್ತದೆ. ಸ್ವರಾಜ್ಯ ಎಂಬುದು ನಾಗರಿಕತೆಯ ಬೆಳವಣಿಗೆಯಲ್ಲಿ ಕಂಡು ಬಂದಿರುವ ಪ್ರಬುದ್ಧತೆಯ ಅಂಶವಾಗಿದೆ. ಅನಾದಿಕಾಲದ ಜೀವನದಿಂದ ಆಧುನಿಕ ನಾಗರಿಕತೆಯತ್ತ ನಡೆಯುವಾಗ ರಾಜ್ಯಗಳ ಆಡಳಿತಕ್ಕೆ ಸಂಬಂಧಿಸಿದಂತೆ ನಾನಾ ಹಂತಗಳನ್ನು (ಮಜಲು) ಕಾಣುತ್ತೇವೆ. ಬಹುತೇಕ ಜಾಗತಿಕ ಇತಿಹಾಸ ಒಂದು ರೀತಿಯಲ್ಲಿ ಸ್ವರಾಜ್ಯದ ಕಡೆಗಿನ ಹೋರಾಟವೆನ್ನಬಹುದು. ವ್ಯಕ್ತಿಯು ತನ್ನ ದೇಶ ಅಥವಾ ರಾಜ್ಯಕ್ಕೆ ತನ್ನ ಪ್ರಾಣವನ್ನು ಮುಡಿಪಾಗಿಟ್ಟು ರಕ್ಷಿಸುತ್ತಾನೆ ಅದಕ್ಕೆ ಸ್ವರಾಜ್ಯ ಎಂದು ಕರೆಯುತ್ತೇವೆ.

ಅರಿಸ್ಟಾಟಲ್‌ರ ಪ್ರಕಾರ ರಾಜಕೀಯ ಬೆಳವಣಿಗೆಯ ಚಕ್ರ ಏಕ ಚಕ್ರಾಧಿಪತ್ಯದಿಂದ ವರ್ಗಾಡಳಿತಕ್ಕೂ, ಅನಂತರ ಪ್ರಜಾಪ್ರಭುತ್ವದ ಕಡೆಗೂ ಸಾಗುತ್ತದೆ. ರಾಜ್ಯಾಡಳಿತ ಹೊಸ ಹೊಸ ವ್ಯವಸ್ಥೆಗಳು ಕೊಡುವ ಅನುಭವದಿಂದ ಮತ್ತಷ್ಟು ಸುಧಾರಿತ ವ್ಯವಸ್ಥೆಯ ಕಡೆಗೆ ಮಾನವನು ಮುನ್ನಡೆಯುವುದು ಸ್ವಾಭಾವಿಕ ಸ್ವರಾಜ್ಯ ಎಂಬುದು ಸ್ವವಿವರಿತವಾಗಿದೆ. ಸ್ವ ಎಂದರೆ ತಮಗೆ ತಾವೇ ರಾಜ್ಯಭಾರ (ಆಡಳಿತ) ಮಾಡುವುದಾಗಿದೆ. ಪ್ರಜಾಪ್ರಭುತ್ವದ ಮೂಲ ಸ್ವರಾಜ್ಯ ಎಂದು ಕರೆಯಬಹುದು. ಸ್ವರಾಜ್ಯದಲ್ಲಿ ಯಾವುದೇ ದೇಶದ ಅಧೀನಕ್ಕೆ ಒಳಪಡದೆ ಅಲ್ಲಿಯ ಜನ ತಮ್ಮ ಸ್ವಾತಂತ್ರ್ಯವನ್ನು ಅನುಭವಿಸುತ್ತಾರೆ. ಇದು ನ್ಯಾಯಶಾಸ್ತ್ರದ ಪರಿಕಲ್ಪನೆಯ ಪ್ರಕಾರ "ದೇಶದ ಸಾರ್ವಭೌಮತ್ವ"ವನ್ನು ಸೂಚಿಸುತ್ತದೆ. ಪ್ರಜಾಪ್ರಭುತ್ವದ ಪ್ರಕಾರ ಆ ದೇಶದ ಪ್ರಜೆಗಳು ಸರ್ಕಾರವನ್ನು ರಚಿಸಿಕೊಳ್ಳುತ್ತಾರೆ. ಆದ್ದರಿಂದ ಸ್ವರಾಜ್ಯ ಮತ್ತು ಪ್ರಜಾಪ್ರಭುತ್ವಗಳು ಎರಡೂ ಒಂದೇ.

ಗ್ರೀಕ್ ನಗರ ರಾಜ್ಯದಿಂದ ರೂಪುಗೊಂಡ ಸ್ವರಾಜ್ಯ ಕಲ್ಪನೆ ನಾನಾ ಆಯಾಮಗಳನ್ನು ಕಾಲಕ್ರಮೇಣ ಸಂವಿಧಾನತತ್ವ ಕಾನೂನಿನ ಶ್ರೇಷ್ಠತೆ ನಾಗರೀಕತನದ ಉತ್ಕೃಷ್ಠತೆ ಹಾಗೂ ಸಾರ್ವಭೌಮತ್ವವನ್ನು ಇಂದು ಪ್ರತಿಬಿಂಬಿಸುತ್ತಿದೆ. ಈ ಹಿಂದೆ ಬಹುತೇಕ ರಾಷ್ಟ್ರಗಳು ಕೆಲವೇ ರಾಷ್ಟ್ರಗಳ ಆಡಳಿತಕ್ಕೆ ಒಳಪಟ್ಟಿದ್ದವು. ಬ್ರಿಟಿಷ್ ವಸಾಹತುಗಳು ಪ್ರಪಂಚದ ಎಲ್ಲಾ ಕಡೆ ಇದ್ದು, ಕಾಲ ಕ್ರಮೇಣ ಅವೆಲ್ಲ ಸ್ವಾತಂತ್ರವಾಗಿವೆ. ಇವೆಲ್ಲಾ ಇಂದು ಸ್ವರಾಜ್ಯಗಳಾಗಿವೆ. ಆ ರಾಷ್ಟ್ರಗಳು ಇಂದು ತಮ್ಮ ಸ್ವಾತಂತ್ರ್ಯ ದಿನವನ್ನು ಆಚರಿಸುತ್ತವೆ. ಜನರ ಸ್ವಾಭಿಮಾನದಿಂದ ಉದ್ಭವಿಸುವ ಸ್ವಾತಂತ್ರ್ಯ ಚಳುವಳಿ ಹೋರಾಟದಿಂದ ದೇಶಗಳು ಪರಾಧೀನತೆಯಿಂದ ಮುಕ್ತವಾಗುತ್ತವೆ. ಅಲ್ಲಿನ ಜನತೆಯಿಂದ ಚುನಾಯಿತ ಪ್ರಾತಿನಿಧಿಕ ಶಾಸನ ಸಭೆಗಳು ಅಲ್ಲಿನ ಶಾಸನಗಳನ್ನು ರಚಿಸುತ್ತವೆ. ಅಲ್ಲದೆ ಆ ಚುನಾಯಿತ ಪ್ರಾತಿನಿಧಿಕ ಸರ್ಕಾರ ಜನರ ವಿಶ್ವಾಸ ಇರುವವರೆಗೆ ಮಾತ್ರ ಅಸ್ತಿತ್ವದಲ್ಲಿ



Downloaded From:www.kpscvaani.com

ಇರುತ್ತದೆ. ಕೆಲವೊಮ್ಮೆ ಸ್ವರಾಜ್ಯದಲ್ಲಿ ಪ್ರಜಾಪ್ರಭುತ್ವ ಇಲ್ಲದೆ ರಾಜನ ಅಥವಾ ನಿರಂಕುಶ ಅಧಿಕಾರಕ್ಕೂ ಅವಕಾಶವಾಗಬಹುದು. ಆದರೆ ಒಂದು ಪ್ರಮುಖ ಅಂಶವೆಂದರೆ ನಿರಂಕುಶಾಧಿಕಾರಿ ಅದೇ ದೇಶಕ್ಕೆ ಸೇರಿದವನಾಗಿರುತ್ತಾನೆ. ಏನೇ ಆದರೂ ದೇಶೀಯರದೇ ಸ್ವರಾಜ್ಯದಲ್ಲಿ ಆಡಳಿತವಿರುತ್ತದೆ. ಅಂತಾರಾಷ್ಟ್ರೀಯ ಕಾನೂನಿನಲ್ಲೂ ಒಂದು ರಾಷ್ಟ್ರ ಮತ್ತೊಂದು ರಾಷ್ಟ್ರವನ್ನು ಬಲಾತ್ಕಾರದಿಂದ ಆಕ್ರಮಿಸುವಂತಿಲ್ಲ ಎಂಬ ನಿಯಮವಿದ್ದು ಸ್ವರಾಜ್ಯಕ್ಕೆ ಬೆಂಬಲ ಇದೆ. ಅಂತಾರಾಷ್ಟ್ರೀಯ ಸಮುದಾಯ ಮತ್ತು ಸಂಘ ಸಂಸ್ಥೆಗಳು "ಸ್ವರಾಜ್ಯ ಪರಿಕಲ್ಪನೆಯನ್ನೇ" ಗೌರವಿಸುತ್ತವೆ.

**ಗಾಂಧೀ ದೃಷ್ಟಿಯಲ್ಲಿ ಸ್ವರಾಜ್ಯ**

ಭಾರತದ ಸ್ವಾತಂತ್ರ್ಯಕ್ಕಾಗಿ ಅಪ್ರತಿಮವಾಗಿ ಹೋರಾಟ ನಡೆಸಿದ ಗಾಂಧೀಜಿಯವರು ಕೇವಲ ರಾಜಕೀಯ ಸ್ವಾತಂತ್ರ್ಯದ ಗುರಿ ಇಟ್ಟುಕೊಂಡಿರಲಿಲ್ಲ. ಪೂರ್ಣ ಸ್ವರಾಜ್ಯದ ಸ್ಥಾಪನೆಗೆ ರಾಜಕೀಯ ಸ್ವಾತಂತ್ರ್ಯ ಮೊದಲ ಮೆಟ್ಟಿಲೆಂದು ಮಾತ್ರ ಭಾವಿಸಿದ್ದರು. ಅವರ ದೃಷ್ಟಿಯಲ್ಲಿ ಸ್ವರಾಜ್ಯವೆಂದರೆ ಪರಿಪೂರ್ಣವಾದ ಪ್ರಜಾರಾಜ್ಯ. ಈ ವ್ಯವಸ್ಥೆಯಲ್ಲಿ ಸಾರ್ವಭೌಮಾಧಿಕಾರವಿರುವುದು ಪ್ರಜೆಗಳಲ್ಲೇ ಹೊರತು ಪ್ರಭುತ್ವದಲ್ಲಿ ಅಲ್ಲ. ಪ್ರಜೆಗಳ ಸಾರ್ವಭೌಮತ್ವಕ್ಕೆ ಬುನಾದಿ ನೈತಿಕ ಅಧಿಕಾರ ದಂಡಿನ ಬಲವಲ್ಲ. ಸತ್ಯ, ಅಹಿಂಸೆ, ಸ್ವಾತಂತ್ರ್ಯ, ಸಮಾನತೆ ಈ ಮೌಲ್ಯಗಳ ಸಾಕ್ಷತ್ಕಾರವೇ ಪ್ರಜೆಗಳ ಗುರಿ. ಈ ಮೌಲ್ಯಗಳು ಹೆಚ್ಚು ಹೆಚ್ಚಾಗಿ ಅನುಷ್ಠಾನಕ್ಕೆ ಬಂದಂತೆ ವ್ಯಕ್ತಿಗಳ ವಿಕಾಸದ ಜೊತೆಗೆ ಸಮಾಜದ ಮೇಲ್ಮೆಯು ಸಾಧನೆಯಾಗುತ್ತ ಹೋಗುತ್ತದೆ. ಅಂಥ ಪ್ರಜಾರಾಜ್ಯ ಶೋಷಣೆರಹಿತ ವರ್ಗರಹಿತ ರಾಜ್ಯವಾಗಿರುತ್ತದೆ. ಪೂರ್ಣ ಸ್ವರಾಜ್ಯ ಏರ್ಪಟ್ಟಾಗ ಯಾವುದೇ ರೀತಿಯ ಸರ್ಕಾರಿ ಅಂಕುಶ(ನಿಯಂತ್ರಣ)ವಿರುವುದಿಲ್ಲ. ಈ ವ್ಯವಸ್ಥೆಯಲ್ಲಿ ಜನತೆಗೆ ಪೂರ್ಣವಾಗಿ ಸಾಮಾಜಿಕ ನ್ಯಾಯ, ಆರ್ಥಿಕ ನೆಮ್ಮದಿ ಹಾಗೂ ವ್ಯಕ್ತಿ ಸ್ವಾತಂತ್ರ್ಯ ಇರುತ್ತವೆ. ಇಂಥ ಪ್ರಜಾರಾಜ್ಯವನ್ನು ಗಾಂಧಿಯವರು ರಾಮರಾಜ್ಯವೆಂದು ಕರೆದರು.

ಸರ್ಕಾರವೇ ಇಲ್ಲದ ರಾಜ್ಯ ಆದರ್ಶವಾದರೂ ಸದ್ಯಕ್ಕೆ ಅದು ಎಟುಕದ ಆದರ್ಶ. ಆದ್ದರಿಂದ ಯಾವುದು ಅತ್ಯಂತ ಮಿತವಾದ ಪ್ರಭುತ್ವವೋ ಅದೇ ಉತ್ಕೃಷ್ಟ ಪ್ರಭುತ್ವ ಎಂಬ ಥಾರೋವಿನ ವಿಚಾರವನ್ನು ಗಾಂಧಿಯವರು ಒಪ್ಪಿಕೊಂಡರು. ಸ್ವತಂತ್ರ ಭಾರತ ಬ್ರಿಟನ್ನಿನ ಸಂಸದೀಯಪ್ರಭುತ್ವ ಪದ್ಧತಿಯನ್ನಾಗಲಿ ಸೋವಿಯೆತ್ ಪದ್ಧತಿಯನ್ನಾಗಲಿ ಫ್ಯಾಸಿಸ್ಟ್ ಪದ್ಧತಿಯನ್ನಾಗಲಿ ಅನುಕರಿಸಬಾರದು. ಅವುಗಳಲ್ಲಿ ಯಾವುದೂ ಭಾರತೀಯ ಜನಜೀವನ ಅಥವಾ ಸಂಸ್ಕೃತಿಗೆ ಹೊಂದಿಕೊಳ್ಳುವಂಥದಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ರೂಢವಾಗಿರುವ ಪ್ರಭುತ್ವಗಳೆಲ್ಲವೂ ಸಾಮ್ರಾಜ್ಯವಾದ, ಹಿಂಸೆ, ಶೋಷಣೆ ಇವುಗಳ ಮೇಲೆ ನಿಂತಿರುವಂಥವು. ಆದ್ದರಿಂದ ಅವು ಭಾರತಕ್ಕೆ ವಜ್ಯವೆಂಬುದು ಗಾಂಧಿಯವರ ಇಂಗಿತವಾಗಿತ್ತು.

ಭಾರತದಲ್ಲಿ ಕೇವಲ ಕೆಲವು ಜನತಾಪ್ರತಿನಿಧಿಗಳು ಅಧಿಕಾರಸೂತ್ರ ವಹಿಸಿಕೊಂಡರೆ ನಿಜವಾದ ಸ್ವರಾಜ್ಯವಾಗಲಾರದು. ಸರ್ಕಾರ ತಪ್ಪು ಮಾಡಿದಾಗ ಅದನ್ನು ತಡೆಗಟ್ಟುವ ಸಾಮರ್ಥ್ಯ ಪ್ರತಿಯೊಬ್ಬ ಪ್ರಜೆಗೂ ಬಂದಾಗಲೇ ನಿಜವಾದ ಸ್ವರಾಜ್ಯಪ್ರಾಪ್ತಿ ಎಂಬುದು ಗಾಂಧಿಯವರ ಅಭಿಪ್ರಾಯವಾಗಿತ್ತು. ರಾಜಕೀಯ ಅಧಿಕಾರದ ಕೇಂದ್ರೀಕರಣವಾದಷ್ಟೂ ಪ್ರಭುತ್ವ ಜನಸಾಮಾನ್ಯರ ಹಿಡಿತದಿಂದ ದೂರ ಸರಿಯುತ್ತದೆ. ಹಿಂಸೆಯನ್ನು ಆಧರಿಸಿದ ಸರ್ಕಾರ ದೊಡ್ಡ ಶೋಷಕ ಶಕ್ತಿಯಾಗುವುದಲ್ಲದೆ ವ್ಯಕ್ತಿಸ್ವಾತಂತ್ರಕ್ಕೆ ಕಂಟಕವಾಗುತ್ತದೆ. ಅಂಥ ಕೇಂದ್ರೀಕೃತ ರಾಜಕೀಯ ವ್ಯವಸ್ಥೆ ಜನರ ಹೆಸರಿನಲ್ಲಿ ನಡೆದರೂ ಅದು ಹೆಸರಿಗೆ ಮಾತ್ರ ಪ್ರಜಾಪ್ರಭುತ್ವವಾಗಿರುತ್ತದೆ. ಪ್ರಜೆಗಳು ತಮ್ಮ ಆಗುಹೋಗುಗಳನ್ನು ನಿರ್ಧರಿಸುವುದರಲ್ಲಿ ಸಕ್ರಿಯ ಪಾತ್ರವಹಿಸಲಾಗುವುದಿಲ್ಲ. ಬದಲಾಗಿ ಪ್ರತಿಯೊಂದು ಕೆಲಸಕ್ಕೂ ಸರ್ಕಾರವನ್ನೇ ಎದುರು ನೋಡುವ ಅಸಹಾಯಕ ಪರಿಸ್ಥಿತಿಯಲ್ಲಿರುತ್ತಾರೆ. ಇದು ತಪ್ಪಬೇಕಾದರೆ ರಾಜಕೀಯ ಅಧಿಕಾರದ ವಿಕೇಂದ್ರೀಕರಣವಾಗಬೇಕು. ಭಾರತದಲ್ಲಿ ರಾಜ್ಯಶಕ್ತಿಯ ವಿಕೇಂದ್ರೀಕರಣಕ್ಕೆ ಸಹಾಯಕವಾಗುವ ಗ್ರಾಮ ಘಟಕಗಳಿವೆ. ಗಾಂಧೀಜಿಯವರ ದೃಷ್ಟಿಯಲ್ಲಿ ಪ್ರತಿ ಗ್ರಾಮವೂ ಸ್ವಾಯತ್ತತೆಯ ಘಟಕವಾಗಬೇಕು. ಅವರು ದೇಶದ ಮುಂದಿಟ್ಟ ಗ್ರಾಮ ಸ್ವರಾಜ್ಯದ ಚಿತ್ರವಿದು.

ನನ್ನ ಕಲ್ಪನೆಯ ಗ್ರಾಮಸ್ವರಾಜ್ಯವೆಂದರೆ ಅದೊಂದು ಪರಿಪೂರ್ಣ ಗಣರಾಜ್ಯ. ತನ್ನ ಪ್ರಧಾನ ಅಗತ್ಯಗಳಲ್ಲಿ ಅದು ನೆರೆಹೊರೆಯವರಿಂದ ಸ್ವತಂತ್ರ. ಆದರೂ ಅಗತ್ಯವಾದಲ್ಲಿ, ಎಷ್ಟೋ ವಿಷಯಗಳಲ್ಲಿ ಗ್ರಾಮಗಳು ಪರಸ್ಪರಾವಲಂಬಿಯಾಗಿರುತ್ತವೆ. ಸತ್ಯಾಗ್ರಹ ಹಾಗೂ ಅಸಹಕಾರ ತಂತ್ರವುಳ್ಳ ಅಹಿಂಸೆಯೇ ಗ್ರಾಮ ಸಮಾಜದ ಆಧಾರಶಕ್ತಿ. ಗ್ರಾಮ ಗಣರಾಜ್ಯಗಳ ಮಹಾ ಒಕ್ಕೂಟವೇ ಭಾರತರಾಷ್ಟ್ರ, ಅಸಂಖ್ಯ ಹಳ್ಳಿಗಳುಳ್ಳ ಈ ರಚನೆಯಲ್ಲಿ ಸದಾ ವ್ಯಾಪಕ ವೃತ್ತಗಳಿರುತ್ತವೆ, ಆರೋಹಣ ವೃತ್ತಗಳಿರುವುದಿಲ್ಲ. ಬದುಕು ಪಿರಮಿಡಿನಂತಿರುವುದಿಲ್ಲ. ಅದು ಸಾಗರ ಸಮವೃತ್ತದಂತೆ ಅದರ ಕೇಂದ್ರ ಬಿಂದು ವ್ಯಕ್ತಿ. ಆತ ತನ್ನ ಹಳ್ಳಿಗಾಗಿ ಅಳಿಯಲೂ ಸಿದ್ಧ. ಗ್ರಾಮಗಳ ಸಮೂಹಕ್ಕಾಗಿ ನಾಶವಾಗಲು ಹಳ್ಳಿ ಸಿದ್ಧ. ಕೊನೆಗೆ ಇಡೀ ಜೀವನ ಒಂದು ಪೂರ್ಣತೆಯಾಗುತ್ತದೆ.

ಆದ್ದರಿಂದ ಹೊರಗಿನ ವೃತ್ತ ಒಳಗಿನ ವೃತ್ತವನ್ನು ತುಳಿಯಲು ತನ್ನ ಅಧಿಕಾರವನ್ನು ಉಪಯೋಗಿಸುವುದಿಲ್ಲ. ಅದರ ಬದಲಾಗಿ ತಾನೂ ಅದಕ್ಕೆ ಶಕ್ತಿ ನೀಡುತ್ತದೆ. ಅದರಿಂದ ತಾನೂ ಶಕ್ತಿ ಪಡೆಯುತ್ತದೆ. ಇದೆಲ್ಲ ಅಸಾಧ್ಯವಾದ ಆದರ್ಶ ಎಂದು ನೀವು ನನ್ನನ್ನು ಮೂದಲಿಸಬಹುದು. ಮನುಷ್ಯಮಾತ್ರರು ಗುರುತಿಸಲಾದ ಯೂಕ್ಲಿಡನ ಬಿಂದುವಿಗೇ ಅಳಿಯದ ಬೆಲೆ ಇರುವುದಾದರೆ ಮಾನವಕುಲ ಉಳಿಯುವಂಥ ನನ್ನ ಚಿತ್ರಕ್ಕೂ ತನ್ನದೇ ಆದ ಮೌಲ್ಯವುಂಟು. ಚಿತ್ರವನ್ನು ಪರಿಪೂರ್ಣವಾಗಿ ಎಂದೂ ಸಾಧಿಸಲಾಗದಿದ್ದರೂ ಭಾರತ ಈ ನೈಜ ಚಿತ್ರಕ್ಕಾಗಿ ಬದುಕಲಿ, ನಮಗೆ ಬೇಕಾದುದರ ಯೋಗ್ಯ ಚಿತ್ರವಿಲ್ಲದೆ ನಾವು ಅದರತ್ತ ಧಾವಿಸುವುದು ಸಾಧ್ಯವಿಲ್ಲ. ಭಾರತದ ಪ್ರತಿಯೊಂದು ಹಳ್ಳಿಯಲ್ಲೂ ಎಂದಾದರೊಂದು ದಿನ ಪ್ರಜಾರಾಜ್ಯವಾಗಬೇಕಾಗಿದ್ದರೆ ನನ್ನ ಈ ಚಿತ್ರವೇ ಸರಿ ಎನ್ನುತ್ತೇನೆ. ಇದರಲ್ಲಿ ಕೊನೆಯದೂ ಮೊದಲಿನದೂ ಪರಸ್ಪರ ಸಮಾನ ಅರ್ಥಾತ್ ಪ್ರಥಮ ಅಂತಿಮ ಯಾವುದೂ ಇದರಲ್ಲಿಲ್ಲ. ಪ್ರಜಾಪ್ರಭುತ್ವದ ಯಶಸ್ಸು ವಿಕೇಂದ್ರೀಕರಣವನ್ನು ಅವಲಂಬಿಸಿದೆ ಎಂಬುದು ಗಾಂಧಿಯವರ ಸ್ಪಷ್ಟ ಅಭಿಮತ, ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಮಾತ್ರ ಅಹಿಂಸೆಯ ಆಚರಣೆ ಸಾಧ್ಯ. ಅಹಿಂಸೆ ಆಧಾರವಾಗಿರದ ಪ್ರಜಾತಂತ್ರ ನಿಜವಾದ ಪ್ರಜಾಪ್ರಭುತ್ವ ವಾಗುವುದೇ ಇಲ್ಲ.

ರಾಜಕೀಯ ಅಧಿಕಾರದ ಜೊತೆಯಲ್ಲಿ ಆರ್ಥಿಕಶಕ್ತಿಯ ವಿಕೇಂದ್ರೀಕರಣವೂ ಆಗಬೇಕು. ವಿಕೇಂದ್ರೀಕೃತ ಅರ್ಥ ವ್ಯವಸ್ಥೆ ಎಂದರೆ ಮನುಷ್ಯನ ಶ್ರಮಶಕ್ತಿ



Downloaded From:www.kpscvaani.com

ಆಧಾರವಾಗಿರುವ ಸಣ್ಣ ಉದ್ಯಮಗಳ ವ್ಯವಸ್ಥೆ. ಜನತೆಗೆ ಉಪಯುಕ್ತವಾದ ಎಲ್ಲ ಅಗತ್ಯ ಬಳಕೆಯ ವಸ್ತುಗಳ ಉತ್ಪಾದನೆ ಕುಟೀರಗಳಲ್ಲಿ ಅಥವಾ ಸಣ್ಣ ಸಣ್ಣ ಘಟಕಗಳಲ್ಲಿ ಆಗುತ್ತದೆ. ಭಾರತದಂಥ ಜನಬಾಹುಳ್ಯವಿರುವ ದೇಶದಲ್ಲಿ ಕೋಟಿ ಕೋಟಿ ಕೈಗಳೂ ಲಕ್ಷೋಪಲಕ್ಷ ಕುಟೀರಗಳಲ್ಲಿ ಉತ್ಪಾದಿಸಿದ ವಸ್ತುಗಳ ಒಟ್ಟು ಗಾತ್ರ ಅಗಾಧವಾದ ಜನರ ಅವಶ್ಯಕತೆಗಳನ್ನು ಪೂರೈಸುತ್ತದೆ. ಶ್ರಮಶಕ್ತಿಗೆ ಪೂರಕವಾಗಿ ಸಣ್ಣ ಯಂತ್ರಗಳಿಗೆ ಅವಕಾಶವಿರುತ್ತದೆ. ಇಂಥ ವ್ಯವಸ್ಥೆಯಲ್ಲಿ ಮಧ್ಯವರ್ತಿಗಳಿಂದ ಶೋಷಣೆ ಅಥವಾ ಲಾಭಬಡುಕತನ ಇರುವುದಿಲ್ಲ. ಉತ್ಪಾದನೆ ವಿತರಣೆಗಳು ಒಟ್ಟಿಗೆ ಆಗಿ ಪರಮಾವಧಿ ಉದ್ಯೋಗ ಪ್ರಾಪ್ತಿ ಹಾಗೂ ನ್ಯಾಯೋಚಿತ ವಿತರಣೆ ಆಗುತ್ತದೆ.

ಅನಿವಾರ್ಯವಾಗಿ ಹಲವು ಬೃಹತ್ ಕೈಗಾರಿಕೆಗಳು ಇರಬೇಕಾದ ಸಂದರ್ಭದಲ್ಲಿ ಅದರ ಮಾಲೀಕತ್ವದಲ್ಲಿ ಕಾರ್ಮಿಕರ ಸಹಭಾಗಿತ್ವ ಇರಬೇಕು. ಮಾಲೀಕರು ಉದ್ಯಮದ ಧರ್ಮದರ್ಶಿಗಳಾಗಿ ವರ್ತಿಸಿ ಕಾರ್ಮಿಕ ವರ್ಗಕ್ಕೆ ಸಮಪಾಲು ನೀಡಬೇಕು. ಮಾಲೀಕ ವರ್ಗ ಹಾಗೆ ನಡೆದುಕೊಳ್ಳದಿದ್ದ ಪಕ್ಷದಲ್ಲಿ ಅಂಥ ಭಾರೀ ಉದ್ಯಮಗಳು ಸರ್ಕಾರದ ಒಡೆತನಕ್ಕೆ ಒಳಪಡುತ್ತವೆ. ಸರ್ಕಾರದ ಅಧೀನದಲ್ಲಿದ್ದರೂ ಅದರ ಆಡಳಿತ ನೌಕರಶಾಹಿಯ ಮುಷ್ಟಿಯಲ್ಲಿರದೆ ಕಾರ್ಮಿಕರ ಪ್ರಾತಿನಿಧ್ಯವುಳ್ಳ ದಕ್ಷ ಆಡಳಿತ ಮಂಡಲಿಯಲ್ಲಿರತಕ್ಕದ್ದು. ಗಾಂಧಿಯವರ ಕಲ್ಪನೆಯ ಸಮಾಜ ಜಾತಿರಹಿತ ಹಾಗೂ ವರ್ಗರಹಿತ ಸಮಾಜ. ಎಲ್ಲ ಜನರ ಸರ್ವಾಂಗೀಣ ವಿಕಾಸಕ್ಕೆ ಇದರಲ್ಲಿ ಆದ್ಯ ಗಮನ. ಸ್ತ್ರೀಪುರುಷರು ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಸಹಭಾಗಿಗಳು.

ಸ್ವರಾಜ್ಯದ ರಾಜಕಾರಣ ಸೇವಾಪರವಾದ ರಾಜಕಾರಣ. ನೀತಿಬಾಹಿರವಾದ ರಾಜಕಾರಣ ಪಾಶವೀ ರಾಜಕೀಯವಾದ್ದರಿಂದ ಅದು ಸಮಾಜಘಾತಕ. ಸಾಧನೆ, ಗುರಿ ಇವೆರಡೂ ಪವಿತ್ರವಾಗಿದ್ದಲ್ಲಿ ರಾಜಕಾರಣ ಪರಿಶುದ್ಧವಾಗಿರುತ್ತದೆ. ಜನತೆಯಿಂದ ಚುನಾಯಿತರಾದ ಪ್ರತಿನಿಧಿಗಳು ಪ್ರಾಮಾಣಿಕವಾಗಿ ಸೇವಾತತ್ಪರರಾಗಿದ್ದರೆ ಅವರು ನಡೆಸುವ ಸರ್ಕಾರ ಸೇವಾಸಾಧನವಾಗುತ್ತದೆ. ವಿವಿಧ ಘಟ್ಟಗಳಲ್ಲಿ ಜನರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ವ್ಯಷ್ಟಿ (ಚಿಕ್ಕ) ಹಾಗೂ ಸಮಷ್ಟಿ (ವ್ಯಾಪಕ) ಹಿತಕ್ಕಾಗಿ ಸಕ್ರಿಯವಾಗಿ ಕೆಲಸ ಮಾಡುವುದರಿಂದ ಸಮಾಜದ ಅಭ್ಯುದಯ ಉಂಟಾಗುತ್ತದೆ. ಅಂಥ ಸಮಾಜ ಸರ್ವರ ಯೋಗಕ್ಷೇಮ ಸಾಧಿಸುವ ಸರ್ವೋದಯ ಸಮಾಜವಾಗುತ್ತದೆ. ಅದು ಸ್ವರಾಜ್ಯವು ಸುರಾಜ್ಯವೂ ಆಗಿರುತ್ತದೆ. ಗಾಂಧಿಯವರ ಸ್ವರಾಜ್ಯದ ಕಲ್ಪನೆ ಕೇವಲ ಭಾರತಕ್ಕೆ ಸೀಮಿತವಾಗಿರದೆ ಇಡೀ ಮಾನವ ಜನಾಂಗಕ್ಕೆ ಅನ್ವಯಿಸುತ್ತದೆ. ದೊಡ್ಡವು, ಚಿಕ್ಕವು ಎಂಬ ಭೇದವಿಲ್ಲದೆ ಎಲ್ಲ ರಾಜ್ಯಗಳೂ ಸರಿಸಮಾನವಾದವು. ಎಲ್ಲ ದೇಶಗಳಲ್ಲೂ ರಾಜ್ಯವ್ಯವಸ್ಥೆ ಸತ್ಯ, ಅಹಿಂಸೆ, ವಿಕೇಂದ್ರೀಕರಣ ಇವುಗಳ ಆಧಾರದ ಮೇಲೆ ರಚಿತವಾದರೆ ವಿಶ್ವಶಾಂತಿ ಶಾಶ್ವತ ವಾಗಿರುತ್ತದೆ. ಮಾನವ ಸ್ವಾತಂತ್ರ್ಯದ ದಿಗಂತ ವಿಸ್ತಾರವಾಗುತ್ತದೆ.

1886ರಲ್ಲಿ ದಾದಾಬಾಯಿ ನೌರೋಜಿ ಕಲ್ಕತ್ತಾದಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಸಭೆಯಲ್ಲಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸ್ವರಾಜ್ಯವನ್ನು "ರಾಷ್ಟ್ರೀಯವಾದಿ ಚಳುವಳಿಯ" ಏಕೈಕ ಗುರಿಯಾಗಿ ಪ್ರತಿಪಾದಿಸಿದರು. ಆದರೆ ಭಾರತದಲ್ಲಿ ಆಗ ಬ್ರಿಟಿಷರ ವಸಾಹತು ಮತ್ತು ಸಾಮ್ರಾಜ್ಯಶಾಹಿ ಸರಕಾರವಿತ್ತು. 1907ರಲ್ಲಿ ಶ್ರೀ ಅರಬಿಂದೋ "ವಂದೇ ಮಾತರಂ" ಪತ್ರಿಕೆಯ ಸಂಪಾದಕರಾಗಿ ಹೊಸ ತಲೆಮಾರಿನ ರಾಷ್ಟ್ರೀಯವಾದಿಗಳು ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಅಸ್ತಿತ್ವದಲ್ಲಿರುವಂತೆ ಪೂರ್ಣ ಸ್ವರಾಜ್ ಪೂರ್ಣ ಸ್ವಾತಂತ್ರ್ಯಕ್ಕಿಂತ ಕಡಿಮೆ ಏನನ್ನು ಸ್ವೀಕರಿಸುವುದಿಲ್ಲ ಎಂದು ಬರೆದರು. ಅವರ ಬರಹಗಳು ಮತ್ತು ಭಾಷಣಗಳ ಮೂಲಕ ಬಾಲಗಂಗಾಧರ ತಿಲಕ್ ಈ ಕಲ್ಪನೆಯನ್ನು ಜನಪ್ರಿಯಗೊಳಿಸಿದರು.


1930ರಲ್ಲಿ ಭಾರತೀಯ ರಾಜಕೀಯ ಪಕ್ಷಗಳು ಯುನೈಟೆಡ್ ಕಿಂಗ್‌ಡಮ್‌ನಿಂದ ರಾಜಕೀಯ ಸ್ವಾತಂತ್ರ್ಯದ ಗುರಿಯನ್ನು ಬಹಿರಂಗವಾಗಿ ಸ್ವೀಕರಿಸಿದರು. ಆಲ್ ಇಂಡಿಯಾ ಹೋಮ್‌ರೂಲ್ ಲೀಗ್ ಭಾರತಕ್ಕೆ ಹೋಮ್‌ರೂಲ್‌ನ್ನು ಪ್ರತಿಪಾದಿಸುತ್ತಿತ್ತು. ಹಿರಿಯ ಕಾಂಗ್ರೆಸ್ ನಾಯಕರಾದ ಬಾಲಗಂಗಾಧರ್ ತಿಲಕ್, ಲಾಲಾ ಲಜಪತ್‌ರಾಯ್, ಬಿಪಿನ್ ಚಂದ್ರಪಾಲ್, ಶ್ರೀ ಅರಬಿಂದೊರು ಬ್ರಿಟಿಷ್ ಸಾಮ್ರಾಜ್ಯದಿಂದ "ಸ್ಪಷ್ಟವಾದ ಭಾರತೀಯ ಸ್ವಾತಂತ್ರ್ಯ"ವನ್ನು ಪ್ರತಿಪಾದಿಸಿದರು. 1919ರ ಅಮೃತ್‌ಸರ ಹತ್ಯಾಕಾಂಡದ (ಜಲಿಯನ್ ವಾಲಾಬಾಗ್) ನಂತರ ಬ್ರಿಟಿಷ್ ಆಳ್ವಿಕೆಯ ವಿರುದ್ಧ ಸಾಕಷ್ಟು ಸಾರ್ವಜನಿಕ ಆಕ್ರೋಶವಿತ್ತು. 1920ರಲ್ಲಿ ಗಾಂಧೀಜಿ ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ "ಸ್ವರಾಜ್ಯಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡು ಇದನ್ನು ರಾಜಕೀಯ ಮತ್ತು ಆಧ್ಯಾತ್ಮಿಕ ಸ್ವಾತಂತ್ರ್ಯ ಎಂದು ವಿವರಿಸಲಾಗಿದೆ. ಆ ಸಮಯದಲ್ಲಿ ಗಾಂಧೀಜಿ ಇದನ್ನು ಎಲ್ಲಾ ಭಾರತೀಯರ ಮೂಲಭೂತ ಬೇಡಿಕೆ ಎಂದು ವಿವರಿಸಿದರು.

ಸ್ವರಾಜ್ಯದ ಮುಂದುವರೆದ ಭಾಗವಾಗಿ ಗ್ರಾಮ ಸ್ವರಾಜ್ಯವನ್ನು ಮುಂದುವರೆಸಲಾಯಿತು. ಗ್ರಾಮ ಸ್ವರಾಜ್ಯ ಎಂದರೆ ಸಾಮಾಜಿಕ ಸಾಮರಸ್ಯವನ್ನು ಉತ್ತೇಜಿಸುವುದು ಬಡ ಕುಟುಂಬಗಳನ್ನು ಅಭಿವೃದ್ಧಿ ಪಡಿಸುವುದು, ಶಿಕ್ಷಣ, ಆರೋಗ್ಯ, ವಸತಿಗೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವುದು ಮತ್ತು ಕೇಂದ್ರ ಸರ್ಕಾರದ ಸಾರ್ವಜನಿಕ ಕಲ್ಯಾಣ ಯೋಜನೆಗಳಿಂದ ವಂಚಿತರಾದ ಜನರಿಗೆ ಪ್ರಯೋಜನ ನೀಡುವುದು ಗ್ರಾಮ ಸ್ವರಾಜ್ಯದ ಮುಖ್ಯ ಉದ್ದೇಶ.

ಭಾರತ ಸ್ವರಾಜ್ಯ ಸಂಪಾದನೆಯ ಹೋರಾಟಕ್ಕೆ ನೂರಾರು ಕವಲುಗಳಿವೆ. ಸ್ವಾತಂತ್ರ್ಯಗಂಗೆಗೆ ಸಾವಿರಾರು ತೊರೆಗಳು ಬಂದು ಸೇರಿಕೊಂಡಿವೆ. ಅನೇಕ ಹೋರಾಟಗಳು, ಸತ್ಯಾಗ್ರಹ, ಬಲಿದಾನಗಳಿಂದ ಭಾರತ ಸ್ವಾತಂತ್ರ್ಯವನ್ನು ಪಡೆಯಿತು. ಸ್ವರಾಜ್ಯ, ಸುರಾಜ್ಯವಾಗುವುದರ ಹಿಂದೆ ನೂರಾರು ಜನ ಸಮಾಜ ಸುಧಾರಕರ ಪರಿಶ್ರಮವಿದೆ. ಸುಧಾರಣೆ ಭಾರತೀಯ ಸಮಾಜದ ಸಹಜ ಚಕ್ರವಾಗಿತ್ತು. ಸುಮಾರು ಎರಡು ಶತಮಾನಗಳಿಗಿಂತಲೂ ಹೆಚ್ಚುಕಾಲ ನಡೆದ ಎಲ್ಲಾ ಪ್ರಯತ್ನಗಳು ಹೋರಾಟಗಳು, ಸುಧಾರಣಾ ಚಳುವಳಿಗಳಿಂದ ಸಮಾಜದಲ್ಲಿ ಸಕಾರಾತ್ಮಕವಾದ ಪರಿವರ್ತನೆ ನಡೆಯಿತು. ಇದೆ ಸ್ವರಾಜ್ಯ, ಸ್ವಾತಂತ್ರ್ಯ ನಂತರವೂ ಈ ಪ್ರಯತ್ನ ಮುಂದುವರೆದಿದೆ. ಆದರೂ ಸಾಗಬೇಕಾಗಿರುವ ದಾರಿ ಇನ್ನೂ ಇದೆ. ಆದರೆ ಅಂದು ತಮ್ಮ ಬದುಕನ್ನು ಸ್ವರಾಜ್ಯಕ್ಕಾಗಿ ಸಮರ್ಪಿಸಿದ ಮಹಾತ್ಮರ ಚಿಂತನೆಗಳನ್ನು ನಾವಿಂದು ರೂಢಿಸಿಕೊಳ್ಳಬೇಕಾಗಿದೆ. ಸ್ವರಾಜ್ಯ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜವನ್ನು ರಕ್ಷಿಸಿಕೊಳ್ಳಬೇಕಾಗಿದೆ.


Downloaded From:www.kpscvaani.com

# ತಂತ್ರಜ್ಞಾನಕ್ಕೆ ಪರಿವರ್ತನೆಗೊಳ್ಳುತ್ತಿರುವ ಗ್ರಂಥಾಲಯಗಳು



**ಇಂದಿನ ಮಾಹಿತಿ ಮತ್ತು ತಂತ್ರಜ್ಞಾನದ ಬೆಳವಣಿಗೆಗೆ ಅನುಗುಣವಾಗಿ ಗ್ರಂಥಾಲಯಗಳು ಪರಿವರ್ತನೆಗೊಳ್ಳುತ್ತಿವೆ.**

**ವೆಂಕಟೇಶ್ ತೂಬಿನಕೆರೆ**

ಆಗಸ್ಟ್ 12 ಗ್ರಂಥಾಲಯ ಪಿತಾಮಹರಾದ ಡಾ. ಎಸ್. ಆರ್.ರಂಗನಾಥನ್ ಅವರ ಹುಟ್ಟುಹಬ್ಬ. ಅವರ ನೆನಪಿಗಾಗಿ ಪ್ರತಿ ವರ್ಷ ಕರ್ನಾಟಕ ಸರ್ಕಾರದ ಸಾರ್ವಜನಿಕ ಗ್ರಂಥಾಲಯ ಇಲಾಖೆ ಮತ್ತು ಶಾಲಾ ಕಾಲೇಜುಗಳು ಗ್ರಂಥಾಲಯ ದಿನಾಚರಣೆಯನ್ನಾಗಿ ದೇಶದ ಎಲ್ಲಾ ಗ್ರಂಥಾಲಯಗಳಲ್ಲಿ ಆಚರಿಸುವ ಮುಖಾಂತರ ಅವರನ್ನು ನೆನಪು ಮಾಡಿಕೊಳ್ಳಲಾಗುತ್ತದೆ.

ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಡಾ. ಎಸ್. ಆರ್. ರಂಗನಾಥನ್ ಅವರು ಗ್ರಂಥಾಲಯ ವಿಜ್ಞಾನದಲ್ಲಿ ಸಂಶೋಧನೆ ಕೈಗೊಂಡು ಪಿ.ಹೆಚ್.ಡಿ ಪದವಿ ಪಡೆದು ಗ್ರಂಥಾಲಯ ವಿಜ್ಞಾನವನ್ನು ಜಗತ್ತಿಗೆ ಮೊದಲ ಬಾರಿಗೆ ಪರಿಚಯಿಸಿದರು. ಭಾರತ ಸರ್ಕಾರ ಇವರ ಅಮೋಘ ಸೇವೆಯನ್ನು ಗುರುತಿಸಿ 1957 ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ. ಶ್ರೀಯುತರು ಪುಸ್ತಕಗಳ ವರ್ಗೀಕರಣ (DDC/CC) ಪರಿಚಯಿಸುವುದರ ಜೊತೆಗೆ ಗ್ರಂಥಾಲಯ ವಿಜ್ಞಾನದಲ್ಲಿ 5 ಪಂಚ ಸೂತ್ರಗಳನ್ನು ಅಳವಡಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

ಮೊದಲಿಗೆ ಗ್ರಂಥಾಲಯಗಳು ಬರೀ ಪುಸ್ತಕ ಸಂಗ್ರಹ ಭಂಡಾರಗಳಾಗಿದ್ದವು. ಬರು ಬರುತ್ತಾ, ಬದಲಾದ ಕಾಲಮಾನದಲ್ಲಿ ಗ್ರಂಥಾಲಯಗಳು ಆಗಾಧವಾಗಿ ಮತ್ತು ಬಹು ವಿಸ್ತಾರವಾಗಿ ಬೆಳೆದು ನಿಂತಿವೆ. ಇದಕ್ಕೆಲ್ಲಾ ಕಾರಣ ಮಾಹಿತಿ ಮತ್ತು ತಂತ್ರಜ್ಞಾನದ ಬೆಳವಣಿಗೆ. ಇದರಿಂದಾಗಿ ಇಂದು ಗ್ರಂಥಾಲಯ ಎನ್ನುವ ಬದಲಾಗಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರವಾಗಿ (Library &information center) ಪರಿವರ್ತನೆಗೊಂಡಿದೆ.

ಈ ಮಾಹಿತಿ ತಂತ್ರಜ್ಞಾನದಿಂದ ಎಲ್ಲಾ ಮಾಹಿತಿಗಳು ಗಣಕೀಕೃತಗೊಳ್ಳುತ್ತಿವೆ. ಇದರಿಂದ ಎಲ್ಲಾ ಮಾಹಿತಿಗಳು ನಮಗೆ ಅಂತರ್ಜಾಲದ ಮುಖಾಂತರ ಕ್ಷಣಮಾತ್ರದಲ್ಲಿ ದೊರೆಯುತ್ತವೆ. ಮುಖ್ಯವಾಗಿ, ಇದರಲ್ಲಿ ಇ-ಪುಸ್ತಕಗಳು, ಇ-ನಿಯತಕಾಲಿಕೆಗಳು, ಇ-ಮಾಹಿತಿಗಳು ಆಧುನಿಕ ಗ್ರಂಥಾಲಯಗಳ ಉಗಮಕ್ಕೆ ನಾಂದಿ ಹಾಡಿದರೆ, ಸಾಂಪ್ರದಾಯಿಕ ಗ್ರಂಥಾಲಯಗಳಿಗೆ ಮುಕ್ತಿ ನೀಡುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿವೆ.

ಇ-ಎಂಬ ಗ್ರಂಥಾಲಯದಲ್ಲಿ ಎಲ್ಲವೂ ಅಯೋಮಯ, ಜೇ ಜೋಬ ಎನ್ನುವ ಬದಲು ಜೈ ಗೂಗಲ್ ಎಂದರೆ ಸಾಕು ಗುಬ್ಬಚ್ಚಿ ಗೂಡಿನಿಂದ ಗಗನದ ಅಗಲದವರೆಗು ಇರುವ ಎಲ್ಲಾ ವಿಷಯಗಳನ್ನು ಬೆರಳ ತುದಿಯಿಂದಲೇ ಪಡೆಯಬಹುದು. ಅಷ್ಟೇ ಏಕೆ ನಮ್ಮ ಮನೆಯಲಿಯೇ ಕುಳಿತು ವಿಶ್ವ ಪರ್ಯಟನೆ ಮಾಡಲುಬಹುದು. ಇಷ್ಟಾದರೂ ಇ-ಗ್ರಂಥಾಲಯದಲ್ಲಿ ಸಿಗದಿರುವ ಆನಂದ ಸಂತೃಪ್ತಿ ಸಾಂಪ್ರದಾಯಿಕ ಗ್ರಂಥಾಲಯದಲ್ಲಿ ಸಿಗುವುದು ಎಂದರೆ ವಾಚಕರು ನಗಬಹುದು. ಆದರೆ ಇದು ಸತ್ಯ.

ನಮ್ಮ ಹಳೆಯ ಸಾಂಪ್ರದಾಯಕ ಗ್ರಂಥಾಲಯದಲ್ಲಿ ವಿರಾಜಮಾನವಾಗಿ ಕುಳಿತು ಪುಸ್ತಕವನ್ನು ಕೈಯಲ್ಲಿ ಹಿಡಿದು



Downloaded From:www.kpscvaani.com


ನಾವು ಓದುವಾಗ ಮೈ ಮನಗಳಿಗೆ ಮುದ ಸಿಗುತ್ತದೆ. ಅಲ್ಲಿ ಓದುವುದರಿಂದ ಸಹನೆಯೂ ನೆಮ್ಮದಿಯು ನಮಗೆ ಮೈಗೂಡುತ್ತದೆ. ನಮ್ಮ ಸಂಪ್ರದಾಯವನ್ನು ಬೆಳೆಸುವುದರ ಜೊತೆಗೆ ಏಕಾಗ್ರತೆಯ ಮೇಲೆ ಗಮನಾರ್ಹ ಪರಿಣಾಮ ಬೀರುವಂತೆ ಮಾಡುತ್ತದೆ. ಆದರೆ ಇಂದಿನ ಯುವ ಜನಾಂಗ ಬರೀ ಅಂತರ್ಜಾಲಕ್ಕೆ ಮಾರು ಹೋಗುತ್ತಿದ್ದಾರೆ. ವಿದ್ಯಾರ್ಥಿಗಳಲ್ಲಿ ಪುಸ್ತಕ ಓದುವಷ್ಟು ಸಹನೆ ಇಲ್ಲ. ಶೈಕ್ಷಣಿಕ ಸಾಮಾಜಿಕ ಕ್ಷೇತ್ರದಲ್ಲಿ ಹೊಸತೊಂದು ಆಂದೋಲನ ನಡೆಯಬೇಕಾದರೆ ಅದು ಅಕ್ಷರ ಪ್ರೀತಿ ಮತ್ತು ಪುಸ್ತಕ ಸಂಸ್ಕೃತಿಯ ಮೂಲಕವೆ ಆಗಬೇಕೇ ಹೊರತು ಅನ್ಯ ಮಾರ್ಗದಿಂದಲ್ಲ. ನಾವು ಕೆಲವೊಮ್ಮೆ ನೋಡಿರುತ್ತೇವೆ, ವಿದ್ಯಾರ್ಥಿಗಳಲ್ಲಿ ಪುಸ್ತಕಗಳನ್ನು ಓದುವಷ್ಟು ಸಮಯವಿಲ್ಲ. ಪುಸ್ತಕದಲ್ಲಿ ಜ್ಞಾನ ಭಂಡಾರವೆ ಇದೆ. ಆದರೆ ಅದನ್ನು ಓದಬೇಕು, ತಿಳಿಯಬೇಕು ಎಂಬ ಹಂಬಲವೇ ನಮ್ಮ ಮಕ್ಕಳಲ್ಲಿ ಇಲ್ಲವಾಗಿದೆ.



ಪಾಠದ ಹೊರತು ಇನ್ಯಾವ ಪುಸ್ತಕಗಳ ಅರಿವೆ ಇಲ್ಲದಂತೆ ವರ್ತಿಸುವುದನ್ನು ನಾವು ನೋಡಿದ್ದೇವೆ. ಏಕಾಗ್ರತೆಯ ಕೊರತೆ ಇಂದಿನ ಯುವ ಪೀಳಿಗೆಯಲ್ಲಿ ಬಲವಾಗಿ ಕಾಡುತ್ತಿದೆ. ಇದಕ್ಕಾಗಿ ಸಾವಿರಾರು ರೂಪಾಯಿ ತೆತ್ತು ಯೋಗ ಧ್ಯಾನಗಳ ಮೊರೆಹೋಗುತ್ತಾರೆ. ಇಂಥ ಹಲವಾರು ಉದಾಹರಣೆಗಳನ್ನು ನಾವು ನೀವು ನೋಡಿರಬಹುದು. ಆದರೆ ಅದರ ಉದ್ದೇಶ ಅಂತರ್ಜಾಲ ಅಥವಾ ಇ-ಗ್ರಂಥಾಲಯ ಮಾರಕವೆಂದಲ್ಲ. ಮಾಹಿತಿ ತಂತ್ರಜ್ಞಾನ ಮನುಷ್ಯನ ಆರೋಗ್ಯ ಮತ್ತು ಮನಸ್ಥಿತಿಯ ಮೇಲೆ ಅಗಾದವಾದ ಪರಿಣಾಮ ಬೀರುತ್ತದೆ. ಹಾಗಾದರೆ ನಮ್ಮ ಗ್ರಂಥಾಲಯ ಹೇಗಿರಬೇಕು? ಎಂಬ ಉತ್ತರಕ್ಕೆ ಬರುವುದಾದರೆ ಶಾಲಾ ಕಾಲೇಜು ಗ್ರಂಥಾಲಯಗಳು ಕಲಿಕೆಯ ಸಾಧನ ಕೇಂದ್ರಗಳಾಗಿ (Library resource Center) ಬದಲಾಗುವ ನಿಟ್ಟಿನಲ್ಲಿ ಯೋಚಿಸಬೇಕಿದೆ.

ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಕಾನೂನು ಜಾರಿಗೆ ಬಂದು ದಶಕಗಳೇ ಕಳೆದರೂ, ಕಾನೂನಿನ ಅಡಿಯಲ್ಲಿ ನಾವು ಎಲ್ಲರಿಗೂ ಗ್ರಂಥಾಲಯ ಸೌಲಭ್ಯ ಒದಗಿಸಲು ಆಗಿಲ್ಲ. ಅದರಲ್ಲೂ ಇ-ಗ್ರಂಥಾಲಯ ಸೇವೆಯಲ್ಲಿ ರಾಜ್ಯ ಮೊದಲನೆ ಸ್ಥಾನದಲ್ಲಿದೆ. ಜೊತೆಗೆ ಕಲೆ. ಸಾಹಿತ್ಯ. ಸಂಗೀತ, ಚಿತ್ರಕಲೆ ಬೆಳೆಸುವುದರ ಜೊತೆಗೆ ಗ್ರಾಮೀಣ ಪ್ರದೇಶದ ಜನರಿಗೂ ಗ್ರಂಥಾಲಯ ಸೇವೆ ಮತ್ತು ಇ-ಸೇವೆ ದೊರೆಯುವಂತೆ ಮಾಡಿರುವುದು ನಿಜಕ್ಕೂ ಕರ್ನಾಟಕ ಸರ್ಕಾರದ ಸಾಧನೆಯೆ ಸರಿ.

ಯುದ್ಧದಲ್ಲಿ ಬಾಂಬ್ ಬಿದ್ದು ಇಡೀ ನ್ಯೂಯಾರ್ಕ್ ನಗರ ನಾಶವಾಗುವುದಾದರೆ ಆಗಲಿ. ಆದರೆ ಅಲ್ಲಿನ ಸಾರ್ವಜನಿಕ ಗ್ರಂಥಾಲಯ ಒಂದು ಉಳಿದರೆ ಸಾಕು ಬೇರೆಲ್ಲವನ್ನು ನಾವು ನಿರ್ಮಿಸಬಲ್ಲೆವು ಎಂದು ಎರಡನೇ ಮಹಾಯುದ್ಧದ ಸಮಯದಲ್ಲಿ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ತನ್ನ ಸಂಪಾದಿಕೆಯಲ್ಲಿ ಬರೆಯುತ್ತದೆ. ಇದಕ್ಕೆ ಉತ್ತಮ ನಿದರ್ಶನವೆಂಬಂತೆ ಮೊನ್ನೆ ಫ್ರಾನ್ಸಿನ ಜನಾಂಗೀಯ ವೈಷಮ್ಯದಿಂದ ಗ್ರಂಥಾಲಯವೊಂದು ಉರಿದು ಬೂದಿಯಾದಾಗ, ನಮ್ಮ ಜ್ಞಾನದಾಹದ ಅಜ್ಞಾನ ಎಲ್ಲಿಗೆ ಬಂದು ನಿಂತಿದೆ ಎಂದೆನಿಸುತ್ತದೆ.




ನಮ್ಮದು ಪುಸ್ತಕಪ್ರೇಮಿ ಸಮಾಜ, ಓದುವ ಬರೆವ ಹಂಬಲ ನಮ್ಮಲಿದೆ. ಆದರೆ ಅದು ಪರಿಪೂರ್ಣವಾಗ ಬೇಕಾದರೆ ಗ್ರಂಥಾಲಯ ಎಂಬ ದೇವಾಲಯವನ್ನು ಹುಡುಕಿಕೊಂಡು ಹೋಗಬೇಕು. ಆಸ್ಪತ್ರೆ, ಶಾಲಾ ಕಟ್ಟಡ, ಆಟದ ಮೈದಾನ, ದೇವಾಲಯಗಳಂತೆ ಗ್ರಂಥಾಲಯವು ಒಂದು ಎಂಬ ಭಾವನೆಯಿಂದ ಗ್ರಂಥಾಲಯಕ್ಕೆ ಪ್ರವೇಶಿಸಬೇಕು. ಅಲ್ಲಿ ಸಿಗುವ ಧ್ವನಿ ಸುರಳಿ, ಸಿಡಿ, ವಿಡಿಯೋ, ಶ್ರವಣ ಮಾಧ್ಯಮದಂತಹ ತಂತ್ರಜ್ಞಾನ ಬಳಸಿಕೊಂಡು ಆರೋಗ್ಯಕರವಾದ ಉತ್ತಮ ಬಲಿಷ್ಠವಾದ ಸಮಾಜ ಕಟ್ಟುವುದು ನಮ್ಮ ನಿಮ್ಮೆಲ್ಲರ, ವಿದ್ಯಾರ್ಥಿಗಳ, ಸಾರ್ವಜನಿಕರ ಗುರಿ ಆಗಬೇಕು ಎಂಬುದೇ ನಮ್ಮ ಮಹಾದಾಸೆ.

ಓದು- ಬದಲಾಗು- ಮುನ್ನಡೆಸು.......



Downloaded From:www.kpscvaani.com

# ಪದಬಂಧ-45



ವಿದ್ಯಾ ವಿ. ಹಾಲಭಾವಿ

## ಎಡದಿಂದ ಬಲಕ್ಕೆ

1. 1.ಉಚಿತ ವಿದ್ಯುತ್ ಯೋಜನೆ (4)
3. ಹೆಣ್ಣುದುಂಬಿ ಇಲ್ಲಿದೆ (4)
5. ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
7. ಒಳ್ಳೆಯ ಮಗನಿವನು (3)
10. ಕೆಲಸ ಮಾಡಲು ಬೇಕಾದ ಸಾಧನ (5)
11. ಎರಡಾಗಿ ಸೀಳಿದುದು (3)
13. ಕುದುರೆಬಾಯಿಗೆ ಹಾಕುವ ಉಕ್ಕಿನ ತುಂಡು ಉಲ್ಟಾಕಾಣುತ್ತಿದೆ (4)
16. ಮುಖ್ಯಮಂತ್ರಿಯವರು ಬಜೆಟ್ ಅನ್ನು ಮಂಡಿಸಿರುವ ಸಂಖ್ಯೆಯಿದು (4)
17. ಮಹಿಳೆಯರಿಗೆ ಧನಸಹಾಯ ನೀಡುವ ಯೋಜನೆ (4)

## ಮೇಲಿಂದ ಕೆಳಕ್ಕೆ

1. 2.ಭಾರವಲ್ಲದ್ದು ಇದು! (3)
3. ಮಧುರ ಫಲಗಳನ್ನು ನೀಡುವ ವೃಕ್ಷ (2)
4. ಕದಕ್ಕೆ ಒರಗಿಸಿರುವ ಕೆನ್ನೆ (3)
6. ಗುಂಪು ಗುಂಪಾಗಿ ವಿಂಗಡಿಸುವುದು (5)
7. ಒಳ್ಳೆಯ ಸ್ವಭಾವ (3)
8. ಪಕ್ಷದ ಹದಿಮೂರನೆಯ ದಿನ (4)
9. ಸೂಕ್ಷ್ಮವಾಗಿ ನೋಡುವವನು (4)
10. ಹುಯಿಲಿಡುತ್ತಾ ನೋಡಿರುವ ಮೃತ್ಯುಪತ್ರ! (3)
12. ಯಾವುದಾದರೂ ವಿಷಯದ ಕ್ರಮಬದ್ಧ ನಿರೂಪಣೆ (3)
14. ಕಮಂಡಲದಲ್ಲಿರುವ ನೈದಿಲೆ (3)
15. ಬಾಕಿ ಅಥವಾ ಉಳಿಕೆ (2)

## ಉತ್ತರ

**ಎಡದಿಂದ ಬಲಕ್ಕೆ**
1. ಗೃಹಜ್ಯೋತಿ 3. ಮಧುಕರಿ 5. ರಥೋತ್ಸವ 7. ಸುಪುತ್ರ 10. ಉಪಕರಣ 11. ಕವಲು 13. ಣವಾಡಿಕ 16. ಹದಿನಾಲ್ಕು 17. ಗೃಹಲಕ್ಷ್ಮಿ

**ಮೇಲಿಂದ ಕೆಳಕ್ಕೆ**
2. ಹಗುರ 3. ಮರ 4. ಕದಪು 6. ವರ್ಗೀಕರಣ 7. ಸುಗುಣ 8. ತ್ರಯೋದಶಿ 9. ಸಮೀಕ್ಷಕ 10.ಉಯಿಲು 12. ವರದಿ 14. ಕಮಲ 15.ಶಿಲ್ಕು

**-: ಸೂಚನೆ :-**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Hemanth M Nimbalkar, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com



ವಾಸ್ತು ಸರಿಯಿಲ್ಲ ಎನ್ನುವ ಕಾರಣದಿಂದ ಮುಚ್ಚಿದ್ದ ಮುಖ್ಯಮಂತ್ರಿ ಕಚೇರಿಯ ಪಶ್ಚಿಮ ದ್ವಾರವನ್ನು ತೆರೆಸಿದ ಮುಖ್ಯಮಂತ್ರಿ ಅವರು, ಆ ದ್ವಾರದ ಮೂಲಕವೇ ಓಡಾಡುತ್ತಿರುವುದು.




ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜುಲೈ 22 ರಂದು ರಾಜ್ಯ ಶ್ರೇಷ್ಠ ರಫ್ತು ಪ್ರಶಸ್ತಿಗಳ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಪ್ರಶಸ್ತಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೈಗಾರಿಕಾ ಸಚಿವರಾದ ಎಂ. ಬಿ. ಪಾಟೀಲ್, ಶಾಸಕರಾದ ರಿಜ್ವಾನ್ ಅರ್ಷದ್ ಉಪಸ್ಥಿತರಿದ್ದಾರೆ.

Downloaded From:www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26





Downloaded From:www.kpscvaani.com